# 4
# ಅಂತಿಮ ವಲಸಿಗರು: ‘ಆರ್ಯರು’

ಸ್ಟೆಪ್ ಪ್ರದೇಶದಿಂದ ಬಂದಂತ ಯೋಧ ಮತ್ತು ಪಶುಪಾಲಕರ ಗುಂಪೊಂದು ಮೊದಲು ಯುರೋಪ್ ಮತ್ತು ನಂತರ ದಕ್ಷಿಣ ಏಷ್ಯಾದ ಮೇಲೆ ಪ್ರಾಬಲ್ಯ ಸಾಧಿಸಿ, ಭಾರತಕ್ಕೆ ಅದರ ಅತಿ ದೊಡ್ಡದಾದಂತ ಭಾಷಾ ಕುಟುಂಬವನ್ನು, ಹೊಸ ಧಾರ್ಮಿಕ ಪದ್ಧತಿಗಳನ್ನು ಮತ್ತು ಹರಪ್ಪಾದ ಸಂಪ್ರದಾಯಗಳು ಹಾಗೂ ಸ್ಟೆಪ್ ಹುಲ್ಲುಗಾವಲಿನ ಆಚರಣೆಗಳನ್ನು ಮೇಳೈಸಿದಂತ ಒಂದು ಮಿಶ್ರ ಸಂಸ್ಕೃತಿಯನ್ನು ನೀಡಿದ್ದು ಹೇಗೆ.

ಭಾರತದ ಪ್ರಾಗೈತಿಹಾಸದಲ್ಲಿ ಇದಕ್ಕಿಂತ ಹೆಚ್ಚು ಚರ್ಚಾಸ್ಪದವಾದ ಪ್ರಶ್ನೆಯೇ ಇಲ್ಲ: ‘ತಮ್ಮನ್ನು ಆರ್ಯರು ಎಂದು ಕರೆದುಕೊಳ್ಳುವ ಇಂಡೋ ಯುರೋಪಿಯನ್ ಭಾಷಾ ಭಾಷಿಕರು ಭಾರತದ ಉಪಖಂಡವನ್ನು ‘ಯಾವಾಗ ಮತ್ತು ಹೇಗೆ ತಲುಪಿದರು?’

ಈ ಪ್ರಶ್ನೆಯು ಬಹಳ ಕುತೂಹಲಕಾರಿಯಾಗಿದೆ, ಏಕೆಂದರೆ ‘ಮೊದಲ ನಿವಾಸಿಗಳು ಭಾರತವನ್ನು ಯಾವಾಗ ತಲುಪಿದರು?’ ಅಥವಾ ‘ದ್ರಾವಿಡ ಭಾಷೆ ಮಾತನಾಡುವವರು ಭಾರತವನ್ನು ಯಾವಾಗ ತಲುಪಿದರು?’ ಅಥವಾ ‘ಮುಂಡಾರಿ, ಖಾಸಿ ಅಥವಾ ಮೈತೈ ಭಾಷೆ ಮಾತನಾಡುವವರು ಭಾರತವನ್ನು ಯಾವಾಗ ತಲುಪಿದರು?’ ಎಂಬಂತ ಪ್ರಶ್ನೆಗಳು ಅದೇ ರೀತಿಯ ಮತ್ತು ತೀವ್ರವಾದ ವಿವಾದಕ್ಕೆ ಸಿಲುಕಿಕೊಂಡಿಲ್ಲ. ಭಾರತದ ಮೂಲ ನಿವಾಸಿಗಳು ಆಫ್ರಿಕಾದಿಂದ ಬಂದವರು ಎಂದು ಹೇಳಿದಾಗ; ಮೂಲ-ದ್ರಾವಿಡ ಭಾಷೆಯು ಇರಾನ್‌ನ ಎಲಮಿಟಿಕ್ ಭಾಷೆಗೆ ಸಂಬಂಧಿಸಿದೆ; ಅಥವಾ ಮುಂಡಾರಿ, ಖಾಸಿ ಮತ್ತು ಮೈತೈ ಭಾಷಿಕರು ಪೂರ್ವ ಏಷ್ಯಾದಿಂದ ಬಂದವರು ಎಂದು ಹೇಳಿದಾಗ, ಅದು ಯಾರಲ್ಲೂ ಕೋಪವನ್ನು ಕೆರಳಿಸುವುದಿಲ್ಲ. ಇವೆಲ್ಲವನ್ನು ಲಘುವಾಗಿ ಪರಿಗಣಿಸಲಾಗುತ್ತದೆ ಏಕೆಂದರೆ, ಅದೇನೇ ಇದ್ದರೂ, ಇಂದು ಜಗತ್ತಿನ ಯಾವುದೇ ರಾಷ್ಟ್ರವು ಪುನರಾವರ್ತಿತ ಸಾಮೂಹಿಕ ವಲಸೆಗಳಿಂದ ರೂಪುಗೊಂಡಿರದೆ ಇರುವ ಕಾರಣ. ಸಾಮೂಹಿಕ ವಲಸೆಗಳ ಮೂಲಕ ಯುರೋಪ್ ತನ್ನ ಜನಸಂಖ್ಯಾ ಮಾದರಿಯು ಕನಿಷ್ಠ ಎರಡು ಬಾರಿಯಾದರೂ ತಲೆಕೆಳಗಾಗಿರುವುದನ್ನು ಕಂಡಿದೆ. ವಿಶಾಲವಾದ ಭೌಗೋಳಿಕ ಭೂ ಭಾಗವನ್ನು ಒಳಗೊಂಡಿರುವ ಅಮೆರಿಕಾದ ರಾಷ್ಟ್ರವು ಅವುಗಳ ಜನಸಂಖ್ಯಾ ಮಾದರಿಯನ್ನು ರೂಪಿಸಿದಂತ ಕನಿಷ್ಠ ಮೂರು ಪ್ರಮುಖ ವಲಸೆಗಳನ್ನಾದರೂ ಕಂಡಿವೆ ಮತ್ತು ಇವು ಮೊದಲ ಯುರೋಪಿಯನ್ನರು ಅಲ್ಲಿಗೆ ಕಾಲಿಡುವ ಮೊದಲೇ ಸಂಭವಿಸಿದಂತವುಗಳಾಗಿವೆ. ಪೂರ್ವ ಭಾಗದ ಏಷ್ಯಾ ಕನಿಷ್ಠ ಮೂರು ಪ್ರಮುಖ ವಲಸೆಗಳನ್ನು ಕಂಡಿದ್ದರೆ, ಮಧ್ಯ ಏಷ್ಯಾ ಮತ್ತು ಪಶ್ಚಿಮ ಏಷ್ಯಾ ಭಾಗಗಳಲ್ಲಿ ಹಲವಾರು ಆಕ್ರಮಣಗಳು ಮತ್ತು ವಲಸೆಗಳಾಗಿದ್ದು ಅವುಗಳನ್ನು ಲೆಕ್ಕವಿಟ್ಟುಕೊಳ್ಳುವುದು ಕೂಡ ಕಷ್ಟವಾಗಿದೆ.

ಮತ್ತು ಭಾರತೀಯರು ಇತರ ಪ್ರದೇಶಗಳಿಗೆ ಹೋಗಿ, ವಿಶೇಷವಾಗಿ ಸಾಮಾನ್ಯ ಯುಗದ ಆರಂಭಿಕ ಶತಮಾನಗಳಲ್ಲಿ, ಬೃಹತ್ ಪ್ರಮಾಣದಲ್ಲಿ ಪ್ರಭಾವ ಬೀರಿಲ್ಲವೆಂದೇನಲ್ಲ. ಇಂದಿನ ವಿಯೆಟ್ನಾಂ ಮತ್ತು ಕಾಂಬೋಡಿಯಾದಿಂದ ಹಿಡಿದು ಬರ್ಮಾ, ಥೈಲ್ಯಾಂಡ್ ಮತ್ತು ಇಂಡೋನೇಷ್ಯಾದವರೆಗಿನ ಇಡೀ ಆಗ್ನೇಯ ಏಷ್ಯಾದ ಭಾಗವು ಒಂದು ಕಾಲದಲ್ಲಿ ಭಾರತದ ಸಾಂಸ್ಕೃತಿಕ ಶ್ರೇಷ್ಠತೆಯ ಪ್ರಭಾವಕ್ಕೆ ಒಳಪಟ್ಟಿತ್ತು. ಚೀನಾ ಕೂಡ ಸ್ವಲ್ಪ ಕಾಲದವರೆಗೆ ಭಾರತದ ಪ್ರಭಾವಕ್ಕೆ ಒಳಗಾಗಿತ್ತು. ಕೆಲವೊಮ್ಮೆ ಇದು ಆಕ್ರಮಣ ಮಾಡುವುದನ್ನು ಒಳಗೊಂಡಿತ್ತು, ಆದರೆ ಹೆಚ್ಚಿನ ವೇಳೆ ಅದು ತಮ್ಮ ಧರ್ಮವನ್ನು ಹರಡಲು ಉತ್ಸುಕರಾಗಿದ್ದ ಬೌದ್ಧ ಭಿಕ್ಷುಗಳ ನಿರಂತರ ಪ್ರಯತ್ನವನ್ನು ಒಳಗೊಂಡಿತ್ತು, ಮತ್ತು ಅನೇಕ ವೇಳೆ ಅದು ಲಾಭ ಗಳಿಸಲು ಮತ್ತು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಹಾಗೂ ಉತ್ತೇಜಿಸಲು ಬಯಸಿದ ವ್ಯಾಪಾರಿಗಳಿಗೆ ಸಂಬಂಧಿಸಿತ್ತು. ಪ್ರಪಂಚದಾದ್ಯಂತ 488 ಮಿಲಿಯನ್ ಬೌದ್ಧಧರ್ಮದ ಅನುಯಾಯಿಗಳಿದ್ದು ಅವರಲ್ಲಿ ಒಂದು ಅಲ್ಪ ಸಂಖ್ಯೆಯರಷ್ಟೇ ಇಂದು ಭಾರತದಲ್ಲಿದ್ದಾರೆ ಎಂದರೆ ಅದು ಭಾರತವು ಅದರ ಸಹಜ ಸೀಮೆಗಳಿಂದಾಚೆ ಬೀರಿರುವ ಪ್ರಭಾವಕ್ಕೆ ಸಾಕ್ಷಿ ಎಂದರ್ಥ.

ಹಾಗಿದ್ದಲ್ಲಿ ಇಂಡೋ-ಯುರೋಪಿಯನ್ ಭಾಷೆ ಮಾತನಾಡುವವರ ಆಗಮನದ ಪ್ರಶ್ನೆಗೆ ತೋರುವ ಈ ವಿಶೇಷ ಸೂಕ್ಷ್ಮತೆಗೆ ಕಾರಣವೇನು? ಉತ್ತರ ಸರಳವಾಗಿದೆ: ಭಾರತದ ಸಂಸ್ಕೃತಿಯು 'ಆರ್ಯನ್', 'ಸಂಸ್ಕೃತ' ಅಥವಾ 'ವೈದಿಕ' ಸಂಸ್ಕೃತಿಗೆ ತದ್ರೂಪವಾಗಿದೆ ಅಥವಾ ಸಮನಾರ್ಥಕವಾಗಿದೆ ಎಂಬಂತಿರುವ ಅನುಕ್ತ ಮತ್ತು ಆಧಾರಭೂತವಾದ ಗೃಹೀತ. ಆದ್ದರಿಂದ, ಇಂಡೋ-ಯುರೋಪಿಯನ್ ಭಾಷೆಗಳು ಭಾರತವನ್ನು ಯಾವಾಗ ತಲುಪಿದವು ಎಂದು ಕೇಳುವುದು 'ನಾವು ನಮ್ಮ ಸಂಸ್ಕೃತಿಯನ್ನು ಯಾವಾಗ ಆಮದು ಮಾಡಿಕೊಂಡೆವು?' ಎಂದು ಕೇಳುವುದಕ್ಕೆ ಸಮನಾಗಿರುವಂತೆ ತೋರಬಹುದು.

ಆದರೆ ಇದು ಎರಡು ಕಾರಣಗಳಿಗೆ ಹಾಸ್ಯಾಸ್ಪದವಾಗಿದೆ. ಮೊದಲನೆಯದಾಗಿ, ಭಾರತದ ಸಂಸ್ಕೃತಿಯು 'ಆರ್ಯನ್', 'ಸಂಸ್ಕೃತ' ಅಥವಾ 'ವೈದಿಕ' ಸಂಸ್ಕೃತಿಗೆ ಸಮಾನಾರ್ಥಕವೋ ಅಥವಾ ತದ್ರೂಪವಾದದೋ ಅಲ್ಲ. ಇಂದು ನಮಗೆ ತಿಳಿದಿರುವಂತೆ ಆನನ್ಯವಾದ ಭಾರತದ ನಾಗರಿಕತೆಯ ರಚನೆಗೆ ಕೊಡುಗೆ ನೀಡಿದ ಅಂಶಗಳಲ್ಲಿ 'ಆರ್ಯನ್' ಸಂಸ್ಕೃತಿಯು ಒಂದು ಪ್ರಮುಖ ಅಂಶವಾಗಿತ್ತೇ ವಿನಹ ಯಾವ ಕಾರಣಕ್ಕೂ ಅದೊಂದೇ ಆಗಿರಲಿಲ್ಲ. ಈಗಿರುವಂತ ಭಾರತದ ನಾಗರಿಕತೆಯನ್ನು ರೂಪಿಸಲು ಸಮನಾದ ಕೊಡುಗೆಯನ್ನು ನೀಡಿದ್ದ ಹಲವು ಇತರ ಅಂಶಗಳೂ ಇದ್ದವು. ಎರಡನೆಯದಾಗಿ, ಇಂಡೋ-ಯುರೋಪಿಯನ್ ಭಾಷೆಗಳು ಭಾರತವನ್ನು ಒಂದು ನಿರ್ದಿಷ್ಟ ಐತಿಹಾಸಿಕ ಘಟ್ಟದಲ್ಲಿ ತಲುಪಿದವು ಎಂದು ಹೇಳುವುದು 'ವೇದಗಳು' ಅಥವಾ 'ಸಂಸ್ಕೃತ' ಅಥವಾ 'ಆರ್ಯರ' ಸಂಸ್ಕೃತಿಯನ್ನು ಒಂದು ಸರಕಿನಂತೆ ಒಟ್ಟಾಗಿ ಸೇರಿಸಿ ಆಮದು ಮಾಡಿಕೊಂಡು ಮತ್ತು ನಂತರ ಇಲ್ಲಿ ಅದರ ಮತ್ತೆಜೋಡಿಸಿಕೊಳ್ಳಲಾಯಿತು ಎಂದು ಸೂಚಿಸುವುದು ಒಂದೇ ಅಗಿರಲು ಸಾಧ್ಯವಿಲ್ಲ. 'ಆರ್ಯರ' ಸಂಸ್ಕೃತಿಯು, ಇಂಡೋ-ಯುರೋಪಿಯನ್ ಭಾಷೆಗಳನ್ನು ಭಾರತಕ್ಕೆ ತಂದವರ ಮತ್ತು ಈಗಾಗಲೇ ಸ್ಥಿರವಾಗಿ ನೆಲೆಗೊಂಡಿದ್ದ ಪ್ರದೇಶದ ನಿವಾಸಿಗಳ ನಡುವಿನ ಪರಸ್ಪರಾನುಕ್ರಿಯೆ, ಅಳವಡಿಕೆ ಮತ್ತು ಹೊಂದಾಣಿಕೆಯ ಪರಿಣಾಮವಾಗಿರುವಂತ ಸಾಧ್ಯತೆ ಹೆಚ್ಚಿದೆ.

ಹಾಗಾಗಿ, ಮತ್ತೆ ಮೂಲ ಪ್ರಶ್ನೆಗೆ ಬರುವುದಾದರೆ: ತಮ್ಮನ್ನು ಆರ್ಯರು ಎಂದು ಕರೆದುಕೊಂಡ ಇಂಡೋ-ಯುರೋಪಿಯನ್ ಭಾಷೆ ಮಾತನಾಡುವವರು ಬೇರೆಡೆಯಿಂದ ಬಂದರೇ, ಮತ್ತು ಅವರು ಹಾಗೆ ಬಂದಿದ್ದೆ ಆದಲ್ಲಿ, ಅವರು ಯಾವಾಗ ಬಂದರು?

## ಭಾರತವು ಮೂಲ ಎಂಬುದನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗಿದೆ

ಇತ್ತೀಚಿನವರೆಗೂ, ಇಂಡೋ-ಯುರೋಪಿಯನ್ ಭಾಷೆಗಳ ಪ್ರಪಂಚದಾದ್ಯಂತ ಹರಡುವಿಕೆಯನ್ನು ಸಂಸ್ಕೃತದ ಆರಂಭಿಕ ಆವೃತ್ತಿಯೊಂದಿಗೆ ಜನರು ಭಾರತಕ್ಕೆ ವಲಸೆ ಬರುವ ಬದಲು ಸಂಸ್ಕೃತದ ಆರಂಭಿಕ ಆವೃತ್ತಿಯೊಂದಿಗೆ ಜನರು ಭಾರತದಿಂದ ಹೊರಗೆ ಹೋಗುವುದರಿಂದ ವಿವರಿಸಬಹುದೇ ಎಂಬ ಪ್ರಶ್ನೆಯ ಬಗ್ಗೆ ಚರ್ಚೆಗೆ ಅವಕಾಶವಿತ್ತು. ಆದರೆ ಆನುವಂಶಿಕ ಅಧ್ಯಯನಗಳು, ವಿಶೇಷವಾಗಿ ಪ್ರಾಚೀನ **ಡಿಎನ್ಎ** (DNA) ಆಧಾರಿತವಾದವುಗಳು, ಆ ಚರ್ಚೆಯನ್ನು ಶೀಘ್ರವಾಗಿ ನಿರ್ಣಾಯಕಗೊಳಿಸುತ್ತಿವೆ. ಅವು ಅದನ್ನು ಹೇಗೆ ಮಾಡುತ್ತಿವೆ ಎಂಬುದು ಇಲ್ಲಿದೆ.

ಇಂದು ಸುಮಾರು ಮುಕ್ಕಾಲು ಭಾಗದಷ್ಟು ಭಾರತೀಯರು ಹಿಂದಿ, ಗುಜರಾತಿ, ಬಂಗಾಳಿ, ಪಂಜಾಬಿ ಅಥವಾ ಮರಾಠಿಯಂತಹ ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡುತ್ತಾರೆ. ಅದರಂತೆಯೇ ಪ್ರಪಂಚದ ಸುಮಾರು ಶೇ.40 ರಷ್ಟು ಜನರು ವ್ಯಾಪಕವಾಗಿ ಬಳಸಲಾಗುವಂತ ಇತರ ಇಂಡೋ-ಯುರೋಪಿಯನ್ ಭಾಷೆಗಳಾದ ಸ್ಪ್ಯಾನಿಷ್, ಇಂಗ್ಲಿಷ್, ಫ್ರೆಂಚ್, ಪೋರ್ಚುಗೀಸ್, ಇರಾನಿಯನ್, ರಷ್ಯನ್ ಮತ್ತು ಜರ್ಮನ್ ಭಾಷೆಗಳನ್ನು ಮಾತನಾಡುತ್ತಾರೆ. ನಮ್ಮ ಪೂರ್ವಕ್ಕೆ ಇಂಡೋ-ಯುರೋಪಿಯನ್ ಭಾಷೆಗಳನ್ನು ಮಾತನಾಡುವ ಯಾವುದೇ ದೊಡ್ಡ ಜನಸಂಖ್ಯೆ ಇಲ್ಲದಿರುವುದರಿಂದ ಭಾರತದ ಉಪಖಂಡವು ಇಂಡೋ-ಯುರೋಪಿಯನ್ ಭಾಷಾ ಕುಟುಂಬ ಶ್ರೇಣಿಯ ಪೂರ್ವದ ಅತ್ಯಂತ ಅಂಚಿನ ಭಾಗದ ಗಡಿಯನ್ನು ರೂಪಿಸುತ್ತದೆ. ಹಾಗಾಗಿ ಸಹಜ ಪ್ರಶ್ನೆಯೊಂದು ಇಲ್ಲಿ ಉದ್ಭವಿಸುತ್ತದೆ: ಭಾರತದಲ್ಲಿ ಈ ಭಾಷಾ ಕುಟುಂಬವು ಹೇಗೆ ಪ್ರಧಾನ ಭಾಷೆ ಆಯಿತು? ಇದಕ್ಕೆ ಕೇವಲ ಎರಡು ಸಂಭಾವ್ಯ ಉತ್ತರಗಳಿವೆ: ಒಂದೋ ಅದು ಹಿಂದೆ ಯಾವಗಲೋ

ಹೊರಗಿನಿಂದ ಭಾರತಕ್ಕೆ ಬಂದಿರಬಹುದು ಇಲ್ಲವೇ ಅದು ಅದರ ಪಶ್ಚಿಮಕ್ಕಿರುವಂತ ಪ್ರಪಂಚದ ಉಳಿದ ಭಾಗಗಳಿಗೆ ಭಾರತದಿಂದ ಹೋಗಿರಬಹುದು.

ಎರಡನೆಯ ಸಾಧ್ಯತೆಯನ್ನು ಮೊದಲು ಪರಿಗಣಿಸೋಣ: ಒಂದು ಕಾಲದಲ್ಲಿ ಸಂಸ್ಕೃತ ಅಥವಾ ಮೂಲ-ಸಂಸ್ಕೃತ ಮಾತನಾಡುವ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಪಶ್ಚಿಮದ ಕಡೆ ಹೊರಟು ಅವರು ಹಾಗೂ ಅವರ ವಂಶಸ್ಥರು ಇರಾನ್ ನಿಂದ ಹಿಡಿದು ಮಧ್ಯಏಷ್ಯಾ, ಪಶ್ಚಿಮ ಏಷ್ಯಾ, ಪೂರ್ವ ಭಾಗದ ಯುರೋಪ್ ಮತ್ತು ಪಶ್ಚಿಮ ಭಾಗದ ಯುರೋಪ್‌ವರೆಗಿನ ವಿಶಾಲವಾದಂತ ಪ್ರದೇಶಗಳಲ್ಲಿ ಹರಡಿಕೊಂಡರು, ಹೀಗೆ ಈ ಮಾರ್ಗದುದ್ದಕ್ಕೂ ಇಂಡೋ-ಯುರೋಪಿಯನ್ ಭಾಷೆಗಳ ರೂಪಾಂತರಗಳನ್ನು ಹುಟ್ಟುಹಾಕಿದರು. ಹಾಗಿದ್ದಲ್ಲಿ ಆ ಎಲ್ಲಾ ಪ್ರದೇಶಗಳ ಆನುವಂಶಿಕ ದಾಖಲೆಯಲ್ಲಿ ನೀವು ಏನನ್ನು ನೋಡಬಹುದು ಎಂದು ನಿರೀಕ್ಷಿಸುವಿರಿ? ಗಣನೀಯ ಪ್ರಮಾಣದಲ್ಲಿ ಆಫ್ರಿಕಾದಿಂದ ಬಂದಂತ ವಲಸಿಗರ ವಂಶಸ್ಥರಾದ ಆದ್ಯ ಭಾರತೀಯರ ಆನುವಂಶಿಕ ಗುರುತು. ನಾವು ಹಿಂದಿನ ಅಧ್ಯಾಯಗಳಲ್ಲಿ ನೋಡಿದಂತೆ, ಮೊದಲ ವಲಸಿಗರು ಉಪಖಂಡದಾದ್ಯಂತ ಹರಡಿದ್ದರು ಮತ್ತು ಹರಪ್ಪಾ ನಾಗರಿಕತೆಯನ್ನು ನಿರ್ಮಿಸಿದ ಜನಸಂಖ್ಯೆಯ ಭಾಗವಾಗಿಯೂ ಸಹ ಇದ್ದರು. ಹಾಗಾಗಿ ಇಂಡೋ-ಯುರೋಪಿಯನ್ ಭಾಷೆಗಳ ಹರಡುವಿಕೆಗೆ ಹರಪ್ಪಾ ನಾಗರಿಕತೆಗೆ ಮೊದಲು ಅಥವಾ ನಂತರದ ಯಾವುದೇ ಸಮಯದಲ್ಲಿ ಭಾರತದಿಂದ ಗಮನಾರ್ಹವಾಗಿ ಅದ ವಲಸೆಗಳು ಕಾರಣವಾಗಿದ್ದಿದ್ದರೆ, ನಮಗೆ ಅವರ ಆನುವಂಶಿಕ ಹೆಜ್ಜೆಗುರುತುಗಳು ಮಧ್ಯ ಏಷ್ಯಾದಿಂದ ಹಿಡಿದು ಪಶ್ಚಿಮ ಯುರೋಪಿನವರೆಗೆ ಕಾಣಸಿಗುತ್ತಿತ್ತು. ಅಂತಹ ದೊಡ್ಡದಾದ ಗುರುತೊಂದು ಈ ಪ್ರದೇಶದಾದ್ಯಂತ ಇದೆಯೇ? ಇಲ್ಲ, ಆದರೆ ಇದಕ್ಕೆ ವ್ಯತಿರಿಕ್ತವಾಗಿ, ನಾವು ಅಧ್ಯಾಯ 1 ರಲ್ಲಿ ನೋಡಿದಂತೆ, ಆದ್ಯ ಭಾರತೀಯರ ವಂಶಸ್ಥರಿಗೆ ಪ್ರಪಂಚದ ಬೇರೆಲ್ಲಿಯೂ ಹತ್ತಿರದ ಸಂಬಂಧಿಗಳು ಇಲ್ಲ. ಹಾಗಾಗಿ ಭಾರತದಿಂದ ಹೊರ ಹೋದ ವಲಸೆಯಿಂದ ಇಂಡೋ-ಯುರೋಪಿಯನ್ ಭಾಷೆಗಳು ಪ್ರಪಂಚದಾದ್ಯಂತ ಹರಡಿದವು ಎಂಬ ಕಲ್ಪನೆಯು ಸಮರ್ಥನೀಯವಲ್ಲ.

ಆದರೆ ಈ ಪ್ರತಿಪಾದನೆಗೆ ಒಂದು ಅಪವಾದವಿದೆ - ಅದು ಏನೆಂದರೆ ಮೊದಲು ಜಿಪ್ಸಿಗಳು ಎಂದು ಕರೆಯಲ್ಪಟ್ಟ ಹೆಚ್ಚಾಗಿ ಯುರೋಪ್ ಮತ್ತು ವಿಶಾಲವಾದ ಭೌಗೋಳಿಕ ಭೂ ಭಾಗವನ್ನು ಒಳಗೊಂಡಿರುವಂತ ಅಮೆರಿಕಾದಲ್ಲಿ ವಾಸಿಸುವ ಸಾಪೇಕ್ಷ ಸಣ್ಣ ಅಲೆಮಾರಿ ಜನಾಂಗೀಯ ಗುಂಪಾದ ರೋಮಾ. ಆನುವಂಶಿಕ ಅಧ್ಯಯನಗಳು ಅವರು ಸುಮಾರು 1500 ವರ್ಷಗಳ ಹಿಂದೆ, ಇಂಡೋ-ಯುರೋಪಿಯನ್ ಭಾಷೆಗಳು ಯುರೋಪ್ ಮತ್ತು ಇತರೆಡೆಗಳಲ್ಲಿ ದೃಢವಾಗಿ ನೆಲೆಗೊಂಡ ಬಹುಕಾಲದ ನಂತರ, ವಾಯುವ್ಯ ಭಾರತ (ಪಂಜಾಬ್, ಸಿಂಧ್, ರಾಜಸ್ಥಾನ ಮತ್ತು ಹರಿಯಾಣದ ಪ್ರದೇಶಗಳು) ವನ್ನು ತೊರೆದ ಒಂದೇ ಜನಾಂಗೀಯ ಗುಂಪಿಗೆ ಸೇರಿದವರು ಎಂದು ದೃಢಪಡಿಸಿವೆ. ಹಾಗಾದರೆ ಅವರು ಪಶ್ಚಿಮಕ್ಕೆ ವಲಸೆ ಹೋಗುತ್ತಿದ್ದಂತೆ ಅವರು ಆದ್ಯ ಭಾರತೀಯರ ವಿಶಿಷ್ಟ ವಂಶವಾಹಿ ಗುರುತನ್ನು ಕೊಂಡೊಯ್ದರೇ? ಹೌದು, ಅವರು ಕೊಂಡೊಯ್ದಿದ್ದರು.

‘ರಿಕನ್ಸ್ಟ್ರಕ್ಟಿಂಗ್ ದ ಇಂಡಿಯನ್ ಆರಿಜಿನ್ ಆಂಡ್ ಡಿಸ್ಪರ್ಸಲ್ ಆಫ್ ದ ಯುರೋಪಿಯನ್ ರೋಮಾಃ ಎ ಮೆಟರ್ನಲ್ ಜೆನೆಟಿಕ್ ಪರ್ಸ್ಪೆಕ್ಟಿವ್ (Reconstructing the Indian Origin and Dispersal of the European Roma: A Maternal Genetic Perspective)’ ಎಂಬ ಶೀರ್ಷಿಕೆ ಅಡಿಯಲ್ಲಿ, 2011[1] ರಲ್ಲಿ ಪ್ರಕಟವಾದ ಅಧ್ಯಯನದ ಪ್ರಕಾರ:

> ರೋಮಾಗಳಲ್ಲಿ ಎರಡು ವಿಧದ ವಂಶಾವಳಿಗಳನ್ನು ಪ್ರತ್ಯೇಕಿಸಬಹುದು. ವಿವಿಧ ರೋಮಾ ಗುಂಪುಗಳಲ್ಲಿ ಯುರೋಪಿಯನ್/ಮಧ್ಯಪ್ರಾಚ್ಯ ಹ್ಯಾಪ್ಲೋ ಗುಂಪುಗಳು (haplogroups - ಒಂದೇ ಪುರಾತನ ಪೂರ್ವಜ್ಜರನ್ನು ಹೊಂದಿರುವಂತ ಸಾದೃಶ್ಯ ಆನುವಂಶಿಕ ಗುರುತುಗಳಿರುವ ಒಂದು ಬೃಹತ್ ಕುಟುಂಬ ಅಥವಾ ಗುಂಪು) ಶೇ. 65% ರಿಂದ 94% ರಷ್ಟಿದ್ದರೆ, ಬಾಕಿ ಉಳಿದ ವಂಶಾವಳಿಗಳು ಹ್ಯಾಪ್ಲೋ ಗುಂಪು M ಗೆ ಸೇರಿದ್ದವು. ಈ ಕೊನೆಯ ಹ್ಯಾಪ್ಲೋ ಗುಂಪು ಪೂರ್ವ ಆಫ್ರಿಕಾ ಮತ್ತು ಏಷ್ಯಾದಲ್ಲಿ ಸಾಮಾನ್ಯವಾಗಿದೆಯಾದರೆ ಯುರೋಪಿನಲ್ಲಿ ವಿರಳವಾಗಿ ಕಂಡುಬರುತ್ತದೆ.[2] ಹ್ಯಾಪ್ಲೋ ಗುಂಪು M ನಲ್ಲಿ, ಎರಡು ಪೋರ್ಚುಗೀಸ್ ರೋಮಾ ವ್ಯಕ್ತಿಗಳಲ್ಲಿ ಕಂಡುಬರುವ ಪೂರ್ವ ಆಫ್ರಿಕಾದ M1a1 ಅನುಕ್ರಮವನ್ನು ಹೊರತುಪಡಿಸಿ ಉಳಿದ ಎಲ್ಲಾ ವಂಶಾವಳಿಗಳು ಸ್ಪಷ್ಟ ಏಷ್ಯನ್ ಮೂಲದವುಗಳಾಗಿದ್ದವು. ಏಷ್ಯಾದ ಮುಖ್ಯ ಹ್ಯಾಪ್ಲೋ ಉಪ

ಗುಂಪುಗಳಾಗಿ M5a1, M18 ಮತ್ತು M35b ಕಂಡುಬಂದಿದ್ದು ಅವು ಭಾರತೀಯ ಮೂಲವನ್ನು ಹೊಂದಿವೆ ಎಂದು ವರದಿಯಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಭಾರತದ ಉಪಖಂಡದಿಂದ ಪಶ್ಚಿಮಕ್ಕೆ ಮತ್ತು ಯುರೋಪ್‌ಗೆ ಜನರು ವಲಸೆ ಹೋದಾಗ, ದಕ್ಷಿಣ ಏಷ್ಯಾದ ಮೊದಲ ನಿವಾಸಿಗಳ ವಂಶಸ್ಥರ ಆನುವಂಶಿಕ ಲಕ್ಷಣವು ನಿಶ್ಚಯವಾಗಿ ಅವರೊಂದಿಗೆ ಹೋಯಿತು. ಅದು ಆಳವಾಗಿ ಬೇರೂರಿರುವ 'ಯುರೋಪ್‌ನಲ್ಲಿ ಅಪರೂಪವಾಗಿ ಕಂಡುಬರುವಂತ,' ಮಾತೃ ಸಂಬಂಧಿ ಹ್ಯಾಪ್ಲೋ ಗುಂಪು M. ರೋಮಾಗಳು ಇಂಡೋ-ಯುರೋಪಿಯನ್ ಭಾಷೆಗಳನ್ನು ಯುರೋಪಿಗೆ ಪರಿಚಯಿಸಿರುವುದು ಸಾಧ್ಯವಿರದಿದ್ದ ಕಾರಣ ಮತ್ತು ಯುರೋಪ್ ಅಥವಾ ಮಧ್ಯ ಏಷ್ಯಾದಲ್ಲಿ ದಕ್ಷಿಣ ಏಷ್ಯಾದ ಇತರ ಯಾವುದೇ ಗಮನಾರ್ಹ ಆನುವಂಶಿಕ ಲಕ್ಷಣವು ಇಲ್ಲದಿರುವುದರಿಂದ, ನಾವು ಭಾರತದಿಂದ ಹೊರ ಹೋದಂತ ವಲಸೆಯ ಸಾಧ್ಯತೆಯನ್ನು ತಳ್ಳಿ ಹಾಕಬೇಕಾಗುತ್ತದೆ.

ಇದು ನಮ್ಮನ್ನು ಮುಂದಿನ ಪ್ರಶ್ನೆಗೆ ಕರೆದೊಯ್ಯುತ್ತದೆ: ಭಾರತದ ಉಪಖಂಡದಲ್ಲಿ ಇಂಡೋ-ಯುರೋಪಿಯನ್ ಭಾಷೆಗಳ ಹರಡುವಿಕೆಗೆ ಭಾರತಕ್ಕೆ ಆದಂತ ವಲಸೆಗಳು ಕಾರಣವಾವಾಗಿದ್ದಲ್ಲಿ, ಈ ವಲಸೆಗಳು ಯಾವಾಗ ಸಂಭವಿಸಿದವು ಮತ್ತು ವಲಸಿಗರು ಎಲ್ಲಿಂದ ಬಂದರು?

## 'ಆರ್ಯರ' ಆನುವಂಶಿಕ ಕುರುಹು

ಶತಮಾನಕ್ಕೂ ಹೆಚ್ಚು ಕಾಲ ವಿದ್ವಾಂಸರು ಮತ್ತು ಉದ್ರೇಕಿತ ಬೆಂಬಲಿಗರನ್ನು ಕಾಡಿಸಿರುವ ಈ ಪ್ರಶ್ನೆಯನ್ನು ಈಗ ಹೊಸ ತಂತ್ರೋಪಾಯಗಳಿಂದ ಸಾಧ್ಯವಾದ ಪ್ರಾಚೀನ **ಡಿಎನ್ಎ**ಯನ್ನು ಹೊರತೆಗೆದು ವಿಶ್ಲೇಷಿಸಿದ ಆನುವಂಶಿಕ ಪುರಾವೆಗಳಿಂದ ಇತ್ಯರ್ಥಪಡಿಸಲಾಗುತ್ತಿದ್ದು ಅದು ಜನರು ಹೇಗೆ ವಲಸೆಹೋದರು ಮತ್ತು ಕಾಲಾಂತರದಲ್ಲಿ ಜನಸಂಖ್ಯಾ ಮಾದರಿಯು ಹೇಗೆ ಬದಲಾಯಿತು ಎಂಬುದನ್ನು ನೋಡಲು ನಮಗೆ ಅನುವು ಮಾಡಿಕೊಡುತ್ತದೆ. ಒಂದೇ ಸ್ಥಳದಿಂದ ವಿಭಿನ್ನ ಅವಧಿಗಳಲ್ಲಿ, ಅಥವಾ ಒಂದೇ ಅವಧಿಯಿಂದ ವಿಭಿನ್ನ ಸ್ಥಳಗಳಲ್ಲಿ ಪ್ರಾಚೀನ ಡಿಎನ್ಎಯನ್ನು ವಿಶ್ಲೇಷಿಸುವ ಮೂಲಕ, ತಳಿಶಾಸ್ತ್ರಜ್ಞರು ಯಾವಾಗ ಏನು ಬದಲಾಯಿತು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನೀಡಬಹುದು.

ಆದರೆ ಭಾರತಕ್ಕೆ ಇಂಡೋ-ಯುರೋಪಿಯನ್ ಭಾಷೆ ಮಾತನಾಡುವವರ ವಲಸೆಯ ಕುರಿತಾದ ಪ್ರಶ್ನೆಯನ್ನು ಮತ್ತಷ್ಟು ಶೋಧಿಸುವ ಮೊದಲು, ನಾವು ಒಂದು ಹೆಜ್ಜೆ ಹಿಂದಕ್ಕೆ ತೆಗೆದುಕೊಳ್ಳೋಣ ಮತ್ತು ಭಾರತದಿಂದ ಹೊರಕ್ಕೆ ವಲಸೆ ಹೋದ ಗೃಹೀತವನ್ನು ಚರ್ಚಿಸುವಾಗ ನಾವು ಕೇಳಿದಂತ ಪ್ರಶ್ನೆಗೆ ಸ್ವಲ್ಪ ಭಿನ್ನವಾದ ಪ್ರಶ್ನೆಗೆ ಉತ್ತರವನ್ನು ನೀಡೋಣ: ಇಂಡೋ-ಯುರೋಪಿಯನ್ ಭಾಷೆಗಳು ವ್ಯಾಪಕವಾಗಿ ಯುರೇಷಿಯಾದ ಪ್ರದೇಶದಲ್ಲಿ ಹರಡಿವೆ ಎಂದಾದಲ್ಲಿ, ಈ ಭೌಗೋಳಿಕ ಪ್ರದೇಶದಾದ್ಯಂತ ಒಂದು ಆನುವಂಶಿಕ ಕುರುಹು ಕಾಣಸಿಗುತ್ತದೆಯೇ? ಹೌದು, ಕಾಣಸಿಗುತ್ತದೆ: Y-ವರ್ಣತಂತು (chromosome) ಹ್ಯಾಪ್ಲೋ ಗುಂಪು R1a ಅಥವಾ, ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಅದರ ಉಪವರ್ಗ R1a-M417 ಆಗಿದ್ದು ಅದು ಇಂದು ಜಗತ್ತಿನಲ್ಲಿರುವ ಬಹುತೇಕ ಎಲ್ಲಾ R1a ವಂಶಾವಳಿಗಳಿಗೆ ಕಾರಣವಾಗಿದೆ. ಉಪವರ್ಗ R1a-M417 ಹಂಚಿಕೆಯ ಒಂದು ನಕ್ಷೆಯು ಅದು ಸ್ಕ್ಯಾಂಡಿನೇವಿಯಾದಿಂದ ಹಿಡಿದು ದಕ್ಷಿಣ ಏಷ್ಯಾದವರೆಗೆ ಇರುವುದನ್ನು ಮತ್ತು ಬಹುತೇಕ ಎಲ್ಲಾ ಇಂಡೋ-ಯುರೋಪಿಯನ್ ಭಾಷೆ ಮಾತನಾಡುವ ಭೂಭಾಗವನ್ನು ಒಳಗೊಂಡಿರುವುದಾಗಿ ತೋರಿಸುವುದು.

ನಾವು R1a-M417 ಅನ್ನು ಹೆಚ್ಚು ಸೂಕ್ಷ್ಮವಾಗಿ ಗಮನಿಸಿ ಅದು ಪ್ರಪಂಚದಾದ್ಯಂತ ಹೇಗೆ ವಿತರಿಸಲ್ಪಟ್ಟಿದೆ ಎಂದು ನೋಡಬಹುದೇ? ಹೌದು, ನಾವು ನೋಡಬಹುದು ಮತ್ತು ಅದು ಇದನ್ನು ತೋರಿಸುತ್ತದೆ. ಸುಮಾರು 3800 BCE ಯಲ್ಲಿ, R1a-M417 ಬಹಳ ವಿಭಿನ್ನ ವಿತರಣಾ ಮಾದರಿಗಳೊಂದಿಗೆ R1a-Z282 ಮತ್ತು R1a-Z93 ಎಂಬಂತ ಎರಡು ಗುಂಪುಗಳಾಗಿ ವಿಭಜನೆಯಾಯಿತು. R1a-Z282 ಯುರೋಪಿನಲ್ಲಿ ಮಾತ್ರ ಕಂಡುಬರುತ್ತದೆಯಾದರೆ R1a-Z93 ಮಧ್ಯ ಏಷ್ಯಾ ಮತ್ತು ದಕ್ಷಿಣ

ಏಷ್ಯಾದ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ ಮತ್ತು ಭಾರತದಲ್ಲಿನ ಬಹುತೇಕ ಎಲ್ಲಾ R1a ವಂಶಾವಳಿಗಳಿಗೆ ಕಾರಣವಾಗಿದೆ. ಈ ವ್ಯತ್ಯಾಸವು ಗಮನಾರ್ಹವಾಗಿ ಬಹಳ ದೊಡ್ಡದಾಗಿದೆ. 2014 ರಲ್ಲಿ ಪ್ರಕಟವಾದ ಮತ್ತು ವಿಶ್ವದ ಅತ್ಯಂತ ಪ್ರಸಿದ್ಧ Y-ವರ್ಣತಂತು ಪರಿಣಿತರಾದ ಡಾ. ಪೀಟರ್ ಎ. ಅಂಡರ್ಹಿಲ್ (Peter A. Underhill) ಅವರು ಪ್ರಮುಖ ಲೇಖಕರಾಗಿರುವ 'ದ ಫೈಲೋಜೆನೆಟಿಕ್ ಆಂಡ್ ಜಿಯಾಗ್ರಫಿಕ್ ಸ್ಟ್ರಕ್ಚರ್ ಆಫ್ Y-ಕ್ರೋಮೋಸೋಮ್ ಹ್ಯಾಪ್ಲೋ ಗ್ರೂಪ್ R1a (The Phylogenetic and Geographic Structure of Y-Chromosome Haplogroup R1a)' ಎಂಬ ಶೀರ್ಷಿಕೆಯನ್ನು ಹೊಂದಿರುವ ಅಧ್ಯಯನವು ಹೀಗೆ ಹೇಳುತ್ತದೆ: 'ಯುರೋಪಿಯನ್ R1a-M417 ರ 1693 ಮಾದರಿಗಳಲ್ಲಿ, ಶೇ. 96% ಕ್ಕಿಂತ ಹೆಚ್ಚಿನವು R1a-Z282ಗೆ ಸೇರಿದವಾಗಿದ್ದರೆ 490 ಮಧ್ಯ ಮತ್ತು ದಕ್ಷಿಣ ಏಷ್ಯಾದ R1a ವಂಶಾವಳಿಗಳಲ್ಲಿ ಶೇ. 98.4% R1a-Z93ಗೆ ಸೇರಿದ್ದು, ಅದು ಹಿಂದೆ ಪ್ರಸ್ತಾಪಿಸಲಾದ ಪ್ರವೃತ್ತಿಗೆ ಸುಸಂಬದ್ಧವಾಗಿದೆ.' ಸಂಕ್ಷಿಪ್ತವಾಗಿ ಹೇಳುವುದಾದರೆ, R1a-M417 Y-ವರ್ಣತಂತು ಹ್ಯಾಪ್ಲೋ ಗುಂಪಾಗಿದ್ದು ಅದು ವ್ಯಾಪಕವಾಗಿ ಹಾಗೂ ಅನೇಕ ಮತ್ತು ವೈವಿಧ್ಯಮಯವಾದ ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡುವ ಪ್ರದೇಶಗಳೊಂದಿಗೆ ಅತ್ಯಂತ ನಿಕಟ ಸಂಬಂಧ ಹೊಂದಿದೆ, ಮತ್ತು ಅದರ ಉಪವರ್ಗ R1a-Z93 ಭಾರತದಲ್ಲಿನ ಬಹುತೇಕ ಎಲ್ಲಾ R1a ವಂಶಾವಳಿಗೆ ಕಾರಣವಾಗಿದ್ದರೆ ಅದರ ಸಹೋದರ-ವರ್ಗ R1a-Z282 ಯುರೋಪಿನಲ್ಲಿನ ಬಹುತೇಕ ಎಲ್ಲಾ R1a ವಂಶಾವಳಿಗೆ ಕಾರಣವಾಗಿದೆ.

ಹಾಗಾದರೆ ಜಗತ್ತಿನಲ್ಲಿ R1a-M417 ಮತ್ತು ಅದರ ಉಪವರ್ಗ R1a-Z93 ರ ಅತ್ಯಂತ ಹಳೆಯ ಪುರಾವೆಗಳು ಎಲ್ಲಿ ಕಂಡುಬಂದಿವೆ ಎಂದು ನಮಗೆ ತಿಳಿದಿದೆಯೇ? ಹೌದು, ನಮಗೆ ತಿಳಿದಿದೆ. ಅತ್ಯಂತ ಹಳೆಯ R1a-M417 ಯುಕ್ರೇನ್‌ನಲ್ಲಿ ಕಂಡುಬಂದಿದ್ದು, ಅದು 5000 BCE ಮತ್ತು 3500 BCE ನಡುವಿನ ಕಾಲಮಾನಕ್ಕೆ ಸೇರಿದೆ ಎಂದು 2017 ರಲ್ಲಿ ಪ್ರಕಟವಾದ 'ದ ಜೀನೋಮಿಕ್ ಹಿಸ್ಟರಿ ಆಫ್ ಸೌತೀಸ್ಟ್ರನ್ ಯುರೋಪ್ (The Genomic History of Southeastern Europe)' ಎಂಬ ಲೇಖನದಲ್ಲಿ ವರದಿಯಾಗಿದೆ ಮತ್ತು ಈ ಪುರಾವೆಗಳು ಸುಮಾರು 2800 BCE ಕಾಲಮಾನಕ್ಕೆ ಸೇರಿದಂತೆ ರಷ್ಯಾದ ಸಮರಾದಲ್ಲಿ ಹಾಗೂ ಸುಮಾರು 2500 BCE ಕಾಲಮಾನಕ್ಕೆ ಸೇರಿದಂತೆ ಪೂರ್ವ ಭಾಗದ ಯುರೋಪಿನ ಅನೇಕ ಸ್ಥಳಗಳಲ್ಲಿಯೂ ಸಹ ಪತ್ತೆಯಾಗಿದೆ.

ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ R1a-Z93 ಉಪವರ್ಗವು ಮಧ್ಯ ಏಷ್ಯಾದ ಅನೇಕ ಹುಲ್ಲುಗಾವಲು ಮಾದರಿಗಳಲ್ಲಿ ಕಂಡುಬಂದಿದ್ದು ಅದು ಸುಮಾರು 2500 BCE ರಷ್ಟು ಹಿಂದಿನ ಕಾಲಮಾನಕ್ಕೆ ಸೇರಿದೆ. ವಾಸ್ತವವಾಗಿ, ಮುಂದಿನ ವಿಭಾಗದಲ್ಲಿ ವಿವರವಾಗಿ ಚರ್ಚಿಸಲಾದ ಅಧ್ಯಯನವೊಂದರ ಪ್ರಕಾರ, ಕಂಚಿನ ಯುಗದ ಮಧ್ಯದಿಂದ ಕೊನೆಯವರೆಗೆ (2000 BCE ಮತ್ತು 1400 BCE ನಡುವೆ), R1a-Z93 ಮಧ್ಯ ಏಷ್ಯಾದ ಹುಲ್ಲುಗಾವಲು ಪ್ರದೇಶದಲ್ಲಿ ಶೇ. 68 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಇತ್ತು ಎಂದು ಸೂಚಿಸುತ್ತದೆ. ಆದ್ದರಿಂದ, ಭಾರತದಲ್ಲಿನ R1a-Z93 ಗುಂಪಿನ ಜನಸಂಖ್ಯೆಯು ಯುರೋಷಿಯನ್ ಸ್ಟೆಪ್ ಪ್ರದೇಶದಿಂದೆಲ್ಲೋ ಬಂದಿತು ಎಂಬುದು ಅನಿವಾರ್ಯ ತೀರ್ಮಾನವಾಗಿದೆ.

ಆದರೆ R1a ಮತ್ತು ಅದರ ಉಪಗುಂಪುಗಳು ಭಾರತದಲ್ಲಿ ಇಂಡೋ ಯೂರೋಪಿಯನ್ ಭಾಷೆ ಮಾತನಾಡುವವರಿಗೆ ಸಂಬಂಧಿಸಿವೆ ಎಂದು ನಮಗೆ ತಿಳಿಯುವುದಾದರೂ ಹೇಗೆ? ಇದನ್ನು ಪರಿಶೀಲಿಸಲು ಒಂದು ಸುಲಭ ಮಾರ್ಗವಿದೆ: ಭಾರತದ ಜನಸಂಖ್ಯಾ ಗುಂಪುಗಳಲ್ಲಿ R1a ವಿತರಣೆಯನ್ನು ಗಮನಿಸಿ ಮತ್ತು ಅವು ಸಂಸ್ಕೃತ ಭಾಷೆಯ ಸಾಂಪ್ರದಾಯಿಕ ರಕ್ಷಕರೊಂದಿಗೆ, ಸಾಮಾನ್ಯವಾಗಿ ಮೇಲ್ಜಾತಿಗಳಿಗೆ ಅಥವಾ ನಿರ್ದಿಷ್ಟವಾಗಿ ಬ್ರಾಹ್ಮಣರಿಗೆ ಸಂಬಂಧ ಹೊಂದಿದ್ದಾರೆಯೇ ಎಂದು ನೋಡಿ. ಅನೇಕ ಅಧ್ಯಯನಗಳು ಕೀಳುಮಾಡಿದ ಜಾತಿಗಳಿಗಿಂತ ಮೇಲ್ಜಾತಿಗಳಲ್ಲಿ R1a ನ ಹರಡುವಿಕೆಯು ಹೆಚ್ಚಿನ ಪ್ರಮಾಣದಲ್ಲಿದೆ ಮತ್ತು ಅದು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗಿಂತ ಬ್ರಾಹ್ಮಣರಲ್ಲಿ ಎರಡು ಪಟ್ಟು ಹೆಚ್ಚು ಇದೆ ಎಂದು ಪದೇ ಪದೇ ತೋರಿಸಿವೆ. ಹಾಗಾಗಿ ನಾವು ಇಂಡೋ-ಯುರೋಪಿಯನ್ ಭಾಷೆ-ಮಾತನಾಡುವ ದೇಶಗಳಲ್ಲಿ ಪ್ರಚಲಿತದಲ್ಲಿರುವಂತ ಒಂದು ಆನುವಂಶಿಕ ಕುರುಹನ್ನು ಮತ್ತು ಅದು ಭಾರತದ ಇಂಡೋ-ಯುರೋಪಿಯನ್ ಭಾಷೆಗಳಲ್ಲಿ ಅತ್ಯಂತ ಹಳೆಯ ಪದರವಾದ ಸಂಸ್ಕೃತದ ಸಾಂಪ್ರದಾಯಿಕ ರಕ್ಷಕರಲ್ಲಿ ಗಮನಾರ್ಹವಾಗಿ ಅಧಿಕ ಪ್ರಮಾಣದಲ್ಲಿ ಇರುವುದನ್ನೂ ಸಹ ನೋಡಬಹುದಾಗಿದೆ.

## ಸ್ಟೆಪ್ ಹುಲ್ಲುಗಾವಲಿನಿಂದ ಹಂತ ಹಂತವಾಗಿ ನಡೆದ ವಲಸೆಗಳು

ಇಂಡೋ-ಯುರೋಪಿಯನ್ ಭಾಷೆ ಮಾತನಾಡುವವರು ಭಾರತಕ್ಕೆ ವಲಸೆ ಹೋದರು ಎಂಬಂತ ಚರ್ಚೆಯನ್ನು ಇತ್ಯಾರ್ಥಗೊಳಿಸಿದ ಅಧ್ಯಯನವು ಇತ್ತೀಚೆಗೆ ಮಾರ್ಚ್ 31, 2018 ರಂದು ಬಿಡುಗಡೆಯಾಯಿತು ಮತ್ತು ಅದು 'ದ ಜೀನೋಮಿಕ್ ಫಾರ್ಮೇಷನ್ ಆಫ್ ಸೌತ್ ಅಂಡ್ ಸೆಂಟ್ರಲ್ ಏಷ್ಯಾ (The Genomic (ಎಲ್ಲ ವಂಶವಾಹಿಗಳ ಸಮಷ್ಟಿ ಅಧ್ಯಯನ) Formation of South and Central Asia)' ಎಂಬ ಶೀರ್ಷಿಕೆಯನ್ನು ಹೊಂದಿತ್ತು. ಅದೇ ಮೊದಲ ಬಾರಿಗೆ ದಕ್ಷಿಣ ಏಷ್ಯಾ, ಕಝಾಕ್ಸ್ತಾನ್ ಮತ್ತು ಪೂರ್ವ ಭಾಗದ ಇರಾನಿನ ಪ್ರಾಚೀನ **ಡಿಎನ್ಎ** ಗೆ ಮತ್ತು ಅದರ ಸುಪ್ರಸಿದ್ಧ ಲೇಖಕರ ಸಮೂಹಕ್ಕೆ ಲಭ್ಯಾವಕಾಶತೆಯನ್ನು ಹೊಂದಿದ್ದ ಈ ಆದ್ಯಪ್ರವರ್ತಕ ಕೃತಿಯನ್ನು ಅಧ್ಯಾಯ 2 ರಲ್ಲಿ ವಿವರವಾಗಿ ಚರ್ಚಿಸಲಾಯಿತು (ಪು. 91–97). ಆದ್ದರಿಂದ ನಾವು ಇಲ್ಲಿ ಆ ಅಧ್ಯಯನದ ಸಾರಾಂಶವನ್ನು ನಿರ್ದಿಷ್ಟವಾಗಿ 'ಆರ್ಯರ' ವಲಸೆಯನ್ನು ಚರ್ಚಿಸುವ ಭಾಗಗಳಿಗೆ ಸೀಮಿತಗೊಳಿಸಿಕೊಳ್ಳೋಣ.

2100 BCE ನಂತರ, ಕಝಾಕ್ ಸ್ಟೆಪ್ ಪ್ರದೇಶದಿಂದ ದಕ್ಷಿಣದ ಕಡೆಗೆ ವಾಸ್ತವವಾಗಿ ಪಶುಪಾಲಕರ ವಲಸೆ ಇತ್ತು ಎಂದು ಅಧ್ಯಯನವು ಹೇಳುತ್ತದೆ - ಮೊದಲು ದಕ್ಷಿಣ ಭಾಗದ ಮಧ್ಯ ಏಷ್ಯಾದ ಪ್ರದೇಶಗಳಿಗೆ, ಅಂದರೆ, ಇಂದಿನ ತುರ್ಕಮೆನಿಸ್ತಾನ್, ಉಜ್ಬೇಕಿಸ್ತಾನ್ ಮತ್ತು ತಜಿಕಿಸ್ತಾನ್ ಕಡೆಗೆ; ಮತ್ತು ನಂತರ ಎರಡನೇ ಸಹಸ್ರಮಾನದ BCE ಉದ್ದಕ್ಕೂ (2000 BCE ಯಿಂದ 1000 BCE) ದಕ್ಷಿಣ ಏಷ್ಯಾದ ಕಡೆಗೆ. ಅವರ ಪಯಣದಲ್ಲಿ, ಅವರು ಬ್ಯಾಕ್ಟ್ರಿಯಾ–ಮಾರ್ಜಿಯಾನ ಪುರಾತತ್ವ ಸಮಷ್ಟಿ (Bactria-Margiana Archaeological Complex) (BMAC (**ಬಿಎಮ್ಎಸಿ**), ಆಕ್ಸಸ್ ನದಿಯ ಸುತ್ತ ಕೇಂದ್ರೀಕೃತವಾಗಿದ್ದ ಮತ್ತು ಇಂದಿನ ಉತ್ತರ ಅಫ್ಘಾನಿಸ್ತಾನ, ದಕ್ಷಿಣ ಉಜ್ಬೇಕಿಸ್ತಾನ್ ಮತ್ತು ಪಶ್ಚಿಮ ತಜಿಕಿಸ್ತಾನ್ ಅನ್ನು ಒಳಗೊಂಡಿದ್ದ ಅದು 2300 BCE ಮತ್ತು 1700 BCE ನಡುವೆ ಪ್ರವರ್ಧಮಾನಕ್ಕೆ ಬಂದ ಒಂದು ನಾಗರಿಕತೆಯಾಗಿತ್ತು) ಯ ಮೇಲೆ ಪ್ರಭಾವ ಬೀರಿದರು, ಆದರೆ ಬಹುಮಟ್ಟಿಗೆ ಮತ್ತಷ್ಟು ಕೆಳಗೆ ದಕ್ಷಿಣ ಏಷ್ಯಾದ ಕಡೆಗೆ ಚಲಿಸಲು ಅದನ್ನು ಸುತ್ತುಬಳಸಿಕೊಂಡು ಹೋದರು. ಇಲ್ಲಿ ಅವರು ಅಸ್ತಿತ್ವದಲ್ಲಿದ್ದ ಹರಪ್ಪಾ ನಾಗರಿಕತೆಯ ಜನರೊಂದಿಗೆ ಬೆರೆತರು ಮತ್ತು ಹೀಗೆ ಇಂದು ಭಾರತದ ಜನಸಂಖ್ಯೆಯ ಎರಡು ಪ್ರಮುಖ ಮೂಲಗಳಲ್ಲಿನ ಒಂದರ ಸೃಷ್ಟಿಗೆ ಕಾರಣರಾದರು: ಅದುವೇ ಪೂರ್ವಜ ಉತ್ತರ ಭಾರತೀಯರು ಅಥವಾ ANI (**ಎಎನ್ಐ**), ಮತ್ತು ಇನ್ನೊಂದು ಸುಮಾರು ಅದೇ ವೇಳೆಗೆ ಹರಪ್ಪಾ ನಾಗರಿಕತೆಯ ಜನರು ದಕ್ಷಿಣ ಭಾರತದ ಆದ್ಯ ಭಾರತೀಯರೊಂದಿಗೆ ಬೆರೆಯುವುದರ ಮೂಲಕ ರೂಪುಗೊಂಡ ಪೂರ್ವಜ ದಕ್ಷಿಣ ಭಾರತೀಯರು ಅಥವಾ ASI (**ಎಎಸ್ಐ**).

ಪ್ರಾಚೀನ **ಡಿಎನ್ಎಯಲ್ಲಿ** ವಲಸೆಗಳ ಕುರುಹುಗಳನ್ನು ಪತ್ತೆಹಚ್ಚಿದ ನಂತರ ಅಧ್ಯಯನವು ಈ ತೀರ್ಮಾನಗಳಿಗೆ ಬಂದಿತು. ಉದ್ಧರಿಸುವುದಾದರೆ: 'ನಮ್ಮ ವಿಶ್ಲೇಷಣೆಯು 2100 BCE ಗಿಂತ ಮೊದಲು **ಬಿಎಮ್ಎಸಿ** ಸ್ಥಳಗಳನ್ನು ಸುತ್ತುವರೆದಿರುವ ಗುಂಪುಗಳಲ್ಲಿ ಸ್ಟೆಪ್ ಹುಲ್ಲುಗಾವಲು ಪ್ರದೇಶದ ಪಶುಪಾಲಕರ ಪೂರ್ವಜರ ಇರುವಿಕೆಗೆ ಯಾವುದೇ ಪುರಾವೆಗಳನ್ನು ತೋರಿಸುವುದಿಲ್ಲ, ಆದರೆ 2100 ರಿಂದ 1700 BCE ನಡುವೆ, **ಬಿಎಮ್ಎಸಿ** ಸಮುದಾಯಗಳು ಅಂತಹ ವಂಶಾವಳಿಯನ್ನು ಹೊಂದಿದ್ದ ಜನರಿಂದ ಸುತ್ತುವರೆದಿದ್ದವು ಎಂದು ಸೂಚಿಸುತ್ತದೆ.' ಇದು 2100 BCE ಸುಮಾರಿಗೆ **ಬಿಎಮ್ಎಸಿ** ಪ್ರದೇಶಕ್ಕೆ ಸ್ಟೆಪ್ ಹುಲ್ಲುಗಾವಲು ಪ್ರದೇಶದ ಜನರ ವಲಸೆ ಇತ್ತು ಎಂಬುದನ್ನು ತೋರಿಸುತ್ತದೆ.

ಅಲ್ಲದೆ, ಈ ಹಿಂದೆಯೇ ಹೇಳಿದಂತೆ, **ಬಿಎಮ್ಎಸಿ** ತಾಣಗಳಿಂದ ಪಡೆದ ಪ್ರಾಚೀನ **ಡಿಎನ್ಎ**ಗಳಲ್ಲಿ - ಹಾಗೆಯೇ ಪೂರ್ವ ಇರಾನಿನ ತಾಣವಾದ ಶಹರ್-ಇ ಸೋಖ್ತಾ (Shahr-i-Sokhta) ದಿಂದ ಪಡೆದ ಪ್ರಾಚೀನ **ಡಿಎನ್ಎ**ಗಳಲ್ಲಿ - ಅಧ್ಯಯನವು ಪ್ರಮುಖ ಪರಿಣಾಮಗಳನ್ನು ಹೊಂದಿದ್ದ ಕೆಲವು ಆಶ್ಚರ್ಯಕರ ವಿಷಯಗಳನ್ನು ಕಂಡುಕೊಂಡಿತು: ಅನನ್ಯವಾದ ಪೂರ್ವಜರ ವಂಶಾವಳಿಯನ್ನು ಹೊಂದಿದ್ದ, 3100 BCE ಮತ್ತು 2200 BCE ನಡುವಿನ ಕಾಲಮಾನಕ್ಕೆ ಸೇರಿದಂತ ಮೂರು ಬಹಿಷ್ಠ (outlier) ವ್ಯಕ್ತಿಗಳು. ಅದೇ ಸ್ಥಳಗಳಿಂದ ಪಡೆದ ಇತರ ಪ್ರಾಚೀನ **ಡಿಎನ್ಎ** ಮಾದರಿಗಳಿಗಿಂತ ಭಿನ್ನವಾಗಿ, ಇವು ಝಾಗ್ರೋಸ್ ಪ್ರದೇಶದ ಕೃಷಿಕರ ವಂಶಾವಳಿಯ ಜೊತೆಗೆ, ಆದ್ಯ ಭಾರತೀಯರ ವಂಶಾವಳಿಯ ಶೇಕಡಾ 14 ರಿಂದ 42 ರಷ್ಟು ಪ್ರಮಾಣದ ವಂಶಾವಳಿಯನ್ನು ಹೊಂದಿದ್ದವು. ಹರಪ್ಪಾ ನಾಗರಿಕತೆಯು **ಬಿಎಮ್ಎಸಿ** ಮತ್ತು ಶಹರ್-ಇ-ಸೋಖ್ತಾ ಎರಡರೊಂದಿಗೂ

ಸಂಪರ್ಕವನ್ನು ಹೊಂದಿತ್ತು ಎಂದು ತಿಳಿದಿತ್ತು, ಮತ್ತು ಆದ್ದರಿಂದ ಈ ಅಧ್ಯಯನವು ಬಹಿಷ್ಠ ವ್ಯಕ್ತಿಗಳು ಅಲ್ಲಿಂದ ಇತ್ತೀಚೆಗೆ ವಲಸೆ ಬಂದವರು ಎಂಬ ತೀರ್ಮಾನಕ್ಕೆ ಬಂದಿತು. ಈ ವ್ಯಕ್ತಿಗಳು, ತಮ್ಮ ಸುತ್ತಮುತ್ತಲಿನ ಇತರರಂತೆ, ಯಾವುದೇ ಸ್ಟೆಪ್ ಹುಲ್ಲುಗಾವಲಿಗೆ ಸಂಬಂಧಿಸಿದ ವಂಶಾವಳಿಯನ್ನು ಹೊಂದಿರಲಿಲ್ಲ. ಸ್ಟೆಪ್ ಹುಲ್ಲುಗಾವಲಿನ ಪಶುಪಾಲಕರು ಕ್ರಿ.ಪೂ 2100 ರ ಸುಮಾರಿಗೆ ದಕ್ಷಿಣದ ಕಡೆಗೆ ವಲಸೆ ಹೋಗಲು ಪ್ರಾರಂಭಿಸಿದರು ಎಂಬ ದೃಷ್ಟಿಕೋನಕ್ಕೆ ಇದು ಹೊಂದಿಕೊಳ್ಳುತ್ತದೆ.

ಆದರೆ ಇದು ಇನ್ನೂ ನಿರ್ಣಾಯಕವಾಗಿರಲಿಲ್ಲ. ವಿಜ್ಞಾನಿಗಳು ಪಾಕಿಸ್ತಾನದ ಸ್ವಾಟ್ ಕಣಿವೆಯಿಂದ ಪ್ರಾಚೀನ **ಡಿಎನ್ಎ**ಯ ಮಾಹಿತಿಗೂ ಸಹ ಲಭ್ಯಾವಕಾಶತೆ ಹೊಂದಿದ್ದು ಅದು ಶಹರ್-ಇ-ಸೋಖ್ತಾ ಮತ್ತು **ಬಿಎಮ್ಎಸಿ** ಮಾದರಿಗಳಿಗಿಂತ ಸಾವಿರ ವರ್ಷಗಳಿಗಿಂತಲೂ ಹೆಚ್ಚು ನಂತರದ 1200 BCE ಮತ್ತು 1 CE ರ ನಡುವಿನ ಕಾಲದ್ದಾಗಿತ್ತು. ಸ್ವಾಟ್ ಕಣಿವೆಯ ಮಾದರಿಗಳು ಶಹರ್-ಇ-ಸೋಖ್ತಾ ಮತ್ತು **ಬಿಎಮ್ಎಸಿ** ಯ ಆ ಮೂರು ಬಹಿಷ್ಠ ವ್ಯಕ್ತಿಗಳ ಮಾದರಿಗಳಿಗೆ ತಳೀಯವಾಗಿ ಬಹಳಷ್ಟು ಹೋಲುತ್ತಿದ್ದವು ಮತ್ತು ಅವರಂತೆಯೇ ಆದ್ಯ ಭಾರತೀಯರು ಮತ್ತು ಜ಼ಾಗ್ರೋಸ್ ಕೃಷಿಕರ ವಂಶಾವಳಿಯನ್ನು ಹೊಂದಿದ್ದವು. ಆದರೆ ಇಲ್ಲಿ ಒಂದು ನಿರ್ಣಾಯಕ ಮತ್ತು ಗಮನಾರ್ಹವಾದ ವ್ಯತ್ಯಾಸವಿತ್ತು: ಅವರು ಸುಮಾರು ಶೇಕಡಾ 22 ರಷ್ಟು ಸ್ಟೆಪ್ ಹುಲ್ಲುಗಾವಲಿನ ವಂಶಾವಳಿಯನ್ನೂ ಸಹ ಹೊಂದಿದ್ದರು. ಅಧ್ಯಯನವು ಹೀಗೆ ಹೇಳುತ್ತದೆ: 'ಇದು ಎರಡನೇ ಸಹಸ್ರಮಾನ BCE ಯಲ್ಲಿ ಸ್ಟೆಪ್ ಹುಲ್ಲುಗಾವಲಿನ ವಂಶಾವಳಿಯು ದಕ್ಷಿಣ ಏಷ್ಯಾದ ಗುಂಪುಗಳೊಂದಿಗೆ ಸಂಯೋಜನೆಯಾಗಿದೆ ಎಂಬುದಕ್ಕೆ ನೇರ ಪುರಾವೆಗಳನ್ನು ಒದಗಿಸುತ್ತದೆ, ಮತ್ತು ಈ ಸಮಯದಲ್ಲಿ ಟುರಾನ್ ಪ್ರದೇಶದ ಮೂಲಕ ಸ್ಟೆಪ್ ಗುಂಪುಗಳ ದಕ್ಷಿಣದ ಕಡೆಗಿನ ವಿಸ್ತರಣೆಗಳ ಕುರಿತಿರುವ ಪುರಾವೆಗಳೊಂದಿಗೂ ಸಹ ಹೊಂದಿಕೆಯಾಗುತ್ತದೆ.'

ಯುರೋಪ್ ಮತ್ತು ಏಷ್ಯಾದಲ್ಲಿ ಇಂದು ಇಂಡೋ-ಯುರೋಪಿಯನ್ ಭಾಷೆಗಳನ್ನು ಮಾತನಾಡುವ ಬಹುಪಾಲು ಜನರು ಯಾಮ್ನಾಯ ಎಂದು ಕರೆಯಲ್ಪಡುವ ಸ್ಟೆಪ್ ಹುಲ್ಲುಗಾವಲಿನ ಪಶುಪಾಲಕರಿಗೆ ಸಂಬಂಧಿಸಿದ ವಂಶಾವಳಿಯನ್ನು ಹೊಂದಿದ್ದಾರೆ ಎಂಬುದನ್ನು ಅಧ್ಯಯನವು ಆನಂತರ ಗಮನಿಸುತ್ತದೆ (ಮುಂದಿನ ವಿಭಾಗದಲ್ಲಿ ಯಾಮ್ನಾಯರ ಕುರಿತು ಇನ್ನಷ್ಟು ವಿವರಗಳಿವೆ). ಇದು ಯಾಮ್ನಾಯದವರು ಅಂತ್ಯದ ಮೂಲ-ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡುತ್ತಿದ್ದರು ಮತ್ತು ಅವರು ಇಂಡೋ-ಯುರೋಪಿಯನ್ ಭಾಷೆಗಳನ್ನು ಯುರೋಪ್ ಮತ್ತು ಏಷ್ಯಾ ಎರಡಕ್ಕೂ ಹರಡಿದರು ಎಂಬ ದೀರ್ಘಕಾಲದಿಂದ ಚಾಲ್ತಿಯಲ್ಲಿರುವ ವಾದಕ್ಕೆ ಅನುಗುಣವಾಗಿದೆ. ಹಿಂದಿನ ಆನುವಂಶಿಕ ಅಧ್ಯಯನಗಳು 3000 BCE ಯಿಂದ ಆರಂಭಗೊಂಡು ಯುರೋಪಿಗೆ ಯಾಮ್ನಾಯದವರ ಪಶ್ಚಿಮದ ಕಡೆಗಿನ ಚಲನೆಯನ್ನು ದಾಖಲಿಸಿದ್ದವಾದರೂ ಈ ಅಧ್ಯಯನ ಬಿಡುಗಡೆಯಾಗುವವರೆಗೂ ದಕ್ಷಿಣ ಏಷ್ಯಾಗೆ ಸ್ಟೆಪ್ ಹುಲ್ಲುಗಾವಲಿನ ವಂಶಾವಳಿಯು ಹರಡಿದ ರೀತಿಯ ಕುರಿತು ಯಾವುದೇ ಪ್ರಾಚೀನ **ಡಿಎನ್ಎ**ಯ ನೇರ ಪುರಾವೆಗಳು ಇರಲಿಲ್ಲ. ಈ ಅಧ್ಯಯನದ ಲೇಖಕರು ಎರಡನೇ ಸಹಸ್ರಮಾನದ BCE ಯಲ್ಲಿ ದಕ್ಷಿಣದ ಕಡೆಗೆ ದೊಡ್ಡ ಪ್ರಮಾಣದಲ್ಲಿ ಆದಂತ ಸ್ಟೆಪ್ ಪ್ರದೇಶದ ಗುಂಪುಗಳ ವಲಸೆ ಕುರಿತಂತೆ ಅವರು ಮಾಡಿರುವ ದಾಖಲಾತಿಯು ಈಗ ಈ ಕಾಣೆಯಾದ ಪುರಾವೆಯನ್ನು ಒದಗಿಸುತ್ತದೆ ಎಂದು ನಂಬುತ್ತಾರೆ.


ಇನ್ನೂ ಹೆಚ್ಚಿನ ವಿಷಯಗಳಿವೆ. ಇಂದಿನ ಭಾರತದ ಜನಸಂಖ್ಯೆಯು **ಎಎನ್ಐ** [ಹರಪ್ಪಾದವರು (ಆದ್ಯ ಭಾರತೀಯರು + ಜ಼ಾಗ್ರೋಸ್ ರೈತರು) + ಸ್ಟೆಪ್ ಹುಲ್ಲುಗಾವಲಿನ ಪಶುಪಾಲಕರು] ಮತ್ತು **ಎಎಸ್ಐ** (ಹರಪ್ಪಾದವರು + ಆದ್ಯ ಭಾರತೀಯರು) ನಡುವಿನ ಬೆರೆಯುವಿಕೆಯಿಂದ ಆದ ಫಲವೆಂದು ನಾವು ಹೇಳಿದ್ದು ನೆನಪಿದೆಯೇ? ತಳಿಶಾಸ್ತ್ರಜ್ಞರು ದಕ್ಷಿಣ ಏಷ್ಯಾದಲ್ಲಿನ ಇಂದಿನ 140 ಜನಸಂಖ್ಯಾ ಗುಂಪುಗಳು **ಎಎನ್ಐ – ಎಎಸ್ಐ** ಮಿಶ್ರಣ ಮಾದರಿಗೆ ಹೊಂದಿಕೆ ಆಗುತ್ತದೆಯೇ ಇಲ್ಲವೇ ಎಂದು ಪರೀಕ್ಷಿಸಿದಾಗ, ಹತ್ತು ಗುಂಪುಗಳು ಎದ್ದು ಕಾಣಿದವು - ಅವುಗಳ ಪ್ರತಿಯೊಂದರ ಹೊಂದಾಣಿಕೆಯ ಮಟ್ಟವು ಕಳಪೆಯಾಗಿದ್ದವು, ಏಕೆಂದರೆ ಅವು ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಸ್ಟೆಪ್ ಪ್ರದೇಶದ ವಂಶಾವಳಿಯನ್ನು ಹೊಂದಿದ್ದವು. ಗಮನಾರ್ಹವಾಗಿ ಹೆಚ್ಚಿನ ಮಟ್ಟದ ಸ್ಟೆಪ್ ವಂಶಾವಳಿಯನ್ನು ಹೊಂದಿದ್ದಂತ ಅತ್ಯಂತ ಪ್ರಬಲ ಕುರುಹುಗಳು ಎರಡು ಗುಂಪುಗಳಲ್ಲಿದ್ದು, ಅವು ಸಂಸ್ಕೃತದಲ್ಲಿ ಬರೆಯಲಾದ ಪಠ್ಯಗಳ ರಕ್ಷಕರಾಗಿ ಕಾರ್ಯನಿರ್ವಹಿಸುವ ನಿರೀಕ್ಷೆ ಇದ್ದಂತ ಸಾಂಪ್ರದಾಯಿಕವಾಗಿ ಪುರೋಹಿತ ಸ್ಥಾನಮಾನವನ್ನು ಹೊಂದಿದ್ದವರದಾಗಿತ್ತು. ಇದಕ್ಕೆ ಕಾರಣವೇನಿರಬಹುದು? ಅಧ್ಯಯನದ ಪ್ರಕಾರ, ದಕ್ಷಿಣ ಏಷ್ಯಾಗೆ ಸ್ಟೆಪ್ ಹುಲ್ಲುಗಾವಲಿನ ಪಶುಪಾಲಕರ ವಲಸೆಯು ಸ್ಟೆಪ್ ಪೂರ್ವಜರ ವಿಭಿನ್ನ ಅನುಪಾತಗಳೊಂದಿಗೆ ವಿಭಿನ್ನ ಗುಂಪುಗಳನ್ನು

ಸೃಷ್ಟಿಸಿರಬಹುದು ಎಂಬುದು ಒಂದು ಸಾಧ್ಯತೆ. ಮತ್ತು ಗಮನಾರ್ಹವಾಗಿ ಹೆಚ್ಚಿನ ಮಟ್ಟದ ಸ್ಟೆಪ್ ಪೂರ್ವಜರ ವಂಶಾವಳಿಯನ್ನು ಹೊಂದಿದ್ದಂತವರು ಆರಂಭಿಕ ವೈದಿಕ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಅಥವಾ ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆಂದು ತೋರುತ್ತದೆ. ಸಗೋತ್ರವಿವಾಹಕ್ಕೆ (ಒಬ್ಬರ ಸ್ವಂತ ಸಮುದಾಯದೊಳಗೆ ಮದುವೆಯಾಗುವುದು) ಸಂಬಂಧಿಸಿದಂತೆ ಕೆಲವು ಜನಸಂಖ್ಯಾ ಗುಂಪುಗಳಲ್ಲಿ ಇದ್ದಂತ ಕಟ್ಟುನಿಟ್ಟಾದ ನಿಯಮಗಳು ಈ ಅಧಿಕ ಸ್ಟೆಪ್ ಹುಲ್ಲುಗಾವಲಿನ ವಂಶಾವಳಿಯು ಇಂದಿಗೂ ಮುಂದುವರೆಯುತ್ತಿರುವುದರಲ್ಲಿ ಪರಿಣಮಿಸಿರಬಹುದು.

## ಯಾಮ್ನಾಯರು ಯಾರು?

ನಮಗೆ ಈಗ ಏನಾಯಿತು ಎಂದು ತಿಳಿದಿರುವುದರಿಂದ, ಯುರೋಪ್ ಮತ್ತು ದಕ್ಷಿಣ ಏಷ್ಯಾಗೆ ವಲಸೆ ಹೋಗಿ ಪ್ರಪಂಚದ ಇಷ್ಟು ದೊಡ್ಡ ಪ್ರದೇಶದಲ್ಲಿ ತಮ್ಮ ಭಾಷೆಯನ್ನು ಹರಡಿ ಹಾಗೂ ಆನುವಂಶಿಕ ಕುರುಹನ್ನು ಬಿಟ್ಟಿರುವಂತ ಈ ಸ್ಟೆಪ್ ಪ್ರದೇಶದ ಜನರು ನಿಖರವಾಗಿ ಯಾರು ಎಂದು ನಾವು ಕೇಳೋಣ. ಸ್ಟೆಪ್ ಎಂಬುದು ಹುಲ್ಲುಗಾವಲುಗಳು, ಪೊದೆಗಳು ಮತ್ತು ಹುಲ್ಲುಗಾಡುಗಳು (savannah) ಇರುವಂತ ವಿಶಾಲ ಪ್ರದೇಶವಾಗಿದ್ದು ಅದು ಮಧ್ಯ ಯುರೋಪಿನಿಂದ ಹಿಡಿದು ಚೀನಾದವರೆಗೆ ಸುಮಾರು 8000 ಕಿಲೋಮೀಟರ್‌ಗಳಷ್ಟು ವಿಸ್ತಾರವಾಗಿ ಹರಡಿರುವಂತ, ಐತಿಹಾಸಿಕವಾಗಿ ವಿರಳ ಜನಸಂಖ್ಯೆಯನ್ನು ಹೊಂದಿದ್ದ ಪ್ರದೇಶ. ಸುಮಾರು 50,000 ರಿಂದ 35,000 ವರ್ಷಗಳ ಹಿಂದೆ ಆಫ್ರಿಕಾದಿಂದ ಬಂದಂತ ವಲಸಿಗರು ಯುರೇಷಿಯಾದ ಬಹುಭಾಗದಲ್ಲಿ ನೆಲೆಸಿದ ನಂತರ, ಅನೇಕವೇಳೆ ದೂರ ಮತ್ತು ಭೌಗೋಳಿಕ ಅಡೆತಡೆಗಳಿಂದ ಪರಸ್ಪರ ಪ್ರತ್ಯೇಕವಾದಂತ ವಿವಿಧ ಪ್ರದೇಶಗಳಲ್ಲಿ ಜನರ ಗುಂಪುಗಳು ನೆಲಸಿದವು ಮತ್ತು ಆದ್ದರಿಂದ ಅವು ಪರಸ್ಪರ ವಿಭಿನ್ನವಾದ ತಳಿಗಳಾಗಿ ಬೆಳೆದವು. ಈ ಸಮಯದಲ್ಲಿ ಸ್ಟೆಪ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರನ್ನು ಇಂದು ಸ್ಟೆಪ್ ಪ್ರದೇಶದ ಪೂರ್ವ ಭಾಗದ ಬೇಟೆಗಾರ-ಸಂಗ್ರಹಕಾರರು (EHG(**ಇಹೆಚ್‌ಜಿ**)-Eastern Hunter-Gatherers) ಮತ್ತು ಸೈಬೀರಿಯನ್ ಪ್ರದೇಶದ ಪ್ರಾಚೀನ ಉತ್ತರ ಭಾಗದ ಯುರೇಷಿಯನ್ನರು (ANE (**ಎಎನ್‌ಇ**)-Ancient North Eurasians) ಎಂದು ವರ್ಗೀಕರಿಸಲಾಗಿದ್ದು ಅವರು ಸುಮಾರು 16,000 ವರ್ಷಗಳ ಹಿಂದೆ ಬೆರಿಂಗ್ ಭೂ ಸೇತುವೆಯ ಮೂಲಕ ಅಮೆರಿಕಾದ ವಿಸ್ತಾರ ಭೂಭಾಗಗಳಿಗೆ ವಲಸೆ ಬಂದ ಜನರಿಗೆ ಸಂಬಂಧ ಹೊಂದಿರುತ್ತಾರೆ.

ಆನಂತರ, ಪಶ್ಚಿಮ ಏಷ್ಯಾವನ್ನು ಸ್ಟೆಪ್ ಪ್ರದೇಶದೊಂದಿಗೆ ಸಂಪರ್ಕವನ್ನು ಕಲ್ಪಿಸುವ ಕ್ಯಾಸ್ಪಿಯನ್ ಸಮುದ್ರ ಮತ್ತು ಕಪ್ಪು ಸಮುದ್ರದ ನಡುವಿನ ಪ್ರದೇಶವಾದ ಕಾಕಸಸ್‌ನಿಂದ ಸ್ಟೆಪ್ ಪ್ರದೇಶಕ್ಕೆ ಕ್ರಿ.ಪೂ 5000 ರ ಸುಮಾರಿಗೆ ಆರಂಭವಾದ ಜನರ ಮಹಾಪೂರದ ಪರಿಣಾಮವಾಗಿ ಹೊಸ ನೆಲಸುನಾಡುಗಳು ರೂಪುಗೊಂಡವು. ಯಾಮ್ನಾಯದವರು ಈ ಮಹಾಪೂರದ ಪರಿಣಾಮವಾಗಿರುತ್ತಾರೆ, ಮತ್ತು ಅವರು ಕಾಕಸಸ್ ಪ್ರದೇಶದ ಮತ್ತು ಸ್ಟೆಪ್ ಪ್ರದೇಶದ ಬೇಟೆಗಾರ-ಸಂಗ್ರಹಕಾರರ ಜನಸಂಖ್ಯೆಯಿಂದ ಸಮನಾಗಿ ವಂಶಾವಳಿಯನ್ನು ಹೊಂದಿರುತ್ತಾರೆ. ಸುಮಾರು ಕ್ರಿ.ಪೂ. 3700 ರ ಹೊತ್ತಿಗೆ, ಕಾಕಸಸ್ ಪ್ರದೇಶವು ಮೈಕೋಪ್ ಸಂಸ್ಕೃತಿಯ ಕೇಂದ್ರವಾಯಿತು ಮತ್ತು ಅದು ಯಾಮ್ನಾಯ ಸಂಸ್ಕೃತಿಯ ಮೇಲೆ ಬಲವಾದ ಪ್ರಭಾವ ಬೀರಿರುವಂತೆ ತೋರುತ್ತದೆ. ಉದಾಹರಣೆಗೆ, ಯಾಮ್ನಾಯ ಸಂಸ್ಕೃತಿಗೆ ಹೆಚ್ಚು ನಿಕಟ ಸಂಬಂಧ ಹೊಂದಿರುವಂತ 'ಕುರ್ಗನ್‌ಗಳನ್ನು' (ಸಮಾಧಿ ಕೋಣೆಯ ಮೇಲೆ ಕಲ್ಲು ಮತ್ತು ಮಣ್ಣನ್ನು ರಾಶಿ ಹಾಕುವ ಮೂಲಕ, ಸಾಮಾನ್ಯವಾಗಿ ಮರದಿಂದ ಮಾಡಲ್ಪಟ್ಟ ಸಮಾಧಿ ದಿಬ್ಬಗಳು) ನಿರ್ಮಿಸುವ ಪದ್ಧತಿಯು ಕಾಕಸಸ್‌ನಲ್ಲಿ ಮೊದಲ ಬಾರಿಗೆ ಕಂಡುಬರುತ್ತದೆ, ಮತ್ತು ಸಾಮಾನ್ಯವಾಗಿ ಅತ್ಯಂತ ಆರಂಭದ ಮೂಲ-ಇಂಡೋ-ಯುರೋಪಿಯನ್ ಭಾಷೆಯು ಯಾಮ್ನಾಯದವರ ಭಾಷೆಯಾಗುವ ಮೊದಲು ಕಾಕಸಸ್ ಪ್ರದೇಶದಲ್ಲಿ ಅದನ್ನು ಮಾತನಾಡುತ್ತಿದ್ದಿರಬಹುದು ಎಂದು ವಾದಿಸಲಾಗುತ್ತದೆ.



ಮೈಕೋಪ್‌ನಂತಹ ನೆರೆಯ ಜನಸಂಖ್ಯೆಯಿಂದ ಯಾಮ್ನಾಯದವರು ಅಳವಡಿಸಿಕೊಂಡ ಮೂರು ತಾಂತ್ರಿಕ ನಾವೀನ್ಯತೆಗಳು ಇತಿಹಾಸದಲ್ಲಿ ಅವರ ಪಾತ್ರವನ್ನು ರೂಪಿಸಿದ್ದವು: ಚಕ್ರ, ಬಂಡಿ ಮತ್ತು ಕುದುರೆ. ಚಕ್ರವನ್ನು ನಿಖರವಾಗಿ ಎಲ್ಲಿ ಕಂಡುಹಿಡಿಯಲಾಯಿತು ಎಂದು ನಮಗೆ ನಿಖರವಾಗಿ ಹೇಳಲು ಸಾಧ್ಯವಾಗಿಲ್ಲ, ಏಕೆಂದರೆ ಅದು ಆವಿಷ್ಕಾರಗೊಂಡ ತಕ್ಷಣವೇ ಅದು  ಕಾಡ್ಗಿಚ್ಚಿನಂತೆ ಯುರೇಷಿಯಾದಾದ್ಯಂತ ಹರಡಿತು. ಬಹುಶಃ ಇದನ್ನು ಒಂದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಆವಿಷ್ಕರಿಸಿರಬಹುದು - ನಾವು ಅಧ್ಯಾಯ 3 ರಲ್ಲಿ ನೋಡಿದಂತೆ, 3000 BCE ಗಿಂತ ಹಿಂದಿನ ಹರಪ್ಪಾ ನಾಗರಿಕತೆಯಲ್ಲಿ ಚಕ್ರದ ಮಣ್ಣಿನ ಮಾದರಿಗಳಿವೆ. ಚಕ್ರ, ಬಂಡಿ ಮತ್ತು ಕುದುರೆಯು ಅವರ ಪ್ರದೇಶದ ಭೌಗೋಳಿಕತೆಯಿಂದಾಗಿ ಯಾಮ್ನಾಯದವರಿಗೆ ವಿಶೇಷವಾಗಿ ಉಪಯುಕ್ತವಾಗಿದ್ದವು. ಅಲ್ಲಿಯ ತನಕ, ಬಹುಪಾಲಿನ ಸ್ಟೆಪ್ ಪ್ರದೇಶದ ಭೂ ಭಾಗಗಳು ವಾಸಯೋಗ್ಯವಾಗಿರಲಿಲ್ಲ, ಏಕೆಂದರೆ ನದಿ ಕಣಿವೆಗಳ ಉದ್ದಗಲಕ್ಕೂ ಇದ್ದಂತ ಭೂ ಪ್ರದೇಶವನ್ನು ಹೊರತುಪಡಿಸಿ, ಮಳೆಗಳ ಕೊರತೆಯು ಅವುಗಳನ್ನು ಕೃಷಿಗೆ ಸೂಕ್ತವಿಲ್ಲದಂತೆ ಮಾಡಿದ್ದವು, ಮತ್ತು ಕುರಿ ಹಾಗೂ ದನಗಳ ದೊಡ್ಡ ಹಿಂಡುಗಳನ್ನು ಇಟ್ಟುಕೊಳ್ಳಲು ಕೆಲವೇ ಕೆಲವಷ್ಟು ನೀರಿನ ಹೊಂಡಗಳು ಇದ್ದವು.

ಆದಾಗ್ಯೂ ಎತ್ತು ಅಥವಾ ಕುದುರೆಗಳಿಂದ ಎಳೆಯಲ್ಪಟ್ಟ ಚಕ್ರ ಬಂಡಿಗಳ ಸಹಾಯದಿಂದ ಯಾಮ್ನಾಯದವರಿಗೆ ನೀರು ಮತ್ತು ಸರಕುಗಳನ್ನು ತಮ್ಮೊಂದಿಗೆ ವಿಶಾಲವಾದ ಸ್ಟೆಪ್ ಹುಲ್ಲುಗಾವಲಿಗೆ ಕೊಂಡೊಯ್ಯಲು ಸಾಧ್ಯವಾಯಿತು. ಈ ಭಾರ ಎಳೆಯುವ ಪ್ರಾಣಿಗಳು ಯಾಮ್ನಾಯದವರಿಗೆ ತಮ್ಮ ಪಶು ಸಂಗೋಪನೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ಭಾರಿ ಪ್ರಮಾಣದಲ್ಲಿ ಉತ್ಪಾದಕತೆಯ ಲಾಭಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಟ್ಟಿರಬೇಕು. ಅಲ್ಲಿಂದ, ಮೈಕೋಪ್‌ನಂತಹ ಸಂಸ್ಕೃತಿಗಳೊಂದಿಗೆ ವ್ಯಾಪಾರ ಮಾಡುವುದನ್ನು ಪ್ರಾರಂಭಿಸಿಕೊಳ್ಳಲು ಅದೊಂದು ಸಣ್ಣ ಹೆಜ್ಜೆಯಾಗಿದ್ದಿರಬಹುದು ಮತ್ತು ತನ್ಮೂಲಕ ಹೆಚ್ಚು ಸಂಪತ್ತು ಮತ್ತು ಪ್ರಭಾವವನ್ನು ಗಳಿಸಿಕೊಂಡಿರಬಹುದು. ಯಾಮ್ನಾಯರ ಜೀವನಕ್ಕೆ ಬಂಡಿಗಳು ಮತ್ತು ಕುದುರೆಗಳು ಅತಿಮುಖ್ಯವಾಗಿದ್ದವು ಎಂಬುದು ಆ ಕಾಲದ ಕುರ್ಗನ್‌ಗಳಲ್ಲಿ ಕಂಡುಬರುವಂತೆ ಅವುಗಳನ್ನು ಅವುಗಳ ಮಾಲೀಕರೊಂದಿಗೆ ಸಮಾಧಿ ಮಾಡಲಾಗಿರುವ ಅಂಶದಿಂದ ಸ್ಪಷ್ಟವಾಗುತ್ತದೆ. ಯಾಮ್ನಾಯರ ಹೊಸ, ಅಲೆಮಾರಿಯ ಜೀವನಶೈಲಿಯು ಸ್ಟೆಪ್ ಪ್ರದೇಶದ ಮೇಲೆ ಎಷ್ಟು ಪ್ರಭಾವ ಬೀರಿತ್ತು ಎಂದರೆ ಆ ಪ್ರದೇಶದಲ್ಲಿನ ಅನೇಕ ನೆಲಸುನಾಡುಗಳು ತೊರೆಯಲ್ಪಟ್ಟವು. ಮತ್ತು ಸ್ವತಃ ಯಾಮ್ನಾಯದವರು ಅವರು ವಲಸೆ ಹೋದ ಕಡೆಯಲ್ಲೆಲ್ಲಾ ಬಿಟ್ಟು ಹೋದಂತ ಶಾಶ್ವತ ರಚನೆಗಳೆಂದರೆ ಅದು ಅವರ ಕುರ್ಗನ್‌ಗಳಾಗಿದ್ದವು. ಕಾಲಾನಂತರದಲ್ಲಿ, ಅವರು ಒಂದೇ ಸ್ಥಳದಲ್ಲಿ ನೆಲೆನಿಂತ

ಸಮುದಾಯಗಳೊಂದಿಗೆ ವ್ಯಾಪಾರ ಮಾಡುತ್ತಿದ್ದ ಕಾರಣ, ಯಾಮ್ನಾಯರು ಸಂಘರ್ಷದ ಜಗತ್ತಿಗೆ ಅತಿಮುಖ್ಯವಾದ ಲೋಹಶಾಸ್ತ್ರದ ಕಲೆಯನ್ನು ಸಹ ಕರಗತ ಮಾಡಿಕೊಂಡರು. ಮತ್ತು ಸಂಘರ್ಷವು ಭುಗಿಲೇಳುವುದರಲ್ಲಿತ್ತು.

ಯಾಮ್ನಾಯರು 3000 BCE ಯ ಸುಮಾರಿಗೆ, ಅವರ ವಂಶಸ್ಥರು ಮತ್ತು ಸಂಬಂಧಿಕರು ದಕ್ಷಿಣ ಏಷ್ಯಾವನ್ನು ತಲುಪುವ ಸಾವಿರ ವರ್ಷಗಳ ಮೊದಲು ಯುರೋಪಿನಲ್ಲಿ ಕಾಣಿಸಿಕೊಂಡರು. ಪುರಾತತ್ತ್ವ ಶಾಸ್ತ್ರದ ದಾಖಲೆಯಲ್ಲಿ, ಯುರೋಪ್ ಪ್ರದೇಶದೊಳಗೆ ಹರಿದ ಈ ಹೊಸ ಮಹಾಪೂರವು ಸುಮಾರು 2900 BCE ರಿಂದ ಸ್ಪಷ್ಟವಾಗಿ ಕಾಣಲು ಪ್ರಾರಂಭಿಸಿದ ಕಾರ್ಡೆಡ್ ವೇರ್ ಎಂಬಂತ ಹೊಸ ಸಂಸ್ಕೃತಿಯಲ್ಲಿ ಅಭಿವ್ಯಕ್ತಗೊಂಡಿತು. 'ಕಾರ್ಡೆಡ್ ವೇರ್' ಎಂಬ ಪದವು ಮಡಿಕೆಗಳ ಮೇಲೆ ತಿರುಚಿದ ಹುರಿ ಹೆಣಿಗೆಯ ಅಚ್ಚೊತ್ತುಗಳನ್ನು ಹೊಂದಿದ್ದ ವಿಶಿಷ್ಟ ಶೈಲಿಯ ಕುಂಬಾರಿಕೆಯನ್ನು ಸೂಚಿಸುತ್ತದೆ, ಮತ್ತು ಈ ಸಂಸ್ಕೃತಿಯು ಸ್ವಿಟ್ಜರ್ಲ್ಯಾಂಡ್ ನಿಂದ ಹಿಡಿದು ಯುರೋಪಿಯನ್ ರಷ್ಯಾ(ಪಶ್ಚಿಮ ಭಾಗದ ರಷ್ಯಾ)ದವರೆಗಿನ ವಿಶಾಲವಾದ ಪ್ರದೇಶವನ್ನು ಒಳಗೊಂಡಿತ್ತು. ಜರ್ಮನಿಯಲ್ಲಿ, ಪ್ರಾಚೀನ **ಡಿಎನ್ಎ** ಅಧ್ಯಯನಗಳು, ಕಾರ್ಡೆಡ್ ವೇರ್ ಮಡಿಕೆಗಳೊಂದಿಗೆ ಸಮಾಧಿ ಮಾಡಲಾದ ಜನರು ತಮ್ಮ ವಂಶಾವಳಿಯ ಸುಮಾರು 75 ಪ್ರತಿಶತದಷ್ಟು ಯಾಮ್ನಾಯ ಸಂಸ್ಕೃತಿಗೆ ಸಂಬಂಧಿಸಿದ ಗುಂಪುಗಳಿಂದ ಪಡೆದಿದ್ದರು ಮತ್ತು ಉಳಿದಿದ್ದನ್ನು ಆ ಪ್ರದೇಶದ ಹಿಂದಿನ ನಿವಾಸಿಗಳಾಗಿದ್ದ ರೈತರಿಂದ ಪಡೆದಿದ್ದರು ಎಂದು ತೋರಿಸಿದವು. ಬೆಲ್ ಬೀಕರ್ ಸಂಸ್ಕೃತಿಯು ಯಾಮ್ನಾಯ ಸಂಸ್ಕೃತಿಯಿಂದ ಹುಟ್ಟಿಕೊಳ್ಳದಿದ್ದರೂ, ಅದು ಯುರೋಪ್‌ನ ಹೆಚ್ಚಿನ ಭಾಗಗಳಿಗೆ ಹರಡಲು ಒಳಕ್ಕೆ ವಲಸೆ ಬರುತ್ತಿದ್ದ ಯಾಮ್ನಾಯರು ಸಹ ಕಾರಣರಾಗಿದ್ದರು. (ಬೆಲ್ ಬೀಕರ್ ಎಂಬುದು ತಲೆಕೆಳಗಾದ ಗಂಟೆಯ ಆಕಾರದ ಪಾತ್ರೆಗಳನ್ನು ಒಳಗೊಂಡಂತೆ ವಿಶಿಷ್ಟವಾದ ಕುಂಬಾರಿಕೆಯ ಶೈಲಿಯನ್ನು ಸೂಚಿಸುತ್ತದೆ.)

ಬ್ರಿಟನ್‌ನಲ್ಲಿ, ಬೆಲ್ ಬೀಕರ್ ಸಂಸ್ಕೃತಿಯೊಂದಿಗೆ ವಲಸೆ ಬರುತ್ತಿದ್ದ ಇಂಡೋ-ಯುರೋಪಿಯನ್ ಭಾಷೆ ಮಾತನಾಡುವ ಜನರು, ಸ್ಟೋನ್ಹೆಂಜ್ (Stonehenge - ಪ್ರಾಗೈತಿಹಾಸಿಕ ಮಹಾಶಿಲಾ ಸ್ಮಾರಕಗಳು) ಅನ್ನು ನಿರ್ಮಿಸಿದಂತ ದ್ವೀಪದ ಹಿಂದಿನ ಜನರ ಜನಸಂಖ್ಯಾ ಸ್ವರೂಪದಲ್ಲಿ ಹೆಚ್ಚು ಕಡಮೆ ಬದಲಾವಣೆ ತಂದರು. ಡೇವಿಡ್ ರೈಕ್ '*ಹೂ ವಿ ಆರ್ ಆಂಡ್ ಹೌ ವಿ ಗಾಟ್ ಹಿಯರ್ (Who We Are and How We Got Here)*' ಎಂಬ ತಮ್ಮ ಕೃತಿಯಲ್ಲಿ 'ಬೀಕರ್ ಸಂಸ್ಕೃತಿಯ ಅವಧಿಯ ನಂತರದ ಕಂಚಿನ ಯುಗಕ್ಕೆ ಸೇರಿದಂತ ಬ್ರಿಟಿಷ್ ಮತ್ತು ಐರಿಶ್ ಅಸ್ಥಿಪಂಜರಗಳು ಸುಮಾರು ಕೇವಲ ಪ್ರತಿಶತ 10 ರಷ್ಟೇ ಈ ದ್ವೀಪಗಳ ಮೊದಲ ರೈತ ಜನರ ವಂಶಾವಳಿಯನ್ನು ಹೊಂದಿದ್ದು, ಉಳಿದ ಶೇ. 90 ರಷ್ಟು ವಂಶಾವಳಿಯನ್ನು ನೆದರ್ಲ್ಯಾಂಡ್ಸ್‌ನಲ್ಲಿ ಬೆಲ್ ಬೀಕರ್ ಸಂಸ್ಕೃತಿಯೊಂದಿಗೆ ಸಂಬಂಧ ಹೊಂದಿದಂತ ಆ ಜನರಿಂದ ಪಡೆದಿದ್ದವು. ಇದು ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಯಾಗಿದ್ದು ಅದು ಕಾರ್ಡೆಡ್ ವೇರ್ ಸಂಸ್ಕೃತಿಯ ಹರಡುವಿಕೆಯ ಜೊತೆಜೊತೆಗೆ ಆದಂತ ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಯಷ್ಟೇ ಗಮನಾರ್ಹವಾಗಿತ್ತು' ಎಂದು ಬರೆಯುತ್ತಾರೆ.

1950 ರ ದಶಕದಲ್ಲಿ ಕುರ್ಗನ್ ಗಳಿಗೆ ಸಂಬಂಧಿಸಿದಂತಿದ್ದ ಅನುಮಾನಿತ ಸಿದ್ಧಾಂತ (ಅದರ ಪ್ರಕಾರ ಮೂಲ-ಇಂಡೋ-ಯುರೋಪಿಯನ್ ಭಾಷೆಯನ್ನು ಸ್ಟೆಪ್ ಪ್ರದೇಶದಲ್ಲಿದ್ದ ಕುರ್ಗನ್ ಸಮಾಧಿ ಸಂಸ್ಕೃತಿಗೆ ಸೇರಿದ ಯಾಮ್ನಾಯರು ಮಾತನಾಡುತ್ತಿದ್ದರು ಎಂದು ಹೇಳುತ್ತದೆ) ವನ್ನು ಮೊದಲು ಪ್ರಸ್ತಾಪಿಸಿದ ಲಿಥುವೇನಿಯನ್-ಅಮೇರಿಕನ್ ಪುರಾತತ್ವಶಾಸ್ತ್ರಜ್ಞ ಮರಿಯಾ ಗಿಂಬುಟಾಸ್ (Maria Gimbutas), ಯುರೋಪಿಗೆ ಯಾಮ್ನಾಯ ಜನರ ಮಹಾಪೂರವು ಪ್ರಮುಖ ಸಾಂಸ್ಕೃತಿಕ ಬದಲಾವಣೆಗಳನ್ನು ತಂದಿತು ಎಂದು ಭಾವಿಸಿದರು. ಅವರು 'ಇಂಡೋ-ಯುರೋಪಿಯನೀಕರಣ ಪ್ರಕ್ರಿಯೆಯು ಸಾಂಸ್ಕೃತಿಕ ಪರಿವರ್ತನೆಯಾಗಿತ್ತೆ ವಿನಹಃ ಭೌತಿಕದ್ದಾಗಿರಲಿಲ್ಲ. ದೇಶೀಯ ಗುಂಪುಗಳ ಮೇಲೆ ಹೊಸ ಆಡಳಿತ ವ್ಯವಸ್ಥೆ, ಭಾಷೆ ಮತ್ತು ಧರ್ಮವನ್ನು ಯಶಸ್ವಿಯಾಗಿ ಹೇರಿತು ಎಂಬ ಅರ್ಥದಲ್ಲಿ ಅದನ್ನು ಸೇನಾ ವಿಜಯವೆಂದು ಅರ್ಥೈಸಿಕೊಳ್ಳಬೇಕು' ಎಂದು ಹೇಳಿದರು.

ಗಿಂಬುಟಾಸ್ ಅವರು ಮೆಡಿಟರೇನಿಯನ್ ಮಾತೃ ದೇವತೆಯ ಆರಾಧನಾ-ಪದ್ಧತಿಯಿಂದ ಪಿತೃಪ್ರಧಾನ ಸಮಾಜಕ್ಕೆ ಮತ್ತು ಯುದ್ಧೋಚಿತ ಗುಡುಗಿನ ದೈವಗಳ (ಝೂಸ್, ಡಿಯಸ್) ಆರಾಧನೆಗೆ ಆದ ಬದಲಾವಣೆಯ ಸ್ವರೂಪವನ್ನು ಹಿಂಸಾತ್ಮಕವೆಂದು ನಿರೂಪಿಸಿದರು. ಕುರ್ಗನ್ ಸಂಸ್ಕೃತಿಗೆ ಸಂಬಂಧಿಸಿದ ಆಕೆಯ ಅನುಮಾನಿತ ಸಿದ್ಧಾಂತವು ಹೆಚ್ಚು ಕಡಮೆ ಬಹು ಕಾಲದಿಂದ

ಸ್ವೀಕಾರಾರ್ಹವಾಗಿ ಉಳಿದಿದೆಯಾದರೂ ಸಹ, ಅದು ಹೆಚ್ಚು ಕ್ರಮೇಣ ಮತ್ತು ಶಾಂತಿಯುತವಾಗಿತ್ತು ಎಂದು ನಂಬಿದ್ದ ಅನೇಕರು ಬದಲಾವಣೆಯನ್ನು ಅವರು ಅಂತಹ ಬೋಳಾದ ರೀತಿಯಲ್ಲಿ ನಿರೂಪಿಸಿರುವುದನ್ನು ವಿರೋಧಿಸುತ್ತಾರೆ. ಅವರ ಅಭಿಪ್ರಾಯದಲ್ಲಿ, ವಲಸೆಗಳು ಸಂಘಟಿತ ಸೇನಾ ಕಾರ್ಯಾಚರಣೆಯಾಗಿರಲಿಲ್ಲ, ಬದಲಿಗೆ ಅವು ಹಲವು ತಲೆಮಾರುಗಳಲ್ಲಿ, ಅನೇಕ ವಿಭಿನ್ನ ಬುಡಕಟ್ಟು ಜನಾಂಗಗಳ ಮತ್ತು ಸಂಸ್ಕೃತಿಗಳ ಕಾಲಕ್ರಮೇಣವಾದ ವಿಸ್ತರಣೆಯಾಗಿತ್ತು. ಗಿಂಬುಟಾಸ್ ಅವರನ್ನು ಕುರಿತು ಮಾಡಿದ ಟೀಕೆಯಲ್ಲಿ ಹುರುಳು ಇದೆಯಾದರೂ ಹೊಸ ವಲಸಿಗರು ರಚಿಸಿದ ಸಂಸ್ಕೃತಿಗಳಲ್ಲಿ ಗಮನಿಸಬಹುದಾದಂತ ಹಿಂಸೆಯ ವೈಭವೀಕರಣ ಮತ್ತು ಪುರುಷ-ಕೇಂದ್ರಿತ ಮೌಲ್ಯವಿದೆ - ಅವರ ಸಮಾಧಿ ದಿಬ್ಬಗಳಲ್ಲಿನ ಹೆಚ್ಚಿನ ಅವಶೇಷಗಳು ಪುರುಷರದ್ದಾಗಿದ್ದವು ಮತ್ತು ಅನೇಕವೇಳೆ ಅವು ಅಸಾಧರಣ ಗಾಯಗಳನ್ನು ಹೊಂದಿದ್ದವು, ಮತ್ತು ಅನೇಕ ಸಮಾಧಿಗಳು ಅದ್ಭುತವಾದ ಯುದ್ಧಕೊಡಲಿಗಳನ್ನು ಹೊಂದಿದ್ದವು.

ಯಾಮ್ನಾಯ ಸಂಸ್ಕೃತಿಯ ವಿಸ್ತರಣೆಗಳು ಪುರುಷ-ಕೇಂದ್ರಿತದ್ದಾಗಿದ್ದವು ಎಂಬುದಕ್ಕೆ ಆನುವಂಶಿಕ ಪುರಾವೆಗಳೂ ಇವೆ. ಡೇವಿಡ್ ರೈಕ್ ಪ್ರಕಾರ:

> ಯಾಮ್ನಾಯ ಜನರು ಹೊಂದಿದ್ದ ಸುಮಾರು ಬಹುತೇಕ ಎಲ್ಲ Y-ವರ್ಣತಂತುಗಳು ಕೆಲವೇ ಕೆಲವು ವಿಧಗಳಾಗಿದ್ದು ಅವು ಸೀಮಿತ ಸಂಖ್ಯೆಯ ಪುರುಷರು ತಮ್ಮ ವಂಶವಾಹಿಗಳನ್ನು ಹರಡುವಲ್ಲಿ ಅಸಾಧಾರಣವಾಗಿ ಯಶಸ್ವಿಯಾಗಿರಬೇಕು ಎಂದು ತೋರಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಅವರ ಮೈಟೊಕಾಂಡ್ರಿಯಲ್ **ಡಿಎನ್ಎ** ಯಲ್ಲಿ, ಯಾಮ್ನಾಯ ಜನರು ಹೆಚ್ಚು ವೈವಿಧ್ಯಮಯ (ವಂಶವಾಹಿಯ ವರಸೆಯ) ಅನುಕ್ರಮಗಳನ್ನು ಹೊಂದಿದ್ದರು. . . ಯಾಮ್ನಾಯ ಜನಸಂಖ್ಯೆಯ ವಿಸ್ತರಣೆಯು ಸಹ ಸಂಪೂರ್ಣವಾಗಿ ಸ್ನೇಹಮಯಿಯಾಗಿದ್ದಿರಲು ಸಾಧ್ಯವಿಲ್ಲ ಎಂಬುದು ಇಂದು ಪಶ್ಚಿಮ ಯುರೋಪ್ ಮತ್ತು ಭಾರತ ಎರಡರಲ್ಲಿಯೂ ಸ್ಟೆಪ್ ಮೂಲದ Y-ವರ್ಣತಂತುಗಳ ಪ್ರಮಾಣವು ಉಳಿದ ವಂಶಾವಳಿಗಳ ಪ್ರಮಾಣಕ್ಕಿಂತ ಬಹಳಷ್ಟು ಹೆಚ್ಚಿನದಾಗಿದೆ ಎಂಬ ಅಂಶದಿಂದ ಸ್ಪಷ್ಟವಾಗುತ್ತದೆ. ಸ್ಟೆಪ್ ಪ್ರದೇಶದಿಂದ ಬರುವ ಈ ಪುರುಷ ಪೂರ್ವಜರ ಪ್ರಾಧಾನ್ಯವು ರಾಜಕೀಯ ಅಥವಾ ಸಾಮಾಜಿಕ ಅಧಿಕಾರವನ್ನು ಹೊಂದಿದ್ದ ಯಾಮ್ನಾಯ ಸಂಸ್ಕೃತಿಯ ಪುರುಷ ವಂಶಸ್ಥರು ಸ್ಥಳೀಯ ಸಂಗಾತಿಗಳನ್ನು ಹೊಂದಿಸಿಕೊಳ್ಳುವ ಸ್ಪರ್ಧೆಯಲ್ಲಿ ಸ್ಥಳೀಯ ಗುಂಪುಗಳಿಗಿಂತ ಹೆಚ್ಚು ಯಶಸ್ವಿಯಾಗಿದ್ದರು ಎಂಬುದನ್ನು ಸೂಚಿಸುತ್ತದೆ.


ರೈಕ್ ಯಾಮ್ನಾಯ ಮೂಲದ ಪೂರ್ವಜರು 2500 BCE ಮತ್ತು 2000 BCE ನಡುವೆ ಇದ್ದಕ್ಕಿದ್ದಂತೆ ಬಂದಂತ ದೂರದ ನೈಋತ್ಯ ಯುರೋಪಿನಲ್ಲಿರುವ ಐಬೀರಿಯಾದ ಉದಾಹರಣೆಯನ್ನು ತೆಗೆದುಕೊಳ್ಳುತ್ತಾರೆ. ಈ ಅವಧಿಯ ಪ್ರಾಚೀನ **ಡಿಎನ್ಎ** ಆಧಾರದ ಮೇಲೆ, ಸರಿಸುಮಾರು 30 ಪ್ರತಿಶತದಷ್ಟು ಐಬೀರಿಯನ್ ಜನಸಂಖ್ಯಾ ಸ್ವರೂಪವು ಸ್ಟೆಪ್ ಪ್ರದೇಶದ ಪೂರ್ವಜರ ಆಗಮನದೊಂದಿಗೆ ಬದಲಾಯಿತು ಎಂದು ಕಂಡುಕೊಳ್ಳಲಾಯಿತು. ಆದರೆ Y-ವರ್ಣತಂತುಗಳ ಬದಲಿಯು ಹೆಚ್ಚು ಗಮನಾರ್ಹವಾಗಿತ್ತು ಎಂದು ರೈಕ್ ಬರೆಯುತ್ತಾ ಸೇರಿಸುತ್ತಾರೆ: 'ನಮ್ಮ ದತ್ತಾಂಶದಲ್ಲಿ, ಯಾಮ್ನಾಯ ವಂಶಾವಳಿಯನ್ನು ಹೊಂದಿರುವ ಸುಮಾರು ಶೇಕಡಾ 90 ರಷ್ಟು ಪುರುಷರು ಸ್ಟೆಪ್ ಮೂಲದ Y-ವರ್ಣತಂತು ಪ್ರಕಾರವನ್ನು ಹೊಂದಿದ್ದಾಗಿದ್ದು ಅದು ಆ ಕಾಲಕ್ಕಿಂತ ಮೊದಲು ಐಬೀರಿಯಾದಲ್ಲಿ ಇಲ್ಲವಾಗಿತ್ತು. ಸ್ಟೆಪ್ ಪ್ರದೇಶದಿಂದ ಆದ ವಿಸ್ತರಣೆಗಳಲ್ಲಿ ಅಸಾಧಾರಣ ಶ್ರೇಣಿ ರಚನೆಗಳು ಮತ್ತು ಅಧಿಕಾರದಲ್ಲಿನ ಅಸಮತೋಲನಗಳು ಪಾತ್ರ ವಹಿಸಿದ್ದವು ಎಂಬುದು ಸ್ಪಷ್ಟವಾಗಿದೆ.'

ತಳಿಶಾಸ್ತ್ರವು ಹೊಸದಾಗಿ ಬಂದ ಯಾಮ್ನಾಯ ಸಂಸ್ಕೃತಿಯ ಪುರುಷರ ಸಂತತಿಗೆ ಹೋಲಿಸಿ ನೋಡಿದಲ್ಲಿ ಸ್ಥಳೀಯ ಐಬೀರಿಯನ್ ಪುರುಷರ ಕೆಲವಷ್ಟೇ ಸಂಖ್ಯೆಯ ಸಂತತಿಯವರು ಉಳಿಯುವಂತೆ ಖಚಿತಪಡಿಸಿಕೊಳ್ಳಲು ಯಾವ ರೀತಿಯ ಬಲವನ್ನು ಬಳಸಲಾಯಿತು ಎಂಬ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ. ಅವರನ್ನು ಕೊಲ್ಲಲಾಯಿತೇ, ಓಡಿಸಲಾಯಿತೇ ಅಥವಾ ಸುಮ್ಮನೆ ಅಂಚಿಗೆ ತಳ್ಳಲ್ಪಟ್ಟರೇ? ನಮಗೆ ಅದು ತಿಳಿದಿಲ್ಲ. ತಳಿಶಾಸ್ತ್ರವು ಪರಿಣಾಮ ಏನೆಂದು ಮಾತ್ರ ತೋರಿಸಬಹುದು: ಗಣನೀಯವಾಗಿ ಆನುವಂಶಿಕ ರಾಶಿಯಿಂದ ಸ್ಥಳೀಯ ಪುರುಷರ ನಿರ್ಮೂಲನೆ.

## ಪೂರ್ವ, ಪಶ್ಚಿಮ ಮತ್ತು ಮತ್ತೆ ಪೂರ್ವ

ಯಾಮ್ನಾಯದವರು ಯುರೋಪ್‌ಗೆ ವಲಸೆ ಬರುತ್ತಿದ್ದ ಅದೇ ಸಮಯದಲ್ಲಿ, ಅವರು ಸ್ಟೆಪ್ ಹುಲ್ಲುಗಾವಲನ್ನು ದಾಟಿ ಪೂರ್ವಕ್ಕೆ ಮಿನುಸಿನ್ಸ್ಕ್ (Minusinsk) ಜಲಾನಯನ ಪ್ರದೇಶ ಮತ್ತು ದಕ್ಷಿಣ ಸೈಬೀರಿಯಾದಲ್ಲಿನ ಆಲ್ಟೈ (Altai) ಪರ್ವತಗಳ ಪ್ರದೇಶದಲ್ಲಿ ಅಫನಸಿಯೇವೋ (Afanasievo) ಸಂಸ್ಕೃತಿ ಎಂದು ಕರೆಯಲ್ಪಟ್ಟಂತ ಸಂಸ್ಕೃತಿಯನ್ನು ಸೃಷ್ಟಿಸಲು ಆ ಕಡೆಗೂ ಸಹ ವೇಗವಾಗಿ ಪಸರಿಸಿದರು ಮತ್ತು ಬಹುಶಃ ಅಳಿದುಹೋದ ಇಂಡೋ-ಯುರೋಪಿಯನ್ ಭಾಷೆಯಾದ ಟೋಕೇರಿಯನ್ (Tocharian) ನ ಆರಂಭಿಕ ಆವೃತ್ತಿಯ ಭಾಷೆಯನ್ನು ಮಾತನಾಡುತ್ತಿದರು. ಆದರೆ ದಕ್ಷಿಣ ಏಷ್ಯಾದ ದೃಷ್ಟಿಕೋನದಿಂದ ಹೆಚ್ಚು ನಿರ್ಣಾಯಕ ವಿಸ್ತರಣೆಯು ಯಾಮ್ನಾಯದವರು ಪಶ್ಚಿಮ ಯುರೋಪಿಗೆ ವಲಸೆ ಹೋಗಿ ಕಾರ್ಡೆಡ್ ವೇರ್ ಸಂಸ್ಕೃತಿಯನ್ನು ಸೃಷ್ಟಿಸಿದ ನಂತರದಲ್ಲಿ ಆದ ವಿಸ್ತರಣೆ. ಅದೇ ವೇಳೆಗೆ, 3000 BCE ನಂತರ ಯಾಮ್ನಾಯ ಮತ್ತು ಯುರೋಪಿಯನ್ ಮಧ್ಯ ನವಶಿಲಾಯುಗದ (Europe_MN (ಯುರೋಪ್_ಎಂಎನ್)) ರೈತರ ವಿಶಿಷ್ಟವಾದ ಕಾರ್ಡೆಡ್ ವೇರ್ ಸಂಸ್ಕೃತಿಯವರ ಜೆನೆಟಿಕ್ ಮಿಶ್ರಣವನ್ನು ಹೊತ್ತೊಯ್ಯುತ್ತಾ ಪಶ್ಚಿಮ ರಷ್ಯಾದ ಯುರಲ್ ಪರ್ವತಗಳ ಆಚೆಗೆ 'ಪೂರ್ವ ದಿಕ್ಕಿನ ಕಡೆಗೆ ಹಿಮ್ಮುಖ ಹರಿವು' ಇತ್ತು ಎಂದು ಆನುವಂಶಿಕ ಪುರಾವೆಗಳು ಸೂಚಿಸುತ್ತವೆ. ಸುಮಾರು 2600 BCE ಯ ವೇಳೆಗೆ, ಯಾಮ್ನಾಯ ಸಂಸ್ಕೃತಿಯ ಜನರು ಕಾರ್ಡೆಡ್ ವೇರ್ ಮತ್ತು ಸಿಂಟಾಷ್ಟಾ (Sintashta) ದಿಂದ ಹಿಡಿದು ವಿಶಾಲವಾದ ಸ್ಟೆಪ್ ಪ್ರದೇಶದಾದ್ಯಂತ ಸ್ರೂಬ್ನಾಯ (Srubnaya) ಮತ್ತು ಆಂಡ್ರೊನೋವೋ (Andronovo)ದವರೆಗೆ, ಪ್ರತಿಯೊಂದೂ ತಮ್ಮದೇ ಆದ ವಿಶಿಷ್ಟ ಶೈಲಿ ಮತ್ತು ಆಚರಣೆಗಳನ್ನು ಹೊಂದಿರುವುದೊಂದಿಗೆ, ಅನೇಕ ವಿಭಿನ್ನ ಅನಂತರದ ಸಂಸ್ಕೃತಿಗಳಾಗಿ ವಿಭಜನೆಗೊಂಡಿತ್ತು.

ಜೂನ್ 2015 ರಲ್ಲಿ ಬಹುಶಿಸ್ತೀಯ ವೈಜ್ಞಾನಿಕ ನಿಯತಕಾಲಿಕೆ '*ನೇಚರ್*' ಎಂಬುದರಲ್ಲಿ ಪ್ರಕಟವಾದ 'ಪಾಪ್ಯೂಲೇಷನ್ ಜೀನೋಮಿಕ್ಸ್ ಆಫ್ ಬ್ರಾಂಝ್ ಏಜ್ ಯುರೇಷ್ಯಾ (Population Genomics of Bronze Age Eurasia)' ಎಂಬ ಶೀರ್ಷಿಕೆಯುಳ್ಳ ಅಧ್ಯಯನವು ಹೇಳುವುದೇನೆಂದರೆ, 'BCE 2000 ರ ಆರಂಭದಿಂದ, ಯುರಲ್ ಪವರ್ತಗಳ ಪ್ರದೇಶದಲ್ಲಿ ರಥಗಳನ್ನು ನಿರ್ಮಿಸುವ, ಕುದುರೆಗಳನ್ನು ಸಾಕುವ ಮತ್ತು ತರಬೇತಿ ನೀಡುವ, ಮತ್ತು ಸಂಕೀರ್ಣವಾದ ಹೊಸ ಆಯುಧಗಳನ್ನು ರೂಪಿಸುವ, ಸಿಂಟಾಷ್ಟಾ ಸಂಸ್ಕೃತಿ ಎಂದೇ ಪ್ರಸಿದ್ಧವಾಗಿರುವ ನಿಪುಣ ಕುಶಲಕರ್ಮಿಗಳ ಹೊಸ ವರ್ಗವೊಂದು ಹುಟ್ಟಿಕೊಂಡಿತು. ಈ ನಾವೀನ್ಯತೆಗಳು ತ್ವರಿತವಾಗಿ ಯುರೋಪ್ ಮತ್ತು ಏಷ್ಯಾದ್ಯಂತ ಹರಡಿದ್ದು ಅಲ್ಲಿ ಅವು ಆಂಡ್ರೊನೋವೋ ಸಂಸ್ಕೃತಿಯ ಹುಟ್ಟಿಗೆ ಕಾರಣವಾದವು.' ಇಂಡೋ-ಯುರೋಪಿಯನ್ ಇತಿಹಾಸ ಮತ್ತು ಭಾಷೆಗಳ ಕುರಿತು ವಿಶೇಷ ಅಧ್ಯಯನ ಮಾಡುವ ಅಮೇರಿಕನ್ ಮಾನವಶಾಸ್ತ್ರ ಪ್ರಾಧ್ಯಾಪಕ ಡೇವಿಡ್ ಡಬ್ಲ್ಯೂ. ಆಂಥೋನಿ (David W. Anthony) ಅವರು ದಾಖಲೆ ಮಾಡಿರುವಂತೆ, ಸಿಂಟಾಷ್ಟಾ ಮತ್ತು ಆಂಡ್ರೊನೋವೋ ಸಂಸ್ಕೃತಿಗಳೆರಡೂ ದಕ್ಷಿಣ ಏಷ್ಯಾಗೆ ಆದ ಸ್ಟೆಪ್ ಹುಲ್ಲುಗಾವಲಿನ ಜನರ ವಲಸೆಗೆ ಪ್ರಸ್ತುತವಾಗಿವೆ.




*Adapted from ' Genomic Formation of South and Central Asia,' bioRxiv,2018*

**ವಿವರಣೆ**

ಯುರೇಷ್ಯಾ unclear

ಆಂಥೋನಿ ತಮ್ಮ '*ದ ಹಾರ್ಸ್, ದ ವೀಲ್ ಆಂಡ್ ಲ್ಯಾಂಗ್ವೇಜ್ (The Horse, the Wheel and Language)*' ಎಂಬ ಪುಸ್ತಕದಲ್ಲಿ, ರಷ್ಯಾದ ಸಿಂಟಾಷ್ಟಾ ಮತ್ತು ಆರ್ಕೈಮ್ (Arkaim) ಪುರಾತತ್ತ್ವದ ಸ್ಥಳಗಳಲ್ಲಿ ಉತ್ಖನನ ಮಾಡಿದ ಸಮಯದಲ್ಲಿ ಪತ್ತೆಯಾದ ಆಚರಣೆಗಳು ಮತ್ತು ಋಗ್ವೇದದಲ್ಲಿ – ವೇದಗಳಲ್ಲೇ ಅತ್ಯಂತ ಹಳೆಯದಾದ ಇದನ್ನು 1700 BCE ಮತ್ತು 1100 BCE ಯ ನಡುವೆ ವಿವಿಧ ಕಾಲಮಾನಕ್ಕೆ ಸೇರಿಸಲಾಗಿದೆಯಾದರೂ,[3] 'ಆರ್ಯರು' ಭಾರತವನ್ನು ತಲುಪುವ ಮುನ್ನವೇ ಋಗ್ವೇದದ ಕೆಲವು ಭಾಗಗಳು ಅವರಿಂದ ರಚಿಸಲ್ಪಟ್ಟಿತ್ತೇ ಇಲ್ಲವೇ ಎಂಬುದರ ಕುರಿತು ಯಾವುದೇ ಒಮ್ಮತವಿಲ್ಲ – ವಿವರಿಸಲಾದ ಆಚರಣೆಗಳ ನಡುವಿನ ಹೋಲಿಕೆಗಳನ್ನು ವಿವರವಾಗಿ ಪರಿಶೋಧಿಸುತ್ತಾರೆ. ಈ ಸಾಮ್ಯತೆಗಳು ವೇದಗಳನ್ನು ರಚಿಸಿದ ಮತ್ತು ಇಂಡೋ-ಯುರೋಪಿಯನ್ ಭಾಷೆಗಳನ್ನು ಭಾರತಕ್ಕೆ ತಂದ 'ಆರ್ಯರು' ಸಿಂಟಾಷ್ಟಾ ಮತ್ತು ಆರ್ಕೈಮ್ ನಂತಹ ಸ್ಥಳಗಳಲ್ಲಿ ತಮ್ಮ ಸಾಂಸ್ಕೃತಿಕ ಆಚರಣೆಗಳ ಪುರಾವೆಗಳನ್ನು ಬಿಟ್ಟುಹೋದ ಜನರೊಂದಿಗೆ ಸಂಬಂಧ ಹೊಂದಿದ್ದರು ಎಂಬ ವಾದವನ್ನು ಬಲಪಡಿಸುತ್ತವೆ.

ಆಂಥೋನಿಯನ್ನು ಉಲ್ಲೇಖಿಸುವುದಾದರೆ:

> ಈ ಹೋಲಿಕೆಗಳು ಋಗ್ವೇದ ಮಂಡಲ 10.18 ರಲ್ಲಿ ಒಂದು ಕುರ್ಗನ್ ಗೆ ಸಂಬಂಧಿಸಿದಂತ ಒಂದು ಉಲ್ಲೇಖವನ್ನು ಒಳಗೊಂಡಿದೆ ('ಅವರು. . .ಈ ಬೆಟ್ಟದಲ್ಲಿ ಸಾವನ್ನು ಹೂಳಲಿ'), ಕಂಬಗಳಿಂದ ಬೆಂಬಲಿತವಾದ ಒಂದು ಛಾವಣಿಯದ ಸಮಾಧಿ ಕೋಣೆ ('ಈ ಕಂಬವನ್ನು ಪಿತೃಗಳು ನಿಮಗೆ ಎತ್ತಿ ಹಿಡಿಯಲಿ'), ಮತ್ತು ಆಸರೆಗೆಂದು ಗೋಡೆಗಳನ್ನು ಹೊಂದಿರುವ ('ನಾನು ನಿನ್ನ ಸುತ್ತಲೂ ಬಲವರ್ಧನೆ ನೀಡುತ್ತಿದ್ದೇನೆ; ನಾನು ಈ ಮಣ್ಣಿನ ಉಂಡೆಯನ್ನು ಹಾಕುವಾಗ ನಿನಗೆ ಹಾನಿ ಆಗದಿರಲಿ'). ಇದು ಸಿಂಟಾಷ್ಟಾ . . . ಸಮಾಧಿ ಗುಂಡಿಗಳ ನಿಖರವಾದ ವಿವರಣೆಯಾಗಿದ್ದು, ಅವು ಮರಮುಟ್ಟಿನ ಕಂಬಗಳು ಮತ್ತು ಬೇರುಗಳ ಬಲವರ್ಧನೆಯ ಗೋಡೆಗಳಿಂದ ಬೆಂಬಲಿತವಾದ ಆಸರೆಕೊಡುವ ಮರದ ಬೇರುಗಳನ್ನು ಹೊಂದಿದ್ದವು. ರಾಜಮನೆತನದ ಅಂತ್ಯಕ್ರಿಯೆಯಲ್ಲಿ ಮಾಡುವ ಅಶ್ವಮೇಧ ಯಾಗವನ್ನು ಋಗ್ವೇದ ಮಂಡಲ 1.162 ರಲ್ಲಿ ವಿವರಿಸಲಾಗಿದೆ: 'ಅಂಗಾಂಗಗಳಿಗೆ ಹಾನಿಯಾಗದಂತೆ ಮತ್ತು ಅವುಗಳನ್ನು ಸರಿಯಾದ ಮಾದರಿಯಲ್ಲಿ ಇರಿಸಿ. ಒಂದೊಂದೇ ತುಂಡನ್ನು ಕೂಗುತ್ತ, ಅವುಗಳನ್ನು ಕತ್ತರಿಸಿ ಬೇರೆಮಾಡಿ.' ಸಿಂಟಾಷ್ಟಾದಲ್ಲಿ ಅಶ್ವಮೇಧ ಯಾಗಗಳು . . . ಕುದುರೆಗಳ ಕಾಲಿನ ಕೆಳ ಭಾಗಗಳನ್ನು ಕೀಲುಗಳ ಬಳಿ ಎಚ್ಚರಿಕೆಯಿಂದ ಕತ್ತರಿಸಿ ಸಮಾಧಿಯ ಒಳಗೆ ಮತ್ತು ಮೇಲೆ ಇರಿಸಲಾದ ಸಮಾಧಿಗಳು ಈ ವಿವರಣೆಗೆ ಹೊಂದಾಣಿಕೆಯಾಗುತ್ತದೆ.

ಆಂಥೋನಿ ಅವರು ಸ್ಟೆಪ್ ಪ್ರದೇಶದಲ್ಲಿನ ಪುರಾತತ್ತ್ವದ ಪುರಾವೆಗಳು ಹಾಗೂ ಭಾರತೀಯರು ಮತ್ತು ಇರಾನಿಯನ್ನರ ಪುರಾಣಗಳ ನಡುವಿರುವ ಸಂಬಂಧದ ಕುರಿತು ಆಶ್ಚರ್ಯಕರ ಪುರಾವೆಗಳನ್ನು ಒಳಗೊಂಡಿದ್ದಂತ ಅವರಿಂದ ಉತ್ಖನನ ಮಾಡಲಾದ ಸ್ರೂಬ್ನಾಯದ ಸ್ಥಳವೊಂದನ್ನು ವಿವರಿಸುತ್ತಾರೆ.[4] ಈ ಪುರಾವೆಗಳು ಚಳಿಗಾಲದ ಅಯನ ಸಂಕ್ರಾಂತಿಯಂದು ನಡೆದ ಮಧ್ಯ-ಚಳಿಗಾಲದ ಹೊಸ ವರ್ಷದ ಆಹುತಿ ಮತ್ತು ದೀಕ್ಷಾ ಸಮಾರಂಭಕ್ಕೆ ಸಂಬಂಧಿಸಿದ್ದವು. ಆಂಥೋನಿ ಬರೆಯುತ್ತಾರೆ:

> ಅನೇಕ ಇಂಡೋ-ಯುರೋಪಿಯನ್ ಪುರಾಣಗಳು ಮತ್ತು ಆಚರಣೆಗಳು ಈ ಘಟನೆಗೆ ಸಂಬಂಧಿಸಿದಂತ ಉಲ್ಲೇಖಗಳನ್ನು ಒಳಗೊಂಡಿದ್ದವು. ಯುವಕರನ್ನು ಯೋಧರ ಪ್ರವರ್ಗಕ್ಕೆ ಸೇರಿಸುವುದು ಅದರ ಕಾರ್ಯಗಳಲ್ಲಿ ಒಂದಾಗಿತ್ತು ಮತ್ತು ಅದರ ಪ್ರಮುಖ ಚಿಹ್ನೆ ಶ್ವಾನ ಅಥವಾ ತೋಳವಾಗಿತ್ತು. ಶ್ವಾನಗಳು ಮೃತ್ಯುವನ್ನು ಪ್ರತಿನಿಧಿಸಿತ್ತು; ಅನೇಕ ಶ್ವಾನಗಳು ಅಥವಾ ಬಹು ಮುಂಡದ ಶ್ವಾನವೊಂದು ಪರಲೋಕದ ಪ್ರವೇಶದ್ವಾರವನ್ನು ಕಾಯುತ್ತಿತ್ತು. ದೀಕ್ಷೆಯ ಸಮಯದಲ್ಲಿ, ಮೃತ್ಯು ಹಳೆಯ ವರ್ಷ ಮತ್ತು ಬಾಲ್ಯಾವಸ್ಥೆ ಈ ಎರಡೂ ಅಸ್ಮಿತೆಗಳಿಗೆ ಬಂದಿತು, ಮತ್ತು ಹುಡುಗರು ಯೋಧರಾದಾಗ, ಅವರು ಮೃತ್ಯುವಿನ ಶ್ವಾನಗಳಿಗೆ ಆಹಾರವನ್ನು ನೀಡುತ್ತಿದ್ದರು. ಋಗ್ವೇದದಲ್ಲಿ, ಪ್ರತಿಜ್ಞೆಯ ಮೂಲಕ ಯೋಧರ ಸಹೋದರತ್ವವನ್ನು ಪಡೆದು ಚಳಿಗಾಲದ ಮಧ್ಯದಲ್ಲಿ ಯಜ್ಞಗಳನ್ನು ಮಾಡುವವರನ್ನು ವ್ರತ್ಯರು ಎಂದು ಕರೆಯಲಾಗುತ್ತಿತ್ತು ಅಲ್ಲದೆ ಅವರನ್ನು ಶ್ವಾನ-ಪುರೋಹಿತರು ಎಂದೂ ಸಹ ಕರೆಯಲಾಗುತ್ತಿತ್ತು. ಕಾವ್ಯ ವಾಚನ ಮತ್ತು ರಥದ ಪಂದ್ಯಗಳು ಸೇರಿದಂತೆ ಅನೇಕ ಸ್ಪರ್ಧೆಗಳು ಅವರಿಗೆ ಸಂಬಂಧಿಸಿದ ಸಮಾರಂಭಗಳು ಒಳಗೊಂಡಿದ್ದವು. ಸಮರ ನದಿ ಕಣಿವೆಯ ಕ್ರಸ್ನಸಮಾರ್ಸ್ಕಾ (Krasnosamarskoe) ದ ಸ್ರೂಬ್ನಾಯ ನೆಲೆನಾಡು ಪ್ರದೇಶದಲ್ಲಿ, ನಾವು ಕಂಚಿನ ಯುಗದ ಅಂತ್ಯಕಾಲದ ಮಧ್ಯ-ಚಳಿಗಾಲದಲ್ಲಿ . . . ಸುಮಾರು 1750 BCE ಕಾಲಮಾನದ . . . ಶ್ವಾನ ಆಹುತಿಯ ಅವಶೇಷಗಳನ್ನು ಕಂಡೆವು . . . ಕನಿಷ್ಠ 18 ಶ್ವಾನಗಳನ್ನು ಕಡಿಯಲಾಗಿದ್ದವು, ಬಹುಶಃ ಅದಕ್ಕಿಂತಲೂ ಹೆಚ್ಚು ಇರಬಹುದು.

ಸಿಂಟಾಷ್ಟಾ ಸಂಸ್ಕೃತಿಯ ರಥ ನಿರ್ಮಾಣ ಮಾಡುವ ಮತ್ತು ದುರ್ಗ-ಆಧಾರಿತ ನಾಯಕತ್ವಗಳು ತಮ್ಮನ್ನು ಹೊಸ ರೀತಿಯ ಶಸ್ತ್ರಾಸ್ತ್ರಗಳಿಂದ ಶಸ್ತ್ರಸಜ್ಜಿತರನ್ನಾಗಿ ಮಾಡಿಕೊಂಡರು, ಸಂಪತ್ತು ಮತ್ತು ಔದಾರ್ಯದ ಅದ್ಭುತ ಸಾರ್ವಜನಿಕ ಪ್ರದರ್ಶನಗಳನ್ನು ಒಳಗೊಂಡ ಒಂದು ಹೊಸ ಶೈಲಿಯ ಅಂತ್ಯಕ್ರಿಯೆಯ ಆಚರಣೆಗಳನ್ನು ಸೃಷ್ಟಿಸಿದರು ಮತ್ತು ಸ್ಟೆಪ್ ಪ್ರದೇಶದಲ್ಲಿ ಹಿಂದೆ ಕಲ್ಪಿಸಿಕೊಳ್ಳಲಾಗದ ಪ್ರಮಾಣದಲ್ಲಿ ಗಣಿಗಳಿಂದ ಲೋಹಗಳನ್ನು ತೆಗೆಯಲು ಮತ್ತು ಉತ್ಪಾದಿಸಲು ಪ್ರಾರಂಭಿಸಿದರು ಎಂದು ಆಂಥೋನಿ ಹೇಳುತ್ತಾರೆ. ಸುಮಾರು 2000 BCE ಯಲ್ಲಿ, ಅವರು ಅಂತಿಮವಾಗಿ ಯುರಲ್ ಪರ್ವತಗಳನ್ನು ದಾಟಿ - ಅಥವಾ ಬಳಸಿಕೊಂಡು ಹೋಗಿ - ಸ್ಟೆಪ್ ಪ್ರದೇಶದ ಪೂರ್ವದಾದ್ಯಂತ ಹರಡಿದರು. ಅವರು ಬರೆಯುತ್ತಾರೆ, 'ಅವರೊಂದಿಗೆ ಸಿಂಟಾಷ್ಟಾದ ಪೂರ್ವ ದಿಕ್ಕಿನ ಪುತ್ರಿಯರು, ನಂತರದ ಇತಿಹಾಸದಲ್ಲಿ ಇರಾನಿಯನ್ನರು ಮತ್ತು ವೈದಿಕ ಆರ್ಯರು ಎಂದು ಕಾಣಿಸಿಕೊಳ್ಳುವ ಸಂತತಿಯವರು ಹೋದರು. ಈ ಪೂರ್ವ ಮತ್ತು ದಕ್ಷಿಣದ ಸಂಬಂಧಗಳು ಅಂತಿಮವಾಗಿ ಉತ್ತರ ಭಾಗದ ಸ್ಟೆಪ್ ಸಂಸ್ಕೃತಿಗಳನ್ನು ಏಷ್ಯಾದ ಹಳೆಯ ನಾಗರಿಕತೆಗಳೊಂದಿಗೆ ಮುಖಾ ಮುಖಿ ಆಗುವಂತೆ ಮಾಡಿದವು.'

ಆಂಥೋನಿ ತಮ್ಮ ಪುಸ್ತಕವನ್ನು ಹೆಚ್ಚಾಗಿ ಪುರಾತತ್ತ್ವ ಶಾಸ್ತ್ರದ ದತ್ತಾಂಶಗಳನ್ನು ಆಧಾರವನ್ನಾಗಿಟ್ಟುಕೊಂಡು ಬರೆದರು. ಆದರೆ ಈಗ, ಪ್ರಾಚೀನ **ಡಿಎನ್ಎ ಯು** ಅವರ ಶೋಧಕಗಳು ಅತ್ಯಂತ ನಿಖರವಾಗಿತ್ತು ಎಂದು ತೋರಿಸಿದೆ. 'ದ ಜೀನೋಮಿಕ್ (ಎಲ್ಲ ವಂಶವಾಹಿಗಳ ಸಮಷ್ಟಿ ಅಧ್ಯಯನ) ಫಾರ್ಮೇಷನ್ ಆಫ್ ಸೌತ್ ಆಂಡ್ ಸೆಂಟ್ರಲ್ ಏಷ್ಯಾ' ಅಧ್ಯಯನವು 2000 BCE ಮತ್ತು 1400 BCE ನಡುವೆ, ಪೂರ್ವ ಭಾಗದ ಯುರೋಪ್ ಮತ್ತು ಟ್ರಾನ್ಸ್-ಯುರಲ್ ಸ್ಟೆಪ್ ಹುಲ್ಲುಗಾವಲಿನ ವಿಶಾಲ ಪ್ರದೇಶವು ಸಾಪೇಕ್ಷವಾಗಿ ಏಕರೂಪದ ಜನಸಂಖ್ಯೆಯನ್ನು ಹೊಂದಿತ್ತು ಮತ್ತು ಅವು ಈ ಪ್ರದೇಶದಲ್ಲಿ ಹಿಂದಿದ್ದ ಜನಸಂಖ್ಯೆಗಿಂತ ಭಿನ್ನವಾಗಿತ್ತು ಎಂದು ದೃಢಪಡಿಸಿತು. ಯುರೋಪಿಯನ್ ರೈತರಿಂದ ಅದರ ವಂಶಾವಳಿಯನ್ನು ಪಡೆದಿತ್ತು ಎಂಬುದು ಈ ಜನಸಂಖ್ಯೆಯ ವಿಶಿಷ್ಟ ಲಕ್ಷಣವಾಗಿತ್ತು. ಕಾರ್ಡೆಡ್ ವೇರ್ ಸಂಸ್ಕೃತಿಯ ಆನುವಂಶಿಕ ಮಿಶ್ರಣವನ್ನು ಹೊಂದಿದ್ದ, ಈ ಹಿಂದೆ ಉಲ್ಲೇಖಿಸಲಾದಂತ 'ಪೂರ್ವ ದಿಕ್ಕಿನೆಡೆಗಿನ ಹಿಮ್ಮುಖ ಹರಿವು,' ಈಗ ಸ್ಟೆಪ್ ಪ್ರದೇಶದಾದ್ಯಂತ ಸಾಮಾನ್ಯವಾಗಿತ್ತು.

ಆದರೆ ಇನ್ನೊಂದು ವ್ಯತ್ಯಾಸವಿದೆ. ನೀವು ದೂರದ ಪೂರ್ವಕ್ಕೆ, ಇಂದಿನ ಕಝಾಕಸ್ತಾನ್ (Kazakhstan) ಗೆ ಮತ್ತು ರಷ್ಯಾದ ಮಿನುಸಿನ್ಸ್ಕ್ ಜಲಾನಯನ ಪ್ರದೇಶದವರೆಗೆ ಹೋದಂತೆ, ಪ್ರಾಚೀನ **ಡಿಎನ್ಎ** ಮಾದರಿಗಳು 2018 ರ ಜೀನೋಮಿಕ್ ಫಾರ್ಮೇಷನ್ ಅಧ್ಯಯನವು ಪಶ್ಚಿಮ ಸೈಬೀರಿಯನ್ ಹ್ಯಾಪ್ಲೋ ಗ್ರೂಪ್ ಅಥವಾ ಪಶ್ಚಿಮ ಸೈಬೀರಿಯನ್_HG ಎಂದು ಕರೆಯುವ

ಮತ್ತೊಂದು ಪೂರ್ವಜರ ಕುರುಹು ಅದರಲ್ಲಿ ಸೇರ್ಪಡೆ ಆಗಿರುವುದನ್ನು ಪ್ರತಿಬಿಂಬಿಸುತ್ತವೆ. ಇದು 'ಪೂರ್ವ ದಿಕ್ಕಿನಡೆಗಿನ ಹಿಮ್ಮುಖ ಮಹಾಪೂರವು' ಕಝಾಕ್ಸ್ತಾನ್ ಮತ್ತು ಇನ್ನೂ ದೂರದ ಪೂರ್ವವನ್ನು ತಲುಪುತ್ತಿದ್ದಂತೆ, ಅದು ಈಗಾಗಲೇ ಪಶ್ಚಿಮ ಸೈಬೀರಿಯನ್_HG ಪೂರ್ವಜ ಅಂಶವನ್ನು ಹೊಂದಿದ್ದಂತ ಜನಸಂಖ್ಯೆಯನ್ನು ಎದುರುಗೊಂಡು ಅದರೊಂದಿಗೆ ಬೆರೆತುಹೋಯಿತು ಎಂದು ತೋರಿಸುತ್ತದೆ. ಹಾಗಾಗಿ ಅಧ್ಯಯನವು, ಅಂತಹ ಯಾವುದೇ ಪೂರ್ವಜರನ್ನು ಹೊಂದಿರದಂತ ಸ್ಟೆಪ್-MLBA_West (MLBA – ಕಂಚಿನ ಮಧ್ಯ ಮತ್ತು ಅಂತ್ಯ ಯುಗದ ಸ್ಟೆಪ್ ಪಶ್ಚಿಮ ಭಾಗದ ಪ್ರದೇಶದ ಪೂರ್ವಜ) ಗುಂಪಿನಿಂದ ಬೇರ್ಪಡಿಸಲು, ಸ್ಟೆಪ್ -MLBA_East ಎಂಬ ಹೊಸ ಗುಂಪೊಂದನ್ನು ರಚಿಸಿತು.

ಇದು ನಮಗೆ ಮುಖ್ಯವಾಗಿದೆ, ಏಕೆಂದರೆ ಬಹುಶಃ ಈ ಸ್ಟೆಪ್-MLBA_East ಗುಂಪು ಅಂತಿಮವಾಗಿ ಸ್ಟೆಪ್ ಪ್ರದೇಶದಿಂದ ದಕ್ಷಿಣಕ್ಕೆ **ಬಿಎಮ್ಎಸಿ** ಮತ್ತು ಟುರಾನ್ (Turan)ಗೆ ಮತ್ತು ನಂತರ ಇನ್ನೂ ದೂರ ಭಾರತದ ಉಪಖಂಡದ ದಕ್ಷಿಣಕ್ಕೆ ವಲಸೆ ಹೋಯಿತು ಎಂಬ ಕಾರಣಕ್ಕೆ. ತಳಿಶಾಸ್ತ್ರ ಅಧ್ಯಯನವು ಸ್ಟೆಪ್ ಪ್ರದೇಶದಿಂದ ದಕ್ಷಿಣ ಏಷ್ಯಾಗೆ ಆದಂತ ಮಹಾಪೂರವನ್ನು ಸ್ಟೆಪ್-MLBA ಆನುವಂಶಿಕ ಗುಂಪಿನದು ಎಂಬುದಾಗಿ ಮಾತ್ರ ವಿವರಿಸುತ್ತದೆ, ಏಕೆಂದರೆ MLBA_West ಮತ್ತು MLBA_East ಎರಡೂ ಗುಂಪುಗಳು ಭಾರತದ ವಂಶಾವಳಿಗೆ ಮೂಲಗಳಾಗಿ ಸರಿಹೊಂದುತ್ತವೆ. ಆದರೆ ಭೌಗೋಳಿಕವಾಗಿ ಉಪಖಂಡಕ್ಕೆ ಹೆಚ್ಚು ಹತ್ತಿರವಾಗಿರುವುದರಿಂದ ದಕ್ಷಿಣ ಏಷ್ಯಾವನ್ನು ತಲುಪಿದ್ದು MLBA_East ಆನುವಂಶಿಕ ಗುಂಪು ಆಗಿರುವ ಸಾಧ್ಯತೆಯಿದೆ. ಭಾರತದಲ್ಲಿ ಕಂಡುಬರುವ ಸ್ಟೆಪ್ ಮೂಲದ Y-ವರ್ಣತಂತು ಹ್ಯಾಪ್ಲೋ ಗ್ರೂಪ್ ಆದ R1a-Z93 ಕಝಾಕ್ಸ್ತಾನ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಮತ್ತೊಂದು ಕಾರಣವಾಗಿದೆ.

ಈ ಅಧ್ಯಯನವು ದಕ್ಷಿಣ ಏಷ್ಯಾಗೆ 'ಆರ್ಯರು' ವಲಸೆ ಬಂದ ಕಾಲಘಟ್ಟವನ್ನು ಖಚಿತವಾಗಿ ನಿರ್ಧರಿಸಲು ನಮಗೆ ನೆರವಾಗುತ್ತಿದೆಯೇ? ಹಲವು ವಿಧಗಳಲ್ಲಿ ಅದು ನೆರವಾಗುತ್ತದೆ. **ಬಿಎಮ್ಎಸಿ** ನಾಗರಿಕತೆಯ ಪ್ರಾಚೀನ **ಡಿಎನ್ಎ** ಯು ಸ್ಟೆಪ್ ಆನುವಂಶಿಕತೆಯ ಇರುವಿಕೆಯನ್ನು 2100 BCE ನಂತರದಲ್ಲಿ ಮಾತ್ರ ತೋರಿಸುತ್ತದೆ ಮತ್ತು ಅದಕ್ಕಿಂತ ಮೊದಲು ಅದು ಸ್ಪಷ್ಟವಾಗಿ ಕಾಣಿಸಿಕೊಳ್ಳದೆ ಇರುವುದರಿಂದ, ಈ ಮಾರ್ಗದ ಮೂಲಕ ಸ್ಟೆಪ್ ಪ್ರದೇಶದಿಂದ ದಕ್ಷಿಣ ಏಷ್ಯಾಗೆ ಆದ ವಲಸೆಯು ಮೊದಲೇ ಸಂಭವಿಸಿರಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. **ಬಿಎಮ್ಎಸಿ** ನಾಗರಿಕತೆಯು ದಕ್ಷಿಣ ಏಷ್ಯಾದಿಂದ ಹೆಚ್ಚು ದೂರದಲ್ಲಿಲ್ಲ ಮತ್ತು ಹರಪ್ಪಾ ನಾಗರಿಕತೆಯೊಂದಿಗೆ ಬಲವಾದ ವ್ಯಾಪಾರ ಸಂಬಂಧವನ್ನು ಹೊಂದಿತ್ತು ಎಂಬುದನ್ನು ಪರಿಗಣಿಸಿದರೆ, ಅದು ಹೆಚ್ಚು ನಂತರದಲ್ಲಿ ಆಗಿರಲು ಸಾಧ್ಯವಿಲ್ಲ ಕೂಡ. **ಬಿಎಮ್ಎಸಿ** ನಾಗರಿಕತೆಯಿಂದ ದಕ್ಷಿಣ ಏಷ್ಯಾದ ಕಡೆಗಿನ ವಲಸೆಯು 2100 BCE ಯ ಸ್ವಲ್ಪ ಸಮಯದ ನಂತರದಲ್ಲೇ ಪ್ರಾರಂಭವಾಗಿರಬಹುದು ಎಂದು ಸೂಚಿಸುವ ಪುರಾತತ್ತ್ವ ಪುರಾವೆಗಳಿವೆ. ಹರಪ್ಪಾ ಪ್ರದೇಶದಲ್ಲಿ ಕುದುರೆಯ ಇರುವಿಕೆಯ ಬಗ್ಗೆ ವಿವಾದಾತ್ಮಕವಲ್ಲದ ಮೊದಲ ಪುರಾವೆಯು ಬಲೊಚಿಸ್ತಾನ (Balochistan) ದ ಪಿರಾಕ್ ಪುರಾತತ್ತ್ವ ಸ್ಥಳದಿಂದ ಬಂದಿದೆ ಮತ್ತು ಅದು ಹರಪ್ಪಾದ ಅಂತ್ಯ ಕಾಲಘಟ್ಟ 1800 BCE ಕಾಲಮಾನಕ್ಕೆ ಸೇರಿದೆ. ಪಿರಾಕ್‌ನಲ್ಲಿ ಟೆರಾಕೋಟಾ ಮತ್ತು ಹಸಿ ಜೇಡಿಮಣ್ಣಿನಿಂದ ಮಾಡಿದ ಕುದುರೆಗಳ ಪ್ರತಿಮೆಗಳು ಸಹ ಇದ್ದವು - ಬೇರೆ ಯಾವುದೇ ಹರಪ್ಪಾ ಮುದ್ರೆ ಅಥವಾ ಕಲಾಕೃತಿಯಲ್ಲಿ ಕುದುರೆಯ ಚಿತ್ರಣವಿಲ್ಲ ಎಂಬುದನ್ನು ನೆನಪಿಡಿ. ಇದರರ್ಥ ಭಾರತದ ಉಪಖಂಡಕ್ಕೆ ಮೊದಲ ಸ್ಟೆಪ್ ಪ್ರದೇಶದಿಂದಾದ ವಲಸೆಗಳು ಹರಪ್ಪಾ ನಾಗರಿಕತೆಯ ಅವನತಿಯೊಂದಿಗೆ ಬಹುತೇಕ ಏಕಕಾಲದಲ್ಲಿ ಘಟಿಸಿರಬಹುದು.

## ದಕ್ಷಿಣ ಏಷ್ಯಾ ಮತ್ತು ಯುರೋಪ್ ನಡುವಿನ ಸಾಮ್ಯತೆಗಳು

ದಕ್ಷಿಣ ಏಷ್ಯಾಗೆ ವಲಸೆ ಹೋದ ಇತಿಹಾಸ ಮತ್ತು ಪಶ್ಚಿಮ ಯುರೋಪಿಗೆ ವಲಸೆ ಹೋದ ಇತಿಹಾಸದ ನಡುವೆ ಸುಸ್ಪಷ್ಟವಾದ ಸಾಮ್ಯತೆಗಳಿವೆಯಾದರೂ ಸಹ ಅವು ವಿವರಗಳಲ್ಲಿ ಭಿನ್ನವಾಗಿವೆ. ಪಶ್ಚಿಮ ಯುರೋಪ್‌ನಲ್ಲಿ, ಕೃಷಿ ತಂತ್ರಜ್ಞಾನವನ್ನು ಪಶ್ಚಿಮ ಏಷ್ಯಾದಿಂದ 7000 BCE ಮತ್ತು 5000 BCE ಯ ನಡುವೆ ವಲಸೆ ಹೋಗುತ್ತಿದ್ದ ಅನಟೋಲಿಯನ್ ಕೃಷಿಕರಿಂದ ತರಲಾಯಿತು. ಸುಮಾರು ಅದೇ ಸಮಯದಲ್ಲಿ ದಕ್ಷಿಣ ಏಷ್ಯಾ ಝಾಗ್ರೋಸ್ ದನಗಾಹಿಗಳ ಆಗಮನವನ್ನು ಕಂಡಿತಾದರೂ ಅವರು ತಮ್ಮೊಂದಿಗೆ

ಸಂಪೂರ್ಣವಾಗಿ ಅಭಿವೃದ್ಧಿಗೊಂಡ ಕೃಷಿ ತಂತ್ರಜ್ಞಾನವನ್ನು ತಂದಿದ್ದರೇ ಎಂಬುದು ಅನಿರ್ಣಾಯಕವಾಗಿದೆ. ಈ ಮೊದಲೇ ಹೇಳಿದಂತೆ, ಬಲೂಚಿಸ್ತಾನದಲ್ಲಿನ ಮೆಹರ್ಗಢ (Mehrgarh) ಮತ್ತು ಉತ್ತರ ಪ್ರದೇಶದಲ್ಲಿನ ಲಹುರಾದೇವಾ (Lahuradewa)ದಂತಹ ಸ್ಥಳಗಳಲ್ಲಿ ಆಗಲೇ ಆರಂಭಿಕ ಕೃಷಿ ಪ್ರಯೋಗಗಳು ಪ್ರಾರಂಭವಾಗಿರಬಹುದು, ಮತ್ತು ವಲಸಿಗರು ಹೊಸ ಸಾಕುಪ್ರಾಣಿಗಳನ್ನು ತರುವುದರ ಮೂಲಕ ಕೃಷಿ ಆಧಾರಿತ ಜೀವನಶೈಲಿಗೆ ಪರಿವರ್ತನೆಯಾಗುವುದನ್ನು ಉತ್ತೇರಿಸಿರಬಹುದು. ಪಶ್ಚಿಮ ಯುರೋಪಿನಲ್ಲಿ, ವಲಸೆ ಬರುತ್ತಿದ್ದ ಅನಟೋಲಿಯನ್ ರೈತರು ಮತ್ತು ಮೂಲನಿವಾಸಿಗಳಾದ ಬೇಟೆಗಾರ-ಸಂಗ್ರಹಕಾರರು ವಿವಿಧ ಪ್ರಮಾಣಗಳಲ್ಲಿ ಬೆರೆತರು ಮತ್ತು ಅನೇಕ ನವಶಿಲಾಯುಗದ ಸಂಸ್ಕೃತಿಗಳಿಗೆ ಜನ್ಮ ನೀಡಿದರು. ದಕ್ಷಿಣ ಏಷ್ಯಾದಲ್ಲಿ, ಝಾಗ್ರೋಸ್ ಪ್ರದೇಶದಿಂದ ಬರುತ್ತಿದ್ದ ದನಗಾಹಿಗಳು ಆದ್ಯ ಭಾರತೀಯರೊಂದಿಗೆ ಬೆರೆತು ಹರಪ್ಪಾ ನಾಗರಿಕತೆಯನ್ನು ಸೃಷ್ಟಿಸಲು ಮುಂದಾದರು. ನಂತರ ಯುರೋಪ್ ಸ್ಟೆಪ್ ಪ್ರದೇಶದ ಪಶುಪಾಲಕರ ಆಗಮನವನ್ನು ಕಂಡಿದ್ದು ಅವರು ಕಾರ್ಡೆಡ್ ವೇರ್, ಬೆಲ್ ಬೀಕರ್ ಮತ್ತು ಇತರ ಸಂಸ್ಕೃತಿಗಳನ್ನು ಸೃಷ್ಟಿಸಿದ ಮತ್ತು/ಅಥವಾ ಹರಡಿದ ಹೊಸ ಜನಸಂಖ್ಯೆಯ ಗುಂಪುಗಳನ್ನು ರೂಪಿಸಲು ಸ್ಥಳೀಯ ನಿವಾಸಿಗಳೊಂದಿಗೆ ಬೆರೆತರು. ದಕ್ಷಿಣ ಏಷ್ಯಾದಲ್ಲಿ, ವಲಸೆ ಬರುತ್ತಿದ್ದ ಸ್ಟೆಪ್ ಪ್ರದೇಶದ ಪಶುಪಾಲಕರು ಹರಪ್ಪಾ ನಾಗರಿಕತೆಯ ಜನರೊಂದಿಗೆ ಬೆರೆತು ಹೊಸ ಆನುವಂಶಿಕ ಗುಂಪು **ಎಎನ್‌ಐ** ಅನ್ನು ಹುಟ್ಟುಹಾಕಿದರೆ, ಹರಪ್ಪಾ ನಾಗರಿಕತೆಯ ಜನರು ಆದ್ಯ ಭಾರತೀಯರ ನೇರ ವಂಶಸ್ಥರಾದ ದಕ್ಷಿಣ ಭಾರತದ ನಿವಾಸಿಗಳೊಂದಿಗೆ ಬೆರೆತು ಹೊಸ ಆನುವಂಶಿಕ ಗುಂಪು **ಎಎಸ್‌ಐ** ಅನ್ನು ಹುಟ್ಟುಹಾಕಿದರು. ಎರಡೂ ಗುಂಪುಗಳು ಮತ್ತೆ ವಿಭಿನ್ನ ವಿಭಿನ್ನ ಪ್ರಮಾಣಗಳಲ್ಲಿ ವಿಭಿನ್ನ ಪ್ರದೇಶಗಳಲ್ಲಿ ಮತ್ತು ವಿಭಿನ್ನ ಅವಧಿಗಳಲ್ಲಿ ಬೆರೆತು, ಇಂದಿನ ಭಾರತದ ಜನಸಂಖ್ಯೆಯನ್ನು ಸೃಷ್ಟಿಸಿವೆ.


ಈ ಅಧ್ಯಾಯದಲ್ಲಿ ಈ ಮೊದಲೇ ರೈಕ್ ಸೂಚಿಸಿದಂತೆ, ಸ್ಟೆಪ್ ಪ್ರದೇಶದಿಂದಾದ ವಲಸೆಗಳಲ್ಲಿ ಪ್ರತಿಬಿಂಬಿತವಾದ ಅಸಮಾನ ಲಿಂಗಾನುಪಾತಕ್ಕೆ ಸಂಬಂಧಿಸಿದ ವಿಷಯದಲ್ಲಿಯೂ ಕೂಡ ಯುರೋಪ್ ಮತ್ತು ದಕ್ಷಿಣ ಏಷ್ಯಾದ ನಡುವೆ ಒಂದು ಸಾಮ್ಯತೆ ಇದೆ. ಭಾರತದ ತಳಿಶಾಸ್ತ್ರಜ್ಞರು ಇಂದಿನ ಭಾರತೀಯರ mtDNA (mitochondrial DNA) ಯನ್ನು ಮಾತ್ರ ನೋಡುತ್ತಿದ್ದುದವರೆಗೆ, ಅವರು ಸ್ಟೆಪ್ ಪ್ರದೇಶದಿಂದಾದ ವಲಸೆಗಳನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಅವರು Y-ವರ್ಣತಂತು ವಂಶಾವಳಿಯನ್ನು ನೋಡಲು ಪ್ರಾರಂಭಿಸಿದಾಗ ಮಾತ್ರವಷ್ಟೇ ಸ್ಟೆಪ್ ಪ್ರದೇಶದಿಂದಾದ ವಲಸೆಗಳ ವಾಸ್ತವಿಕತೆಯು ಸ್ಪಷ್ಟವಾಗಿದ್ದು. ರೈಕ್ ಅವರನ್ನು ಮತ್ತೊಮ್ಮೆ ಉಲ್ಲೇಖಿಸುವುದಾದರೆ: 'ಸ್ಟೆಪ್ ಪ್ರದೇಶದಿಂದ ಬರುತ್ತಿದ್ದ ಪುರುಷ ವಂಶಾವಳಿಯು ಮಿಗಿಲಾಗಿರುವುದು, ರಾಜಕೀಯ ಅಥವಾ ಸಾಮಾಜಿಕ ಅಧಿಕಾರ ಹೊಂದಿದ್ದ ಯಾಮ್ನಾಯರ ಪುರುಷ ವಂಶಸ್ಥರು ಸ್ಥಳೀಯ ಸಂಗಾತಿಗಳನ್ನು ಹೊಂದಿಸಿಕೊಳ್ಳುವ ಸ್ಪರ್ಧೆಯಲ್ಲಿ ಸ್ಥಳೀಯ ಗುಂಪುಗಳಿಗಿಂತ ಹೆಚ್ಚು ಯಶಸ್ವಿಯಾಗಿದ್ದರು ಎಂದು ಸೂಚಿಸುತ್ತದೆ . . . ಸ್ಟೆಪ್ ಪ್ರದೇಶದಿಂದಾದ ವಿಸ್ತರಣೆಗಳಲ್ಲಿ ಅಸಾಧಾರಣ ಶ್ರೇಣಿರಚನೆಗಳು ಮತ್ತು ಅಧಿಕಾರದಲ್ಲಿನ ಅಸಮತೋಲನಗಳು ಪಾತ್ರ ವಹಿಸಿದ್ದವು ಎಂಬುದು ಸ್ಪಷ್ಟವಾಗಿದೆ.'

ಭಾರತದಲ್ಲಿನ ಈ ಅಸಮಾನ ಲಿಂಗಾನುಪಾತದ ಬಗ್ಗೆ ಗಮನ ಸೆಳೆದದ್ದು 2017 ರಲ್ಲಿ ಪ್ರಕಟಗೊಂಡ 'ಎ ಜೆನೆಟಿಕ್ ಕ್ರೋನಾಲಜಿ ಫಾರ್ ದಿ ಇಂಡಿಯನ್ ಸಬ್ ಕಾಂಟಿನೆಂಟ್ ಪಾಯಿಂಟ್ಸ್ ಟು ಹೆವಿಲಿ ಸೆಕ್ಸ್-ಬಯಾಸ್ಡ್ ಡಿಸ್ಪರ್ಸಲ್ಸ್ (A Genetic Chronology for the Indian Subcontinent Points to Heavily Sex-biased Dispersals)'ಎಂಬ ಲೇಖನವು. ಅದು 'ಕಂಚಿನ ಯುಗದಲ್ಲಿ ಮಧ್ಯ ಏಷ್ಯಾದಿಂದ ಆನುವಂಶಿಕ ಮಹಾಪೂರವು ಅಧಿಕವಾಗಿ ಪುರುಷ-ಪ್ರೇರಿತವಾಗಿದ್ದು ಅದು ಪಶುಪಾಲಕ ಇಂಡೋ-ಯುರೋಪಿಯನ್ ಸಮಾಜದ ಲಕ್ಷಣವೆಂದು ಭಾವಿಸಲಾದ ಪಿತೃಪ್ರಧಾನ, ಪಿತೃಗೃಹವಾಸಿ ಮತ್ತು ಪಿತ್ರಾರ್ಜಿತ ಸಾಮಾಜಿಕ ರಚನೆಗೆ ಅನುಗುಣವಾಗಿದೆ' ಎಂದು ಸೂಚಿಸಿತು. ಇಂದಿನ ಭಾರತದ ಜನಸಂಖ್ಯಾ ಗುಂಪುಗಳ mtDNA ವಂಶಾವಳಿಗಳು ಶೇಕಡಾ 70 ರಿಂದ 90 ರಷ್ಟು ಆದ್ಯ ಭಾರತೀಯರಿಂದ ಬಂದಿದೆಯಾದರೆ Y-ವರ್ಣತಂತು ವಂಶಾವಳಿಗಳು ಕೇವಲ ಶೇಕಡಾ 10 ರಿಂದ 40 ರಷ್ಟು ಮಾತ್ರ ಅದೇ ರೀತಿಯ ಪೂರ್ವಜರನ್ನು ಹೊಂದಿವೆ ಎಂದು ಸಹ ಲೇಖನವು ಹೇಳಿತು. ಈ ವ್ಯತ್ಯಾಸವು ನಂತರದ ವಲಸೆಗಳಲ್ಲಿನ ಅಸಮಾನ ಲಿಂಗಾನುಪಾತಕ್ಕೆ ಆರೋಪಿಸಬಹುದು.

ಪಶ್ಚಿಮ ಯುರೋಪ್ ಮತ್ತು ದಕ್ಷಿಣ ಏಷ್ಯಾದ ಅನೇಕ ಸಾಮೂಹಿಕ ವಲಸೆಗಳ ಅನುಭವಗಳಲ್ಲಿ ಒಂದು ಅತಿಮುಖ್ಯವಾದ ವ್ಯತ್ಯಾಸವಿದೆ. ಪಶ್ಚಿಮ ಯುರೋಪಿನಲ್ಲಿ, ಪ್ರತಿ ವಲಸೆಯು ಹಿಂದಿನ ಜನಸಂಖ್ಯೆಯನ್ನು ಗಮನಾರ್ಹವಾಗಿ ಬದಲಾಯಿಸಿತಾದರೆ, ದಕ್ಷಿಣ ಏಷ್ಯಾದಲ್ಲಿ, ಒಟ್ಟಾರೆಯಾಗಿ ಈ ಬದಲಿಯಾಗಿರುವ ಪ್ರಮಾಣವು ತುಂಬಾ ಕಡಮೆಯಾಗಿದೆ. ಉದಾಹರಣೆಗೆ, ಇಂದು ಯುರೋಪಿನ ಅನೇಕ ಭಾಗಗಳಲ್ಲಿ, ಉತ್ತರ ಭಾಗದ ಯುರೋಪಿನಲ್ಲಿನ ಕೆಲವು ಅಪವಾದಗಳನ್ನು ಹೊರತುಪಡಿಸಿ, ಮೂಲ ಬೇಟೆಗಾರ-ಸಂಗ್ರಹಕಾರರ ವಂಶಾವಳಿಯ ಶೇಕಡಾವಾರು ಪ್ರಮಾಣವು ಒಂದೇ ಅಂಕೆಯ ಪ್ರಮಾಣಕ್ಕೆ ಇಳಿದಿದೆ. ಇದಕ್ಕೆ ವ್ಯತಿರಿಕ್ತವಾಗಿ, ಭಾರತದಲ್ಲಿ, ನೀವು ಇಡೀ ಜೀನೋಮ್ ಅನ್ನು ನೋಡಿದಾಗ (Y-ವರ್ಣತಂತು ಅಥವಾ mtDNA ಯನ್ನು ಮಾತ್ರ ನೋಡುವುದರ ಬದಲು) ಹೆಚ್ಚಿನ ಜನಸಂಖ್ಯಾ ಗುಂಪುಗಳಿಗೆ ಆದ್ಯ ಭಾರತೀಯರ ವಂಶಾವಳಿ ಇನ್ನೂ ಶೇಕಡಾ 50 ರಿಂದ 65 ರ ನಡುವೆ ಇದೆ.

ಈ ವ್ಯತ್ಯಾಸವು ಭಾಷಾ ವಿತರಣೆಯಲ್ಲೂ ಸಹ ಗೋಚರವಾಗುತ್ತದೆ: ಇಂದು ಪಶ್ಚಿಮ ಯುರೋಪಿನ ಜನರಲ್ಲಿ ಶೇ. 94 ರಷ್ಟು ಜನರು ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡುತ್ತಾರೆಯಾದರೆ, ಕೇವಲ ಶೇ. 75 ರಷ್ಟು ಭಾರತೀಯರು ಮಾತ್ರ ಅದನ್ನು ಮಾತನಾಡುತ್ತಾರೆ. ಸುಮಾರು ಶೇ. 20 ರಷ್ಟು ಭಾರತೀಯರು ದ್ರಾವಿಡ ಭಾಷೆಗಳನ್ನು ಮಾತನಾಡುತ್ತಾರೆಯಾದರೆ, ಪಶ್ಚಿಮ ಯುರೋಪ್‌ನಲ್ಲಿ ಇದೇ ರೀತಿಯ ವ್ಯಾಪಕವಾಗಿ ಮಾತನಾಡುವ ಇಂಡೋ-ಯೂರೋಪಿಯನ್ ಅಲ್ಲದ ಭಾಷೆ ಇಲ್ಲ.

ಕುತೂಹಲಕಾರಿ ಎಂದರೆ, ಇಂದು ಪಶ್ಚಿಮ ಯುರೋಪಿನಲ್ಲಿ ಉಳಿದಿರುವ ಏಕೈಕ ದೇಶೀಯ ಇಂಡೋ-ಯುರೋಪಿಯನ್ ಅಲ್ಲದ ಭಾಷೆಯಾದ ಬಾಸ್ಕ್ ಅನ್ನು, ಯುರೋಪಿಗೆ ಬೃಹತ್ ಪ್ರಮಾಣದ ಸ್ಟೆಪ್ ಹುಲ್ಲುಗಾವಲಿನಿಂದ ವಲಸೆಯನ್ನು ತಡೆದ ಪ್ರದೇಶದಲ್ಲಿ ಮಾತನಾಡಲಾಗುತ್ತಿದೆ. ಬಾಸ್ಕ್ ಜನಾಂಗದವರು ಅವರ ವಂಶಾವಳಿಯನ್ನು ಸ್ಟೆಪ್ ಹುಲ್ಲುಗಾವಲಿನ ವಲಸಿಗರಿಗಿಂತ ಹೆಚ್ಚಿನದಾಗಿ ಆರಂಭದ ಯುರೋಪಿಯನ್ ರೈತರು ಮತ್ತು ಬೇಟೆಗಾರ-ಸಂಗ್ರಹಕಾರರಿಂದ ಪಡೆದಿರುತ್ತಾರೆ. ಆದ್ದರಿಂದ, ಅವರು ತಮ್ಮ ಸ್ಟೆಪ್ ವಲಸೆಯ ಪೂರ್ವದ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ. (ಇಲ್ಲಿ ಕೆಲವು ರೀತಿಗಳಲ್ಲಿ ದಕ್ಷಿಣ ಭಾರತದ ದ್ರಾವಿಡ ಭಾಷೆಗಳೊಂದಿಗೆ ಸಾಮ್ಯತೆ ಇರಬಹುದು, ಏಕೆಂದರೆ ಎರಡೂ ಕೂಡ ಸ್ಟೆಪ್ ಹುಲ್ಲುಗಾವಲಿನ ವಲಸಿಗರ ಪ್ರಾಬಲ್ಯದಿಂದ ತಪ್ಪಿಸಿಕೊಂಡ ಪ್ರದೇಶಗಳಲ್ಲಿ ಬದುಕುಳಿಯಲು ಯಶಸ್ವಿಯಾದವು.)



ಯುರೋಪಿಗೆ ಸ್ಟೆಪ್ ಪ್ರದೇಶದಿಂದ ಆದ ವಲಸೆಗಳಿಗಿದ್ದ ಪ್ರಾಚೀನ **ಡಿಎನ್ಎ** ಪುರಾವೆಗಳು ಅನೇಕ ಪುರಾತತ್ತ್ವಜ್ಞರನ್ನು ಆಶ್ಚರ್ಯಚಕಿತಗೊಳಿಸಿದವು, ಏಕೆಂದರೆ ಎರಡನೆಯ ಮಹಾಯುದ್ಧದ ನಂತರ ಅವರು ನಾಟ್ಜಿಗಳು ಮತ್ತು ಅವರ ಸಿದ್ಧಾಂತಗಳು ಹಾಗೂ ನಂಬಿಕೆಗಳ ಬಗ್ಗೆ ತಿರಸ್ಕಾರವನ್ನು ಬೆಳೆಸಿಕೊಂಡಿದ್ದು ಅದರಲ್ಲಿ ಪೂರ್ವ ಭಾಗದ ಯುರೋಪಿಯನ್ನರು ಅಥವಾ ಯಹೂದಿಗಳಿಗಿಂತ ಭಿನ್ನವಾಗಿ ಅವರು 'ಆರ್ಯರು' ಎಂಬ ಶ್ರೇಷ್ಠ ಮತ್ತು 'ಶುದ್ಧ (ಕಲಬೆರಕೆಯಿಲ್ಲದ) ಜನಾಂಗ' ಕ್ಕೆ ಸೇರಿದವರು; ಅವರು ಹಿಂದೆ ಅನೇಕ ನಾಡುಗಳನ್ನು ವಶಪಡಿಸಿಕೊಂಡಿದ್ದರು ಮತ್ತು ತಮ್ಮ 'ಕಾರ್ಡೆಡ್ ವೇರ್ ಸಂಸ್ಕೃತಿ' ಯನ್ನು ಹರಡಿದ್ದರು; ಮತ್ತು ಆದ್ದರಿಂದ ಅವರು ತಮ್ಮ ಸುತ್ತಲಿನ ಇತರರ ಭೂಮಿಗೆ ಸಹಜ ಮತ್ತು ಆನುವಂಶಿಕ ಹಕ್ಕನ್ನು ಹೊಂದಿದ್ದರು ಎಂಬಂತ ಕಲ್ಪನೆಯೂ ಸೇರಿತ್ತು. ನಾಟ್ಜಿ ವಿಚಾರಗಳ ಈ ನಿರಾಕರಣೆಯ ಭಾಗವಾಗಿ, ಪುರಾತತ್ತ್ವಜ್ಞರು ಹಿಂದೆ ಯುರೋಪ್ ಆಕ್ರಮಣಗಳು ಅಥವಾ ವಲಸೆಗಳನ್ನು ಕಂಡಿತ್ತು ಮತ್ತು ಅವು ಸಂಸ್ಕೃತಿಯಲ್ಲಿ ಬದಲಾವಣೆ ತಂದಿತು ಎಂಬ ಅಭಿಪ್ರಾಯವನ್ನು ವಿರೋಧಿಸಿದರು. ಆದಾಗ್ಯೂ, ಹೊಸ ಆನುವಂಶಿಕ ಆವಿಷ್ಕಾರಗಳು ಪುರಾತತ್ತ್ವಜ್ಞರು ಮತ್ತು ನಾಟ್ಜಿಗಳಿಬ್ಬರ ವಾದಗಳನ್ನು ತಪ್ಪೆಂದು ನಿರೂಪಿಸಿವೆ. ಪುರಾತತ್ತ್ವಜ್ಞರು ನಂಬಿದ್ದಕ್ಕಿಂತ ಭಿನ್ನವಾಗಿ, ವಲಸೆಗಳು ಯುರೋಪಿನ ಸಂಸ್ಕೃತಿಯನ್ನು ಖಂಡಿತ ಬದಲಾಯಿಸಿತ್ತು ಎಂದು ನಮಗೆ ಈಗ ತಿಳಿದಿದೆ. ಮತ್ತು ನಾಟ್ಜಿಗಳು ನಂಬಿದ್ದಕ್ಕಿಂತ ಭಿನ್ನವಾಗಿ, ಅವರು 'ಆರ್ಯರು' ಎಂದು ಕರೆಯುತ್ತಿದ್ದ ಜನ ಸಮುದಾಯವಾದ ಸ್ಟೆಪ್ ಪ್ರದೇಶದ ಪಶುಪಾಲಕರು, ಸ್ವತಃ ಮಿಶ್ರ ವಂಶಾವಳಿಯ ಕುರುಹನ್ನು ಹೊಂದಿದ್ದು ಅವರು 'ಶುದ್ಧ ಜನಾಂಗದವರು' ಎಂಬ ಕಲ್ಪನೆಯು ಅಸಂಭಾವ್ಯವಾಗಿದೆ. ಇನ್ನೂ ಹೆಚ್ಚು ಮನಮುಟ್ಟುವಂತೆ ಹೇಳಬೇಕೆಂದರೆ, ಅವರು ನಾಟ್ಜಿಗಳಿಗೆ ತೀವ್ರ ತಾತ್ಸಾರವಿದ್ದ ಪ್ರದೇಶವಾದ ಪೂರ್ವ ಯುರೋಪಿನಿಂದ ಬಂದವರಾಗಿದ್ದರು.

ನಾಟ್ಜಿ ಸಿದ್ಧಾಂತಗಳನ್ನು ತಳ್ಳಿಹಾಕುವ ಉದ್ವೇಗದ ಹೊರತಾಗಿ, ಅನೇಕ ಪುರಾತತ್ತ್ವಜ್ಞರು ಮತ್ತು ಇತಿಹಾಸಕಾರರು ಸಾಮೂಹಿಕ ವಲಸೆಗಳನ್ನು ಕುರಿತು ಸಂದೇಹವನ್ನು ವ್ಯಕ್ತಪಡಿಸುವುದಕ್ಕೆ ಇತರ ಕಾರಣಗಳನ್ನೂ ಸಹ ಹೊಂದಿದ್ದರು. ಉದಾಹರಣೆಗೆ, ಪುರಾತತ್ವಶಾಸ್ತ್ರಜ್ಞರಾದ ಕಾಲಿನ್ ರೆನ್‌ಫ್ರೂ (Colin Renfrew) ಅವರು ಒಂದು ವೇಳೆ ಕೃಷಿ ಜೀವನಶೈಲಿಯು ವ್ಯಾಪಕವಾಗಿ ಹರಡಿದಲ್ಲಿ ಮತ್ತು ಜನಸಂಖ್ಯೆಯು ಥಟ್ಟನೇರಿದಲ್ಲಿ, ಈ ಜನನಿಬಿಡ ಪ್ರದೇಶಗಳ ಜನಸಂಖ್ಯೆಯ ಸ್ವರೂಪವನ್ನು ಬದಲಾಯಿಸುವಷ್ಟು ದೊಡ್ಡ ಪ್ರಮಾಣದಲ್ಲಿ ಯಾವುದೇ ಹೊಸ ವಲಸೆಗಳು ಸಂಭವಿಸಲು

ಕಷ್ಟಕರವಾಗಿದ್ದಿರಬಹುದು ಎಂದು ಭಾವಿಸಿದ್ದರು. ಹಾಗಾದರೆ ಯಾಮ್ನಾಯ ಸಂಸ್ಕೃತಿಯ ಜನರು ಹೇಗೆ ಗಮನಾರ್ಹ ಅಡೆತಡೆಗಳನ್ನು ಎದುರಿಸಿದ ಹೊರತಾಗಿಯೂ ಬದುಕುಳಿದರು?

ಒಂದು ವಿವರಣೆಯೆಂದರೆ, ಕೃಷಿ ಜೀವನಶೈಲಿಯು ಹರಡಿದಾಗ ಜನಸಂಖ್ಯೆಯು ಗಮನಾರ್ಹವಾಗಿ ಹೆಚ್ಚಾದರೂ, ಅನೇಕ ಪ್ರದೇಶಗಳಲ್ಲಿ ನಿಬಿಡವಾದ ಜನಸಂಖ್ಯೆ ಇರಲಿಲ್ಲ. ಉದಾಹರಣೆಗೆ, ಆ ಕಾಲದ ಅತಿದೊಡ್ಡ ನಾಗರಿಕತೆಯಾದ, ಸಂಪೂರ್ಣವಾಗಿ ಅಭಿವೃದ್ಧಿಗೊಂಡ ಹರಪ್ಪಾ ನಾಗರಿಕತೆಯ ಅತ್ಯಧಿಕ ಜನಸಂಖ್ಯೆಯ ಅಂದಾಜು ಐದು ಮಿಲಿಯನ್ ಆಗಿತ್ತು - ಅಫ್ಘಾನಿಸ್ತಾನದ ಶೋರ್ತುಘೈ (Shortughai) ನಿಂದ ಮಕ್ರಾನ್ (Makran) ಕರಾವಳಿಯ ಸುತ್ಕಗನ್ ಡೋರ್ (Sutkagan Dor) ವರೆಗೆ ಒಂದು ಮಿಲಿಯನ್ ಚದರ ಕಿಲೋಮೀಟರ್‌ಗಳಷ್ಟು ಹರಡಿತ್ತು. ಮತ್ತು ಅದು ಇಂದಿನ ಒಂದು ನಗರ, ಅಹಮದಾಬಾದ್ ನ ಜನಸಂಖ್ಯೆಗಿಂತ ಕಡಮೆ. ಯುರೋಪ್‌ನ ವಿಷಯದಲ್ಲಿ, ವಲಸೆ ಬರುತ್ತಿದ್ದ ಯಾಮ್ನಾಯದವರು ಯುರೋಪಿಯನ್ ನವಶಿಲಾಯುಗದ ರೈತರು ಆಕ್ರಮಿಸಿಕೊಂಡಿರದ ವಿಸ್ತಾರವಾದ ಕಾಡುಪ್ರದೇಶಗಳನ್ನು ಅವರಿಗೆ ಪರಿಚಿತವಾಗಿದ್ದ ಭೌಗೋಳಿಕ ಲಕ್ಷಣವನ್ನು ಹೊಂದಿರುವ ಹುಲ್ಲುಗಾವಲುಗಳಾಗಿ ಪರಿವರ್ತಿಸಿದರು ಎಂದು ಪುರಾತತ್ತ್ವದ ಪುರಾವೆಗಳು ಸೂಚಿಸುತ್ತವೆ.

ಆದರೆ ಮತ್ತೊಂದು ವಿವರಣೆಯಿರುವ ಸಾಧ್ಯತೆಯು ಸ್ಪಷ್ಟವಾಯಿತು; ಅದು ಯಾವಾಗೆಂದರೆ, 2015 ರಲ್ಲಿ ತಳಿಶಾಸ್ತ್ರಜ್ಞ ಎಸ್ಕೆ ವಿಲ್ಯಾರ್ಸ್ಲೆವ್ (Eske Willerslev) ಮತ್ತು ಇತರ ಸಹ-ಲೇಖಕರಿಂದ ಬರೆಯಲಾದ ಲೇಖನವು, ಕಂಚಿನ ಯುಗದ ಯುರೇಷಿಯಾ ಪ್ರದೇಶದಿಂದ ತೆಗೆದುಕೊಂಡು ಪರಿಶೀಲಿಸಲಾದ 101 ಪ್ರಾಚೀನ ವ್ಯಕ್ತಿಗಳ ಪೈಕಿ ಏಳು ವ್ಯಕ್ತಿಗಳಲ್ಲಿ ಸಾಂಕ್ರಾಮಿಕ ಪ್ಲೇಗ್ ರೋಗಕ್ಕೆ ಕಾರಣವಾಗುವ ಬ್ಯಾಕ್ಟೀರಿಯಾ ಆದ *'ಯೆರ್ಸಿನ್ಯಾ ಪೆಸ್ಟಿಸ್ (Yersinia pestis)'* ಅನ್ನು ಹೋಲುವ **ಡಿಎನ್ಎ** ಅನುಕ್ರಮಗಳು (ವಂಶವಾಹಿಯ ವರಸೆಯ ಅನುಕ್ರಮಗಳು) ಇರುವುದನ್ನು ಅವರು ಗುರುತಿಸಿದ್ದರು ಎಂದು ಹೇಳಿದಾಗ. ಈ ನಮೂನೆಗಳು ಯಾಮ್ನಾಯ-ಸಂಬಂಧಿತ ಸಂಸ್ಕೃತಿಗಳಾದ ಕಾರ್ಡೆಡ್ ವೇರ್, ಅಫನಸಿಯೇವೋ, ಸಿಂಟಾಷ್ತಾ ಮತ್ತು ಆಂಡ್ರೊನೋವೋ ಸಂಸ್ಕೃತಿಗಳಲ್ಲಿ ಸಮಾಧಿ ಮಾಡಲಾದ ವ್ಯಕ್ತಿಗಳಿಗೆ ಸೇರಿದ್ದವು. ಅಧ್ಯಯನವು ಹೀಗೆ ತೀರ್ಮಾನಿಸಿತು: 'ಇತ್ತೀಚೆಗೆ ಪ್ರಾಚೀನ ಜೀನೋಮಿಕ್ಸ್ ಅಧ್ಯಯನಗಳು ಯುರೋಪ್ ಮತ್ತು ಏಷ್ಯಾದಲ್ಲಿನ ಕಂಚಿನ ಯುಗವು ಗಹನವಾದ ಮತ್ತು ಪುರಾತತ್ತ್ವ ಶಾಸ್ತ್ರವು ವಿವರಿಸುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಜೊತೆಜೊತೆಗೆ ಆದಂತ ದೊಡ್ಡ ಪ್ರಮಾಣದಲ್ಲಿನ ಜನಸಂಖ್ಯೆಯ ವಲಸೆಗಳು, ಮಿಶ್ರಣ ಮತ್ತು ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಗಳಿಂದ ನಿರೂಪಿಸಲ್ಪಟ್ಟಿದೆ ಎಂದು ತೋರಿಸಿವೆ. ನಮ್ಮ ಸಂಶೋಧನೆಗಳ ಬೆಳಕಿನಲ್ಲಿ, ಪ್ಲೇಗ್ ಆಸ್ಫೋಟಗಳು ಈ ಅತ್ಯಂತ ಬದಲಾವಣೆಸಾಧ್ಯದ ಜನಸಂಖ್ಯಾ ಘಟನೆಗಳನ್ನು ಸುಗಮಗೊಳಿಸಿರಬಹುದು - ಅಥವಾ ಈ ಘಟನೆಗಳು ಪ್ಲೇಗ್ ರೋಗವನ್ನು ಸುಗಮಗೊಳಿಸಿರಬಹುದು ಎಂಬುದು ಸಂಭವನೀಯ.'

ಸ್ಟೆಪ್ ಪ್ರದೇಶದಿಂದ ಬಂದ ಹೊಸ ಜನರ ಮಹಾಪೂರವು ತಮ್ಮೊಂದಿಗೆ ಹೊತ್ತೊಯ್ದಿದ್ದ ರೋಗಗಳು ಯುರೋಪ್ ನ ಜನಸಂಖ್ಯಾ ಸ್ವರೂಪವನ್ನು ಬದಲಾಯಿಸುವಲ್ಲಿ ಪಾತ್ರವಹಿಸಿತ್ತು ಎಂದಾದಲ್ಲಿ, ಅದು ಖಂಡಿತವಾಗಿಯೂ ಅದೇ ಕೊನೆಯ ಬಾರಿಗೆ ಆ ರೀತಿಯ ಬದಲಾವಣೆಯನ್ನು ಕಾಣುವುದು ಎಂದೇನಿರಲಿಲ್ಲ. ಯುರೋಪಿಯನ್ನರು ಅಮೆರಿಕಾದ ವಿಶಾಲ ಭೌಗೋಳಿಕ ಪ್ರದೇಶಗಳಿಗೆ ತಂದ ರೋಗಗಳು ಆ ಖಂಡದ ಮೂಲ ನಿವಾಸಿಗಳನ್ನು ನಿರ್ನಾಮ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಅವು ಆರಂಭಿಕ ಸ್ಟೆಪ್ ಪ್ರದೇಶದ ವಲಸಿಗರು ಭಾರತವನ್ನು ತಲುಪಿದ ಸುಮಾರು ಅದೇ ಸಮಯದಲ್ಲಿ ಅವನಿತಿ ಹೊಂದಲು ಪ್ರಾರಂಭಿಸುತ್ತಿದ್ದ ಹರಪ್ಪಾ ನಾಗರಿಕತೆಯು ಕಣ್ಮರೆಯಾಗುವುದರಲ್ಲಿ ಪಾತ್ರವಹಿಸಿದ್ದವೇ? ಅಂತ್ಯದ ಹರಪ್ಪಾ ನಾಗರಿಕತೆಯ ಕಾಲಘಟ್ಟದ ಹರಪ್ಪಾ, ಮೊಹೆನ್ಜೊದಾರೋ ಅಥವಾ ಕಾಳಿಬನ್ಗನ್ (Kalibangan)ನಂತಹ ನಗರಗಳಿಂದ ನೇರವಾದ ಪ್ರಾಚೀನ **ಡಿಎನ್ಎ** ಪುರಾವೆಗಳು ನಮಗೆ ಸಿಗುವವರೆಗೆ ಈ ವಿಷಯವು ನಮಗೆ ತಿಳಿಯುವುದಿಲ್ಲ. ಆದರೆ ಹರಪ್ಪಾ ಜನಸಂಖ್ಯೆಯನ್ನು ಕಡಮೆಮಾಡುವುದರಲ್ಲಿ ರೋಗಗಳು ಖಂಡಿತವಾಗಿಯೂ ಪಾತ್ರವಹಿಸಿದ್ದವು ಎಂದು ನಾವು ಕಂಡುಕೊಂಡರೂ ಸಹ, ಇದು ನಾಗರಿಕತೆಯ ಅವನತಿಗೆ ಕಾರಣವಾಗಿರಲಿಲ್ಲ ಎಂಬುದು ತಕ್ಕಮಟ್ಟಿಗೆ ಖಚಿತ, ಏಕೆಂದರೆ ಈಜಿಪ್ಟ್, ಮೆಸಪೊಟೇಮಿಯಾ ಮತ್ತು ಚೀನಾದಂತಹ ಇತರ ನಾಗರಿಕತೆಗಳನ್ನು ಬರಗಾಲವು ನಾಶಮಾಡುತ್ತಿದ್ದಂತ ಸುಮಾರು

ಅದೇ ಸಮಯದಲ್ಲಿ, ದೀರ್ಘಾವಧಿಯ ಬರಗಾಲವು ಈ ನಾಗರಿಕತೆಯನ್ನು ನೆಲಸಮಮಾಡಿತು ಎಂಬುದಕ್ಕೆ ಹೆಚ್ಚೆಚ್ಚು ಪುರಾವೆಗಳು ಸಿಗುತ್ತಿವೆ.

ಹರಪ್ಪಾ ನಾಗರಿಕತೆಯ ಅವನತಿಗೆ ಸಂಭವನೀಯ ಕಾರಣಗಳ ಕುರಿತು ಅತ್ಯಂತ ಸಮಗ್ರವಾದ, ಬಹು-ವರ್ಷಗಳ ಕಾಲ ನಡೆಸಿದ ಭೂವೈಜ್ಞಾನಿಕ ಅಧ್ಯಯನವು 2012 ರಲ್ಲಿ 'ಫ್ಲೂವಿಯಲ್ ಲ್ಯಾಂಡ್ಸ್ಕೇಪ್ಸ್ ಆಫ್ ದ ಹರಪ್ಪನ್ ಸಿವಿಲೈಸೇಷನ್ (Fluvial Landscapes of the Harappan Civilization)'[5] ಎಂಬ ಶೀರ್ಷಿಕೆಯುಳ್ಳ ಲೇಖನದಲ್ಲಿ ಪ್ರಕಟಗೊಂಡಿದ್ದು, ಅದೊಂದು ಸ್ಪಷ್ಟ ಕಾರಣವನ್ನು ಗುರುತಿಸಿತು: ದೀರ್ಘಕಾಲದ ಬರಗಾಲವು ಅಂತಿಮವಾಗಿ ಮುಂಗಾರು ಮಳೆಗಳಿಂದ ತುಂಬಿದ ನದಿಗಳನ್ನು ಬತ್ತಿಹೋಗುವಂತೆ ಅಥವಾ ಅವು ಕಾಲೋಚಿತವಾಗುವಂತೆ ಮಾಡಿ ನದಿ ಹರಿಯುವ ಹಾದಿಗಳುದ್ದಕ್ಕೂ ವಾಸಯೋಗ್ಯತೆಯ ಮೇಲೆ ಪರಿಣಾಮ ಬೀರಿತು. ಉಲ್ಲೇಖಿಸುವುದಾದರೆ: 'ಜಲರಾಶಿಯ ಸ್ಥಿತಿಯ ಒತ್ತಡವು ಹರಪ್ಪಾದ ನಗರ ಜೀವನವನ್ನು ಬೆಂಬಲಿಸುತ್ತಿದ್ದಂತ ಕೃಷಿ ಉತ್ಪಾದನೆಯು ಪ್ರತಿಕೂಲ ಪರಿಸ್ಥಿಗಳಿಗೆ ಪಕ್ಕಾಗುವ ಸಾಧ್ಯತೆಯನ್ನು ಹೆಚ್ಚಿಸಿದ್ದು ಅದು ಆ ಪ್ರದೇಶಗಳ ನೆಲಸೆಗಳ ಗಾತ್ರದಲ್ಲಿ ಕಡಿತ, ಬೆಳೆಗಳ ವೈವಿಧ್ಯೀಕರಣ, ಮತ್ತು ಮೇಲ್ಭಾಗದ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ತೇವಾಂಶವುಳ್ಳ ಮುಂಗಾರು ಪ್ರದೇಶಗಳ ನೆಲಸೆಗಳ ಪ್ರಮಾಣದಲ್ಲಿ ತೀವ್ರ ಹೆಚ್ಚಳಕ್ಕೆ ಕಾರಣವಾಯಿತು. '

ಭೂವೈಜ್ಞಾನಿಕ ಸಮಯದ ಅಧಿಕೃತ ಪಾಲಕರಾದ ಅಂತರಾಷ್ಟ್ರೀಯ ಸ್ತರವಿಜ್ಞಾನ ಆಯೋಗ (ICS (ಐಸಿಎಸ್)- International Commission on Stratigraphy)ವು ಜುಲೈ 2018 ರಲ್ಲಿ 'ಮೆಘಾಲಯನ್' ಎಂಬ ಹೊಸ ಯುಗವನ್ನು ಪರಿಚಯಿಸಿದಾಗ ಈ ಅಧ್ಯಯನದ ಸಂಶೋಧನೆಯು ನಿರ್ಣಾಯಕವಾಗಿ ದೃಢೀಕರಿಸಲ್ಪಟ್ಟಿತು; ಮತ್ತು ಈ ಯುಗವು 2200 BCE ಯಿಂದ ಇಂದಿನವರೆಗೆ ನಡೆಯುತ್ತಿದ್ದು ಅದು ಪ್ರಪಂಚದಾದ್ಯಂತ ಇದ್ದಂತ ಹಲವಾರು ನಾಗರಿಕತೆಗಳನ್ನು - ಈಜಿಪ್ಟ್, ಮೆಸಪೊಟೇಮಿಯಾ, ಚೀನಾ ಮತ್ತು ಸಹಜವಾಗಿ ಭಾರತದಲ್ಲಿ - ನಾಶ ಮಾಡಿದ ಮಹಾ ಬರಗಾಲದೊಂದಿಗೆ ಪ್ರಾರಂಭವಾಯಿತು. ಈ ಮಹಾ ಬರಗಾಲವು ಸಾಗರ ಮತ್ತು ವಾತಾವರಣದ ಪರಿಚಲನೆಯಲ್ಲಿನ ಬದಲಾವಣೆಗಳಿಂದ ಪ್ರಚೋದಿತವಾಗಿರಬಹುದಾದ ಸಾಧ್ಯತೆ ಇದೆ.

ಆದ್ದರಿಂದ ಹಿನ್ನೋಟದಲ್ಲಿ, 1944 ಮತ್ತು 1948 ರ ನಡುವೆ ಬ್ರಿಟಿಷ್ ಪುರಾತತ್ವಶಾಸ್ತ್ರಜ್ಞ ಮತ್ತು ಭಾರತದ ಪುರಾತತ್ವ ಸಮೀಕ್ಷೆಯ ಮಹಾನಿರ್ದೇಶಕನಾಗಿದ್ದ ಸರ್ ರಾಬರ್ಟ್ ಎರಿಕ್ ಮಾರ್ಟಿಮರ್ ವೀಲರ್ (Sir Robert Eric Mortimer Wheeler), 'ಸಾಂದರ್ಭಿಕ ಪುರಾವೆಗಳ ಆಧಾರದ ಮೇಲೆ, ಇಂದ್ರನು ಆರೋಪಿಯಾಗಿದ್ದಾನೆ!' ಎಂದು ಬರೆದಾಗ ಅವರು, ಹರಪ್ಪಾ ನಾಗರಿಕತೆಯು ಕಣ್ಮರೆ ಆಗಿದಕ್ಕೆ ತಪ್ಪು ವ್ಯಕ್ತಿಯನ್ನು ದೂಷಿಸಿದಂತೆ ಕಾಣುತ್ತದೆ. ಖಂಡಿತವಾಗಿಯೂ ಅವರು ಯಾವುದೇ ಪುರಾತತ್ವ ಪುರಾವೆಗಳಿಲ್ಲದಂತ 'ಆಕ್ರಮಿಸಿಕೊಳ್ಳುತ್ತಿದ್ದ ಆರ್ಯರು' ಹರಪ್ಪಾ ನಾಗರಿಕತೆಯನ್ನು ನಾಶಮಾಡಿದರು ಎಂದು ಸೂಚಿಸುತ್ತಿದ್ದರು. ಆದರೆ ಅವರು ಮಳೆಯ ಅಧಿಪತಿ ವರುಣನಿಗೆ ಹೆಚ್ಚು ಗಮನಕೊಡಬೇಕಿತ್ತು![6]

## ಅವನತಿಯ ನಂತರ

ಹರಪ್ಪಾ ನಾಗರಿಕತೆಯ ಅವನತಿಗೆ ಒಂದಲ್ಲ, ಬಹಳಷ್ಟು ಕಾರಣಗಳಿರುವ ಸಾಧ್ಯತೆಯು ಖಂಡಿತವಾಗಿಯೂ ಇದೆ. ದೀರ್ಘ ಕಾಲದ ಬರಗಾಲವು ಆ ನಾಗರಿಕತೆಯ ಶಕ್ತಿಯನ್ನು ಬರಿದು ಮಾಡಿರಬಹುದು ಮತ್ತು ತನ್ನದೇ ಆದ ಬಿಕ್ಕಟ್ಟನ್ನು ಅನುಭವಿಸುತ್ತಿದ್ದ ಮೆಸಪೊಟೇಮಿಯಾದೊಂದಿಗಿನ ಅದರ ವ್ಯಾಪಾರವನ್ನು ಸಹ ನಾಶಮಾಡಿರಬಹುದು; ತತ್ಪರಿಣಾಮವಾಗಿ ಹರಪ್ಪಾ ನಾಗರಿಕತೆಯ ಪ್ರಬಲ ಸಿದ್ಧಾಂತವು (ಸಮಾಜೋ-ರಾಜಕೀಯ ಯಾ ಆಡಳಿತಾತ್ಮಕ ಚೌಕಟ್ಟು) ಕುಸಿದಿರಬಹುದಾಗಿದ್ದು ಅದು ಎಲ್ಲೆಡೆಯೂ ಕಂಡುಬರುವಂತ ಅಧಿಕಾರ ಹಾಗೂ ವಾಣಿಜ್ಯದ ಸಂಕೇತಗಳಾದ ಮುದ್ರೆಗಳು ಮತ್ತು ಲಿಪಿಯು ಕಣ್ಮರೆಯಾಗುವುದಕ್ಕೆ ಕಾರಣವಾಗಿರಬಹುದು; ಆಂತರಿಕ ದಂಗೆಗಳು ಇದ್ದಿರಬಹುದು; ಹರಪ್ಪಾದವರು ಹಳೆಯ ವ್ಯವಸ್ಥೆಯನ್ನು

ಮುಂದುವರಿಸಿಕೊಂಡು ಹೋಗಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುವ ಬದಲು ಗಂಗಾ ಕಣಿವೆಯಂತಹ ಹೊಸ ಫಲವತ್ತಾದ ಪ್ರದೇಶಗಳಿಗೆ ತೆರಳಿ ಹೊಸದಾಗಿ ಜೀವನವನ್ನು ಪ್ರಾರಂಭಿಸಲು ಲಭ್ಯವಿರುವ ದಾರಿಯನ್ನು ತೆಗೆದುಕೊಂಡಿರಬಹುದು; ಮತ್ತು ಯುರೇಷಿಯನ್ ಸ್ಟೆಪ್ ಪ್ರದೇಶದಿಂದ ಬಂದ ಯೋಧರಂತಹ ವಲಸಿಗರ ಹೊಸ ಅಲೆಯ ಮಹಾಪೂರವು ಈ ವ್ಯವಸ್ಥೆಯನ್ನು ಶಾಶ್ವತವಾಗಿ ಮುರಿದ ಅಂತಿಮ ಕಾರಣವಾಗಿದ್ದಿರಬಹುದು. ಆದರೆ ನಾವು ನಂತರ ನೋಡಲಿರುವಂತೆ, ಹರಪ್ಪಾ ನಾಗರಿಕತೆಯು ಸುಮಾರು 1900 BCE ವೇಳೆಗೆ ಅವನತಿ ಹೊಂದಿರಬಹುದಾದರೂ ಅಲ್ಲಿನ ಜನರಾಗಲಿ ಭಾಷೆಯಾಗಲಿ ಇಲ್ಲಾ ಅದರ ಕಾಲದಲ್ಲಿ ಅತಿದೊಡ್ಡದಾಗಿದ್ದ ನಾಗರಿಕತೆಗೆ  ಸಂಬಂಧಿಸಿದ ಎಲ್ಲಾ ಸಾಂಸ್ಕೃತಿಕ ನಂಬಿಕೆಗಳು ಮತ್ತು ಆಚರಣೆಗಳಾಗಲಿ ಕಣ್ಮರೆಯಾಗಲಿಲ್ಲ.

ಇದು ಏಕೆಂದರೆ ದೀರ್ಘ ಬರಗಾಲದಿಂದಾಗಿ ನಾಗರಿಕತೆಯು ಮಂಕಾದಾಗ, ಹರಪ್ಪಾದವರು ಹೊಸ ಫಲವತ್ತಾದ ಭೂಮಿಯನ್ನು ಹುಡುಕುತ್ತಾ ಮತ್ತು ತಮ್ಮ ಭಾಷೆ, ಸಂಸ್ಕೃತಿ ಮತ್ತು ಅವರ ಕೆಲವೊಂದು ಆಚರಣೆಗಳನ್ನಾದರೂ ತಮ್ಮೊಂದಿಗೆ ಕೊಂಡೊಯ್ಯುತ್ತಾ ಪೂರ್ವ ಮತ್ತು ದಕ್ಷಿಣದ ಎರಡೂ ಕಡೆಗೆ ಹರಡಿದರು ಎಂಬ ಕಾರಣಕ್ಕೆ. (ಹರಪ್ಪಾ ನಾಗರಿಕತೆಯಿಂದ ಹುಟ್ಟಿ ಮುಂದುವರಿದ ಸಮಾಜಗಳಿಗಾಗಿ ನೋಡಿ ಪು. 195–97.)

‘ಆರ್ಯರು’ ಸುಮಾರು ಇದೇ ವೇಳೆಯಲ್ಲಿ ಅಥವಾ ಸ್ವಲ್ಪ ಕಾಲದ ನಂತರ, ಪಶುಪಾಲಕರ ಜೀವನಶೈಲಿ, ದೊಡ್ಡ ಪ್ರಮಾಣದ ಆಹುತಿ ಆಚರಣೆಗಳಂತಹ ಹೊಸ ಧಾರ್ಮಿಕ ಆಚರಣೆಗಳು, ಯೋಧರ ಸಂಪ್ರದಾಯ ಮತ್ತು ಕುದುರೆ ಹಾಗೂ ಲೋಹಶಾಸ್ತ್ರದ ವಿಷಯದಲ್ಲಿ ಪಾಂಡಿತ್ಯ ಹೊಂದಿರುವುದರೊಂದಿಗೆ ಬಂದರು. ಇದರ ಪರಿಣಾಮವಾಗಿ ಜನಸಂಖ್ಯೆಗಳ ಬೆರೆಯುವಿಕೆ ಮತ್ತು ಅಂತಿಮವಾಗಿ ಉತ್ತರ ಭಾರತದಾದ್ಯಂತ ಇಂಡೋ-ಯುರೋಪಿಯನ್ ಭಾಷೆಗೆ ಬದಲಾವಣೆಮಾಡಿಕೊಳ್ಳುವುದನ್ನು  ಪ್ರಭಾವಿಸುವಷ್ಟು ಹೊಸ ಬಲಾಢ್ಯರ ವರ್ಗವೊಂದು ರೂಪುಗೊಂಡಿತು. ಹರಪ್ಪಾ ನಾಗರಿಕತೆಯ ಕೆಲವು ನಂಬಿಕೆಗಳು ಮತ್ತು ಆಚರಣೆಗಳು ‘ಆರ್ಯರ’ ಧಾರ್ಮಿಕ ಸಿದ್ಧಾಂತವನ್ನು ಮರುರೂಪಿಸಿದವು, ಆದರೆ ಇತರ ಕೆಲವು ಆಚರಣೆಗಳು ಹೆಚ್ಚು ಜನಪ್ರಿಯ ಮಟ್ಟದಲ್ಲಿ ಜಾನಪದ ನಂಬಿಕೆ ಮತ್ತು ಸಂಸ್ಕೃತಿಯಾಗಿ ಮುಂದುವರೆದಿರಬಹುದು.

ದಕ್ಷಿಣದಲ್ಲಿ, ವಲಸೆ ಹೋಗುತ್ತಿದ್ದ ಹರಪ್ಪಾ ನಾಗರಿಕತೆಯ ಜನರು ತಮ್ಮ ಭಾಷೆ ಮತ್ತು ಸಂಸ್ಕೃತಿಗೆ ಹೆಚ್ಚು ಹೊಂದಿಕೆಯಾಗುವ ವಾತಾವರಣವನ್ನು ಕಂಡುಕೊಂಡಿರಬಹುದು, ಏಕೆಂದರೆ ಭಾಗಶಃ ‘ಆರ್ಯರು’ ಇನ್ನೂ ದ್ವೀಪಕಲ್ಪವಾದ ಭಾರತವನ್ನು ತಲುಪಿರಲಿಲ್ಲ ಎಂಬ ಕಾರಣಕ್ಕೆ ಮತ್ತು ಬಹುಶಃ, ನಾವು ಅಧ್ಯಾಯ 3 ರಲ್ಲಿ ನೋಡಿದಂತೆ, ದ್ರಾವಿಡ ಭಾಷೆಗಳನ್ನು ಹರಡಿರಬಹುದಾದಂತ ಹಿಂದಿನ ವಲಸಿಗರ ಉಪಸ್ಥಿತಿಯ ಕಾರಣ.

ತಳಿಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ, ಹರಪ್ಪಾ ನಾಗರಿಕತೆಯ ಜನರು ದಕ್ಷಿಣಕ್ಕೆ ತೆರಳಿ ದ್ವೀಪಕಲ್ಪವಾದ ಭಾರತದ ಆದ್ಯ ಭಾರತೀಯರೊಂದಿಗೆ ಬೆರೆಯುವ ಮೂಲಕ ಪೂರ್ವಜ ದಕ್ಷಿಣ ಭಾರತೀಯರ ರಚನೆಗೆ ಮತ್ತು ಒಳಬರುತ್ತಿದ್ದ ‘ಆರ್ಯರೊಂದಿಗೆ’ ಬೆರೆಯುವ ಮೂಲಕ ಪೂರ್ವಜ ಉತ್ತರ ಭಾರತೀಯರ ರಚನೆಗೂ ಸಹ ಕಾರಣರಾದರು. ಆದ್ದರಿಂದ, ಅನೇಕ ವಿಧಗಳಲ್ಲಿ, ಅವರು ಭಾರತವನ್ನು ಒಟ್ಟಿಗೆ ಇರಿಸುವ ಸಾಂಸ್ಕೃತಿಕ ಅಂಟು ಅಥವಾ ನಾವು ಮೊದಲು ಬಳಸಿದ ರೂಪಕವನ್ನು ವಿಸ್ತರಿಸಿ ಹೇಳುವುದಾದರೆ - ಪಿಟ್ಜಾದ ಮೇಲಿನ ಸಾಸ್ ಅರ್ಥಾತ್ ಏಕೀಕರಿಸುವ ಶಕ್ತಿ.

ಸ್ಟೆಪ್ ಪ್ರದೇಶದಿಂದ ಹೊಸದಾಗಿ ವಲಸೆ ಬಂದಿದ್ದ ಬಲಾಢ್ಯ ಗುಂಪು ಸ್ಪಷ್ಟವಾಗಿ ನಗರೇತರ, ಅಲೆಮಾರಿ ಜೀವನಕ್ಕೆ ಆದ್ಯತೆ ನೀಡಿದ್ದು ಹರಪ್ಪಾ ನಾಗರಿಕತೆಯ ನಂತರ ಒಂದು ಸಹಸ್ರಮಾನಕ್ಕೂ ಹೆಚ್ಚಿನ ಕಾಲ ಭಾರತವು 500 BCE ಯ ನಂತರ ಪ್ರಾರಂಭವಾದಂತ ಅದರ ‘ಎರಡನೇ ನಗರೀಕರಣದ’ ಹಂತಕ್ಕೆ ಕಾಯಬೇಕಾಗಿ ಬಂದಿದ್ದಕ್ಕೆ ಭಾಗಶಃ ಕಾರಣವಿರಬಹುದು. ಆಂಥೋನಿ ತಮ್ಮ ಕೃತಿ ‘ದ ಹಾರ್ಸ್, ದ ವೀಲ್ ಆಂಡ್ ಲ್ಯಾಂಗ್ವೇಜ್’ ಎಂಬುದರಲ್ಲಿ ಗಮನಿಸಿದಂತೆ, ಯಾಮ್ನಾಯದವರು ಅಲೆಮಾರಿಯ, ಪಶುಪಾಲಕರಾಗಿದ್ದು ಅವರು ಪ್ರಾಬಲ್ಯ ಸಾಧಿಸಿದಡೆಯಲ್ಲೆಲ್ಲಾ ನೆಲಸೆಗಳು ಕಣ್ಮರೆಯಾಗುವುದಕ್ಕೆ ಕಾರಣರಾದರು.

## ಹರಪ್ಪಾ ನಾಗರಿಕತೆ ಮತ್ತು ವೇದಗಳು: ವಿಚ್ಛಿನ್ನತೆ ಮತ್ತು ಅವಿಚ್ಛಿನ್ನತೆ

ಸ್ಟೆಪ್ ಹುಲ್ಲುಗಾವಲಿನ ವಲಸಿಗರು ಭಾರತವನ್ನು ತಲುಪಿದಾಗ, ಅವರು ಅದು ಆಗಲೇ ತನ್ನದೇ ಆದಂತ ಪುರಾಣಗಳು, ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಮತ್ತು ಪ್ರಧಾನವಾಗಿ ಬಳಸುತ್ತಿದ್ದ ಭಾಷೆ ಅಥವಾ ಭಾಷೆಗಳನ್ನು ಹೊಂದಿದ್ದ, ಮತ್ತು ದೀರ್ಘ ಕಾಲದ ಬರಗಾಲದ ಪರಿಣಾಮದಿಂದ ಕ್ರಮೇಣವಾಗಿ ಕಾಣಿಸಿಕೊಳ್ಳಲಾರಂಭಿಸಿದ ವಿಪತ್ತನ್ನು ಸಂಬಾಳಿಸುತ್ತಿದ್ದ ಸಂಸ್ಕೃತಿಯೊಂದನ್ನು ಎದುರುಗೊಂಡರು. 'ಆರ್ಯರು' ಎಂದು ತಮ್ಮನ್ನು ಕರೆದುಕೊಂಡ ಜನರು ತೆಗೆದುಕೊಂಡಿರಬಹುದಾದ ವಿಭಿನ್ನ ಮಾರ್ಗಗಳಾಗಲೀ, ಅಥವಾ ವಿಭಿನ್ನ ಮತ್ತು ಸ್ಪರ್ಧಾತ್ಮಕ ಗುಂಪುಗಳ ಸಂಖ್ಯೆ ಎಷ್ಟಿದ್ದಿರಬಹುದು ಎಂಬುದು ನಮಗೆ ಇನ್ನೂ ತಿಳಿದಿಲ್ಲ. ಆದಾಗ್ಯೂ, ಅದರ ಪುರಾತತ್ತ್ವ ಅವಶೇಷಗಳಿಂದ ಬಹಿರಂಗವಾದಂತೆ ಹರಪ್ಪಾ ಸಂಸ್ಕೃತಿ ಮತ್ತು ಆರಂಭಿಕ ರಚನೆಯಾದ ಋಗ್ವೇದದಿಂದ ಪ್ರಾರಂಭಗೊಂಡ ವೇದಗಳಿಂದ ಬಹಿರಂಗವಾದಂತೆ ಇಂಡೋ-ಯುರೋಪಿಯನ್ ಸಂಸ್ಕೃತಿ ನಡುವೆ ಇದ್ದ ಸ್ಪಷ್ಟ ವ್ಯತ್ಯಾಸಗಳು ಕಾಲಾಂತರದಲ್ಲಿ ಅಸ್ಪಷ್ಟವಾದವು (blurs) ಎಂಬುದು ನಮಗೆ ತಿಳಿದಿದೆ.

ಆರಂಭಿಕ ವ್ಯತ್ಯಾಸದ ಕೆಲವು ಉದಾಹರಣೆಗಳು ಇಲ್ಲಿವೆ. ಋಗ್ವೇದದ ಮುಖ್ಯ ದೇವರುಗಳು ಮತ್ತು ದೇವತೆಗಳಿಗೆ - ಇಂದ್ರ, ಅಗ್ನಿ, ವರುಣ ಮತ್ತು ಅಶ್ವಿನಿ - ಹರಪ್ಪಾದ ಕಲ್ಪನಾಚಿತ್ರಣಗಳ ವಿಶಾಲ ಸಂಗ್ರಹದಲ್ಲಿ ಯಾವುದೇ ಚಿತ್ರಣವಿಲ್ಲ. ಅದರ ಪ್ರತಿವಾದವೂ ನಿಜ: ಹರಪ್ಪಾ ಸಂಸ್ಕೃತಿಯ ಪ್ರಧಾನವಾದ ಚಿಹ್ನೆಗಳು ಮತ್ತು ಕಲ್ಪನಾಚಿತ್ರಣಗಳನ್ನು ಅರ್ಥೈಸುವ ಪ್ರಯತ್ನದಲ್ಲಿ ಋಗ್ವೇದವು ನೆರವಾಗುವುದಿಲ್ಲ - ಉದಾಹರಣೆಗೆ ಅಗ್ಗಿಸ್ಟಿಕೆ (ಕುಮಟಿ) ಅಥವಾ ಮೇವಿನ ತೊಟ್ಟಿಯಂತೆ ಕಾಣುವುದರ ಮುಂಭಾಗದಲ್ಲಿ ಏಕಶೃಂಗಿ (unicorn – ಕುದುರೆಯನ್ನು ಹೋಲುವ ದಂತಕಥಾಪ್ರಾಯವಾದ ಪ್ರಾಣಿ) ಯನ್ನು ಪ್ರದರ್ಶಿಸುವಂತ ಎಲ್ಲೆಡೆಯೂ ಇರುವ ಮುದ್ರೆಗಳು; ಲಿಪಿ; ಮೊಹೆನ್ಜೊದಾರೋನ ಬೃಹತ್ ಪುಷ್ಕರಣಿಗಳು ಮತ್ತು ಅದರ ಮಹತ್ವ; ಮತ್ತು ಮುಂತಾದವುಗಳು.

ವಾಸ್ತವವಾಗಿ, ಒಂದು ನಿದರ್ಶನದಲ್ಲಿ, ಋಗ್ವೇದದ ತತ್ವಗಳು ಮತ್ತು ಹರಪ್ಪಾ ನಾಗರಿಕತೆಯ ಪದ್ಧತಿಯ ನಡುವಿನ ವೈದೃಶ್ಯವು ಬಹಳಷ್ಟು ಗಮನಾರ್ಹವಾಗಿದೆ. ಋಗ್ವೇದವು 'ಶಿಷ್ಣ-ದೇವ' (ಅಕ್ಷರಶಃ ಅರ್ಥ: ಶಿಷ್ಣದ ದೇವರು ಅಥವಾ ಶಿಷ್ಣದ ಆರಾಧಕರು) ವನ್ನು ಖಂಡಿಸುತ್ತದೆಯಾದರೆ ಹರಪ್ಪಾ ನಾಗರಿಕತೆಯ ಕಲಾಕೃತಿಗಳು ಶಿಷ್ಣ ಪೂಜೆಯು ಅದರ ಸಾಂಸ್ಕೃತಿಕ ಸಂಗ್ರಹದ ಭಾಗವಾಗಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ನಮಗೆ ತಿಳಿಸುತ್ತವೆ. ಭಾರತದಲ್ಲಿ ಬೆರಗುಗೊಳಿಸುವಂತ ಅತ್ಯಂತ ದೃಶ್ಯಾತ್ಮಕ ಹರಪ್ಪಾ ತಾಣವಾದ ಧೋಲಾವಿರಾ ವನ್ನು ಉತ್ಖನನ ಮಾಡಿದ ಪುರಾತತ್ವಶಾಸ್ತ್ರಜ್ಞ ಆರ್.ಎಸ್. ಬಿಶ್ಟ್ (R.S. Bisht), ಹರಪ್ಪಾ ನಾಗರಿಕತೆಯ ಅವನತಿಯ ನಂತರ ಧೋಲಾವಿರಾ ಮತ್ತು ಇತರ ಸ್ಥಳಗಳಲ್ಲಿ ಶಿಷ್ಣದ ಚಿಹ್ನೆಗಳು ಮತ್ತು ವಿಗ್ರಹಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಿದ ಸ್ಪಷ್ಟ ಪುರಾವೆಗಳಿವೆ ಎಂದು ಹೇಳುತ್ತಾರೆ. ಋಗ್ವೇದದ ಪುಸ್ತಕ 7, ಸ್ತೋತ್ರ 21.5 '" ಶಿಷ್ಣ-ದೇವ" ನಮ್ಮ ಪವಿತ್ರ ಪೂಜೆಯನ್ನು ಸಮೀಪಿಸದಿರಲಿ' ಎಂದು ಹೇಳುತ್ತದೆ, ಮತ್ತು ಪುಸ್ತಕ 10, ಸ್ತೋತ್ರ 99.3 ಇಂದ್ರನು ಅವರನ್ನು ಹೇಗೆ ಕೊಂದನು ಎಂಬುದನ್ನು ವಿವರಿಸುತ್ತದೆ. ಈ ಸಂದರ್ಭದಲ್ಲಿ ಕೆಲವು ಲೇಖಕರು 'ಶಿಷ್ಣ-ದೇವನಿಗೆ' ಸೂಕ್ತವಾದ ಅನುವಾದವೆಂದು 'ಕಾಮಾಸಕ್ತ ರಾಕ್ಷಸರು'ಎಂಬ ಪದವನ್ನು ಬಳಸಿದ್ದಾರೆಯಾದರೂ ಮೂಲ ಪಠ್ಯದ ಅಕ್ಷರಶಃ ಅರ್ಥ - ಮತ್ತು ಖಂಡಿತವಾಗಿಯೂ ಅದರಲ್ಲಿನ ಹಗೆತನ - ಸಾಕಷ್ಟು ಸ್ಪಷ್ಟವಾಗಿದೆ.




Free-standing phallic columns in Dholavira

ಧೋಲಾವಿರಾ ಉತ್ಖನನದ ಕುರಿತಾದ ತಮ್ಮ ವರದಿಯಲ್ಲಿ ಆರ್.ಎಸ್. ಬಿಶ್ಟ್ ಬರೆಯುತ್ತಾರೆ: 'ಉತ್ಖನನಗಳಿಂದ ಕನಿಷ್ಠ ಆರು ಸ್ವತಂತ್ರವಾಗಿ ತಮ್ಮಷ್ಟಕ್ಕೆ ನಿಂತಿರುವ ಸ್ತಂಬಗಳ ಅಂಕಣಗಳು ಪತ್ತೆಯಾಗಿವೆ. ಈ ಸ್ವತಂತ್ರವಾಗಿ ನಿಂತಿರುವ ಸ್ತಂಬಗಳು ಎತ್ತರವಾಗಿವೆ . . . ಅವುಗಳ ಮೇಲ್ಭಾಗವು ಶಿಶ್ನವನ್ನು ಹೋಲುತ್ತದೆ ಅಥವಾ ಅವು ಶಿಶ್ನ ಸ್ವರೂಪದ್ದಾಗಿವೆ. ಅದಕ್ಕಾಗಿಯೇ ಅವುಗಳಲ್ಲಿ ಹೆಚ್ಚಿನವು ಉದ್ದೇಶಪೂರ್ವಕವಾಗಿ ಹಾನಿಗೊಳಗಾದ ಮತ್ತು ಒಡೆದ ಸ್ಥಿತಿಯಲ್ಲಿ ಕಂಡುಬಂದಿವೆ.'

ಧೋಲಾವಿರಾದಲ್ಲಿ ಕುಳಿತಿರುವ ವ್ಯಕ್ತಿಯ ಪ್ರತಿಮೆಯ ಬಗ್ಗೆ ವರದಿ ಹೀಗೆ ಹೇಳುತ್ತದೆ:

> [ಇದು] ಪ್ರಾಯಶಃ ಹರಪ್ಪಾ ನಾಗರಿಕತೆಯ ಪ್ರಯತ್ನಗಳಲ್ಲಿ ಅತ್ಯಂತ ದೊಡ್ಡ ಪ್ರಯತ್ನವಾಗಿತ್ತು . . . ಅದು ಅಂತ್ಯಕಾಲದ ಹರಪ್ಪಾದ ಜನರು ನಿರ್ಮಿಸಿದ ಕಟ್ಟಡದ ಗೋಡೆಯೊಂದರ ಭಾಗವಾಗಿ ತಲೆಕೆಳಗಾಗಿರುವುದಾಗಿ ಕಂಡುಕೊಳ್ಳಲಾಗಿತ್ತು . . . ಅದು ಸರಂಧ್ರ ಸುಣ್ಣದ ಮರಳುಗಲ್ಲಿನಿಂದ ಮಾಡಲ್ಪಟ್ಟಿತ್ತು . . . ಶಿಲ್ಪವು ವಸ್ತ್ರದ ಯಾವುದೇ ಕುರುಹನ್ನು ಹೊಂದಿರದ ಕಾರಣ, ಅದು ತೋಳುಗಳನ್ನು ಮೊಣಕಾಲುಗಳ ಮೇಲೆ ಇರಿಸಿ, ಎರಡೂ ಮೊಣಕಾಲುಗಳನ್ನು ಅಗಲವಾಗಿ ಮೇಲಕ್ಕೆತ್ತಿ, ಜನನಾಂಗಗಳನ್ನು ಪ್ರದರ್ಶಿಸಲು ಬಯಸುವಂತೆ ಸಮತಟ್ಟಾದ ತಳವನ್ನು ಹೊಂದಿದ್ದು ಕುಳಿತುಕೊಳ್ಳುವ ಭಂಗಿಯಲ್ಲಿತ್ತು.
>
> ಈ ಪ್ರತಿಮೆಯು ಪುರುಷ ವ್ಯಕ್ತಿಯನ್ನು ಚಿತ್ರಿಸುತ್ತದೆ ಮತ್ತು ಅದರ ವಿವರಗಳು ವಾಸ್ತವಿಕತೆಗೆ ಹತ್ತಿರವಾಗಿದೆ. ಹೊಟ್ಟೆಯನ್ನು ಚಾಚಿಕೊಂಡಿರುವಂತೆ ತೋರಿಸಲಾಗಿದೆ. ಪ್ರತಿಮೆಯ ಹಿಂಭಾಗವು ಕೂದಲು ಕಂತೆ ಕಂತೆಯಾಗಿ ಉದುರುತ್ತಿರುವಂತ ಚಿತ್ರಣದ ಪುರಾವೆಗಳನ್ನು ಸಹ ತೋರಿಸುತ್ತದೆ ಮತ್ತು ಅದು ಕೂಡ ಹಾನಿಗೊಳಗಾಗಿದೆ. ಮೊಹೆನ್ಜೊದಾರೋದಲ್ಲಿ ಕಂಡುಬಂದ ಎಲ್ಲಾ ಪ್ರತಿಮೆಗಳಂತೆ ಬಹುಶಃ ಇದನ್ನು ಕೂಡ ಖಂಡಿತವಾಗಿಯೂ ಧ್ವಂಸಗೊಳಿಸಲಾಗಿದೆ.
>
> ಈ ಪ್ರತಿಮೆಯ ರುಂಡ ಭಾಗ ಈಗ ಕಾಣೆಯಾಗಿದೆ. ಅದರ ರುಂಡವನ್ನು ಉದ್ದೇಶಪೂರ್ವಕವಾಗಿ ಕತ್ತರಿಸಲಾಗಿದೆ ಎಂದು ತೋರುತ್ತದೆ, ಮೊಣಕೈಗಳು ಮತ್ತು ಮೊಣಕಾಲುಗಳು ಸಹ ಗಣನೀಯವಾಗಿ ಹಾನಿಗೊಳಗಾಗಿವೆ. ಉದ್ದೇಶಪೂರ್ವಕವಾಗಿ ಈ ಪ್ರತಿಮೆಗೆ ಮಾಡಿದ ಹಾನಿಯು ಧಾರ್ಮಿಕ ನಂಬಿಕೆ ಮತ್ತು ಸಿದ್ಧಾಂತದ ರೂಢಮಾದರಿಯಲ್ಲಾದ ಬದಲಾವಣೆಯ ಸ್ಪಷ್ಟ ಸೂಚನೆಯಾಗಿರಬಹುದು, ಮತ್ತು ಈ ಪ್ರತಿಮೆಯು VI ನೇ ಹಂತ [1950–1800 BCE] ಕ್ಕೆ ಸೇರಿದ ಗೌಣ ಸಂದರ್ಭದಲ್ಲಿ ಕಂಡುಬಂದಿದ್ದರಿಂದ ಅದು ಹೆಚ್ಚು ಅಭಿವೃದ್ಧಿಗೊಂಡ ಹರಪ್ಪಾ ನಾಗರಿಕತೆಯ ಹಂತ [2600–1900 BCE] ಕ್ಕೆ ಸೇರಿರುವ ಸಂಭಾವ್ಯತೆ ಹೆಚ್ಚಿದೆ. ಪ್ರತಿಮೆಯನ್ನು ಹಾನಿಗೊಳಿಸಿದ ರೀತಿಯು ಸ್ಪಷ್ಟವಾಗಿ ಅದು ನಿರ್ವಹಿಸಿದ್ದ ಪಾತ್ರವನ್ನು ಇನ್ನು ಮುಂದೆ ಗುರುತಿಸುವ ಅಗತ್ಯವಿಲ್ಲವೆಂದು VI ನೇ ಹಂತದ ನಿವಾಸಿಗಳು ಭಾವಿಸಿದ್ದರು ಎಂದು ಸೂಚಿಸುತ್ತದೆ. VI ನೇ ಹಂತದ ಮುದ್ರೆಗಳ ಮೇಲೆ ಯಾವುದೇ ವಿಶಿಷ್ಟ ಲಕ್ಷಣದ ಸಂಕೇತವಿಲ್ಲದೆ ಚೆನ್ನಾಗಿ ಕೆತ್ತಿದ ಶಾಸನಗಳ ಚಿತ್ರಣವು ಸಹ ಹಳೆಯ ನಂಬಿಕೆಗಳು ಮತ್ತು ಪದ್ಧತಿಗಳನ್ನು ತ್ಯಜಿಸಿದ್ದರು ಎಂಬುದನ್ನು ಸಹ ಸೂಚಿಸಬಹುದು.



**ಮೇಲೆ:** ಧೋಲಾವಿರಾ ಅವಶೇಷಗಳಲ್ಲಿ ತಲೆಕೆಳಗಾಗಿ ಕಂಡುಬಂದ ಕುಳಿತಿರುವ ವ್ಯಕ್ತಿಯ ಪ್ರತಿಮೆ
**ಕೆಳಗೆ:** ಅದರ ಅಂಗಾಗಗಳನ್ನು ಉದ್ದೇಶಪೂರ್ವಕವಾಗಿ ಅಳಿಸಿ ಹಾಕಿದ ಮತ್ತು ನಾಶಮಾಡಿರುವ ಪ್ರತಿಮೆಯ ಮುಂಭಾಗ ಮತ್ತು ಪಾರ್ಶ್ವದ ನೋಟಗಳು

……………………..




1950 BCE ಮತ್ತು 1800 BCE ನಡುವಿನ ಕಾಲಮಾನಕ್ಕೆ ಸೇರಿದ್ದು ಎಂದು ನಿಗದಿಪಡಿಸಿದ ಧೋಲಾವಿರಾದಲ್ಲಿನ VI ನೇ ಹಂತವು, ನಾಗರಿಕತೆಯ ಅಭಿವೃದ್ಧಿಗೊಳ್ಳುವ ಹಂತವು ಕೊನೆಗೊಂಡು ಮತ್ತು ಸ್ವಲ್ಪ ಕಾಲದವರೆಗೆ ನಿರ್ಜನವೂ ಸಹ ಆಗಿದ್ದಂತ ಸ್ಥಳವು ಹರಪ್ಪಾ ನಾಗರಿಕತೆಯ ಅಂತ್ಯ ಹಂತವಾಗಿದೆ. ಉತ್ಖನನದ ವರದಿಯ ಪ್ರಕಾರ, 'ನಿರ್ಜನ ಪ್ರದೇಶವಾಗಿದ್ದ ಒಂದು ಹಂತದ ನಂತರ ಆ ಸ್ಥಳದಲ್ಲಿ ಕಾಣಿಸಿಕೊಳ್ಳುವ VIನೇ ಹಂತವು ಅಷ್ಟೇ ಮಹತ್ವದ್ದಾಗಿದೆ, ಏಕೆಂದರೆ ಅದು ಯೋಜನೆ, ವಾಸ್ತುಶಿಲ್ಪ

ಮತ್ತು ಸಿಗಿಲ್ಲೋಗ್ರಫಿ (sigillography) [ಮೊಹರುಗಳಿಗೆ ಸಂಬಂಧಿಸಿದಂತೆ] ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ದೂರಗಾಮಿ ಪರಿಣಾಮಗಳನ್ನುಳ್ಳ ಬದಲಾವಣೆಗಳನ್ನು ತಂದಿತು ಮಾತ್ರವಲ್ಲದೆ ಆರ್ಥಿಕ ರಚನೆಯಲ್ಲಿಯೂ ಸಹ ಮಹತ್ವದ ಬದಲಾವಣೆಯನ್ನು ತಂದಿತು. ಅಲ್ಲದೆ ತ್ವರಿತ ಗತಿಯಲ್ಲಿ ಸಮುದಾಯಗಳು ಒಟ್ಟಿಗೆ ಸೇರುವುದನ್ನು ಕಂಡಿತು ಎಂಬ ಕಾರಣಕ್ಕೆ.'

ಧೋಲಾವಿರಾದಲ್ಲಿ VIನೇ ಹಂತದಲ್ಲಿ ನಡೆದ ವಿಪ್ಲವಕ್ಕೆ ಯಾರು ಅಥವಾ ಏನು ಕಾರಣ ಎಂದು ನಮಗೆ ತಿಳಿದಿಲ್ಲ; ನಮಗೆ ತಿಳಿದಿರುವ ಮಟ್ಟಿಗೆ ಹರಪ್ಪಾ ನಾಗರಿಕತೆಯ ಕೊನೆಯ ಹಂತಗಳಲ್ಲಿ ನಡೆದ ಆಂತರಿಕ ದಂಗೆ ಕಾರಣವಾಗಿರಬಹುದು. ಆದರೆ ಹರಪ್ಪಾ ಸ್ಥಳಗಳಲ್ಲಿ ಇದ್ದಂತ ಶಿಶ್ನದ ಚಿಹ್ನೆಗಳು ಮತ್ತು ಪ್ರತಿಮೆಗಳ ಮತ್ತು ಋಗ್ವೇದದಲ್ಲಿ ಕಂಡುಬರುವಂತ ಶಿಶ್ನದ ಪೂಜೆಯ ಬಗೆಗಿನ ತಿರಸ್ಕಾರವು ಅವುಗಳ ನಡುವಿದ್ದ ಅಂತರವನ್ನು ಸೂಚಿಸುತ್ತದೆ.

ಬಿಶ್ತ್ ಹರಪ್ಪಾ ನಾಗರಿಕತೆಯು 'ಆರ್ಯರ' ಅಥವಾ ' ವೈದಿಕ' ದಲ್ಲ ಎಂಬ ಕಲ್ಪನೆಯ ಪ್ರತಿಪಾದಕರಲ್ಲ. ವಾಸ್ತವವಾಗಿ, ಋಗ್ವೇದವು ಪ್ರದರ್ಶಿಸುವಂತ ಸಮಾಜದ ಸ್ವರೂಪವು ಹರಪ್ಪಾದ ತಾಣಗಳಲ್ಲಿ ನಮಗೆ ಕಾಣಸಿಗುವಂತ ಸಮಾಜಕ್ಕೆ ಹತ್ತಿರ ಸಂಬಂಧವಿದೆ ಎಂದು ಅವರು ನಂಬುತ್ತಾರೆ. ಆದಾಗ್ಯೂ, ಅವರು ವೇದಗಳು 'ಶಿಷ್ಣ-ದೇವರುಗಳನ್ನು' ತಿರಸ್ಕಾರದಿಂದ ನೋಡುತ್ತಿದ್ದವು ಮತ್ತು ಹರಪ್ಪಾ ನಾಗರಿಕತೆಯಲ್ಲಿ ಕುದುರೆಯ ಅನುಪಸ್ಥಿತಿಯು ಈ ನಾಗರಿಕತೆಯನ್ನು ವೈದಿಕ ಎಂಬುದಾಗಿ ಗುರುತಿಸುವಲ್ಲಿ ಸಮಸ್ಯೆ ಇದೆ ಎಂದು ಸಹ ಒಪ್ಪಿಕೊಳ್ಳುತ್ತಾರೆ. ಹರಪ್ಪಾದ ಲಿಪಿಯನ್ನು ಅರ್ಥೈಸುವವರೆಗೆ, ವಿವಾದ ಮುಂದುವರಿಯುತ್ತದೆ ಎಂದು ಅವರು ಭಾವಿಸುತ್ತಾರೆ.

ಹರಪ್ಪಾ ನಾಗರಿಕತೆಯ ಪ್ರಪಂಚ ಮತ್ತು ಪ್ರಾಚೀನ ವೇದಗಳ ಪ್ರಪಂಚದ ನಡುವಿನ ವಿಚ್ಛಿನ್ನತೆಯು ಹೆಚ್ಚು ಪ್ರಾಪಂಚಿಕ ವಿಷಯಗಳಲ್ಲಿ ಸ್ಪಷ್ಟವಾಗಿದೆಯೇ ವಿನಹಃ ಸೈದ್ಧಾಂತಿಕ ವಿಷಯಗಳಲ್ಲಿ ಅಲ್ಲ. ಉದಾಹರಣೆಗೆ, ಆ ಸಮಯದಲ್ಲಿ ಇದ್ದ ಇತರ ನಾಗರಿಕ ಪ್ರಪಂಚವು ಹರಪ್ಪಾ ನಾಗರಿಕತೆಯನ್ನು ಮೆಲುಹ್ಹಾ (Meluhha) ಎಂದು ತಿಳಿದಿತ್ತು; ಹರಪ್ಪಾದವರು ಮೆಸಪೊಟೇಮಿಯಾದ ಯುದ್ಧಗಳಲ್ಲಿ ಪಕ್ಷ ವಹಿಸುವ ಮಟ್ಟಿಗೆ ಅವರ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು; ಮತ್ತು ಹರಪ್ಪಾ ಮತ್ತು ಮೆಸಪೊಟೇಮಿಯಾ ಜನರ ನಡುವಿನ ಆರ್ಥಿಕ ಸಂಬಂಧವು ಹರಪ್ಪಾದವರು ಒಮಾನ್ ದ್ವೀಪಕಲ್ಪದಂತಹ ಸ್ಥಳಗಳಲ್ಲಿ ವ್ಯಾಪಾರ ಮತ್ತು ಗಣಿಗಾರಿಕೆಯನ್ನೂ ಸಹ ಸುಗಮಗೊಳಿಸಲು ವಸಾಹತುಗಳನ್ನು ಸ್ಥಾಪಿಸುವಷ್ಟು ನಿಕಟವಾಗಿತ್ತು. ಆದರೆ ಈ ಸಂಕೀರ್ಣ, ಮುಂದುವರೆದಿದ್ದ ವ್ಯಾಪಾರ ಚಟುವಟಿಕೆಗಳು ಮತ್ತು ನಗರ ಸಂಬಂಧಗಳು ಆರಂಭಿಕ ವೈದಿಕ ಸಂಗ್ರಹದಲ್ಲಿ ಕಾಣಸಿಗುವುದಿಲ್ಲ. ಋಗ್ವೇದದ ಪ್ರಪಂಚ ಮತ್ತು ಹರಪ್ಪಾದ ಭೌತಿಕ ಸಂಸ್ಕೃತಿಯಿಂದ ಬಹಿರಂಗವಾದಂತ ಪ್ರಪಂಚವು, ಕುದುರೆಯ ವಿಷಯವನ್ನು ಪ್ರಸ್ತಾಪಿಸದೆಯೂ ಸಹ, ಎರಡು ಬಹಳ ವಿಭಿನ್ನವಾದ ವಿಶ್ವಗಳಂತೆ ತೋರುತ್ತದೆ.

## ಹರಪ್ಪಾ ಕುರಿತಾದ ಸಹಜಜ್ಞಾನ

ಕುದುರೆಯ ಸಮಸ್ಯೆ ಹೀಗಿದೆ: ಹರಪ್ಪಾ ನಾಗರಿಕತೆಯಲ್ಲಿ ಕುದುರೆಯ ಅಸ್ಥಿಪಂಜರದ ಅವಶೇಷಗಳಾಗಿ ಆಗಲೀ ಅಥವಾ ಮುದ್ರೆಗಳು ಮತ್ತು ಕಲಾಕೃತಿಗಳ ಮೇಲಿನ ಚಿತ್ರಗಳಾಗಿ ಆಗಲೀ ವಿರಳವಾಗಿ ಕಂಡುಬರುತ್ತದೆಯಾದರೆ, ಋಗ್ವೇದದಲ್ಲಿ ಅದು ಬಹಳ ಪ್ರಧಾನವಾಗಿ ಮತ್ತು ಎಲ್ಲಡೆ ಕಂಡುಬರುತ್ತದೆ. ಅದು ಎಷ್ಟರಮಟ್ಟಿಗೆ ಎಂದರೆ ಎರಡು ಪ್ರಮುಖ ದೇವರುಗಳಾದ ಅಶ್ವಿನಿ ದೇವತೆಗಳು ಕುದುರೆ ಮುಖವುಳ್ಳವರು. ಇನ್ನೆರಡು ದೇವತೆಗಳಾದ ಉಷಸ್ ಮತ್ತು ಅಗ್ನಿಯನ್ನು ಕುದುರೆ-ಎಳೆಯುವ ರಥಗಳಲ್ಲಿ ಸವಾರಿ ಮಾಡುವವರನ್ನಾಗಿ ವಿವರಿಸಲಾಗಿದೆ. ಒಂದು ಸ್ತೋತ್ರದಲ್ಲಿ, ಸರಸ್ವತಿ ನದಿಯನ್ನು 'ರಥದಂತೆ ಜಯಗಳಿಸಲು ವಿಶಾಲವಾಗಿ ಸೃಷ್ಟಿಸಲಾಗಿದೆ' ಎಂಬುದಾಗಿ ವಿವರಿಸಲಾಗಿದೆ. ವಾಸ್ತವವಾಗಿ, ಋಗ್ವೇದದಲ್ಲಿ ಕುದುರೆಯು ಹೊಂದಿರುವಷ್ಟು ಪ್ರಧಾನ ಸ್ಥಾನ ಬೇರೆ ಯಾವುದೇ ಪ್ರಾಣಿಯು ಹೊಂದಿಲ್ಲ. ಋಗ್ವೇದದಲ್ಲಿ ಕುದುರೆಯ ಬಗ್ಗೆ ಐದು ಸ್ತೋತ್ರಗಳಿವೆಯಾದರೆ ಹೋರಿ, ಮೇಕೆ ಮತ್ತು ಪಕ್ಷಿಯ ಬಗ್ಗೆ ಕೇವಲ ಒಂದು ಮಾತ್ರವಷ್ಟೇ ಇದೆ. ಕುದುರೆಯ ಬಗ್ಗೆ ಇರುವಂತ ಒಂದು ಸ್ತೋತ್ರ (ಮಂಡಲ1; ಸ್ತೋತ್ರ 162)[7] ಅಶ್ವಮೇಧ ಯಾಗವನ್ನು ಈ ಕೆಳಗಿನಂತೆ ಉಲ್ಲೇಖಿಸುತ್ತದೆ:

ಅಶ್ವ ಪಕ್ವವಾಗಿದೆ ಎಂದು ಗಮನಿಸಿದವರು ಗಮಲು ಚೆನ್ನಾಗಿದೆ ಎಂದು ಕೂಗಿ ಹೇಳುತ್ತಾರೆ; ಅದನ್ನು ತೆಗೆಯಿರಿ;

ಮತ್ತು, ಬಾಡು ಹಂಬಲಿಸುತ್ತಿರುವವರು, ಹಂಚಿಕೆಯ ನಿರೀಕ್ಷೆಯಲ್ಲಿರುವರು, - ಅವರ ಅನುಮೋದನೆಯು ಶ್ರಮದ ಯಶಸ್ಸಿಗೆ ನೆರವಾಗಲಿ.

ಬಾಡು ಬೇಯಿಸುವ ಕೊಪ್ಪರಿಗೆಯ ಮುಳ್ಳುಚಮಚ, ಎಸರು ಸಿಂಪಡಿಸುವ ಭಾಜನಗಳು,

ಕಾಯಿಸುವ ಕೊಪ್ಪರಿಗೆಗಳು, ತಿನಿಸುಗಳ ಮುಚ್ಚಳಗಳು, ಕೊಕ್ಕೆಗಳು, ಕಡಿಯುವ ಹಲಗೆಗಳು, - ಇವೆಲ್ಲವೂ ಅಶ್ವಮೇಧ ಯಾಗಕ್ಕೆ ಬಳಸಲಾಗುತ್ತವೆ.

ಆರಂಭದ ಸ್ಥಳ, ಅದು ವಿಶ್ರಮಿಸುವ ಮತ್ತು ಉರುಳುವ ಸ್ಥಳ, ಅದರ ಗೊರಸುಗಳನ್ನು ಬಿಗಿದ ಸೆಣಬುಗಳು,

ಅದು ಕುಡಿದ ನೀರು, ಅದು ರುಚಿ ನೋಡಿದ ಆಹಾರ, - ಎಲ್ಲವನ್ನು, ಎಲ್ಲ ದೇವತೆಗಳೂ ಕೂಡ ಹರಸಲಿ.

ಜಪಿಸಿದ ಹೋಮದ ಹೊಗೆಯಾಗಲಿ, ಅಗ್ನಿಯಾಗಲಿ ನಿನ್ನನ್ನು ಚಟ ಪಟಿಸುವಂತೆ ಮಾಡದಿರಲಿ, ಅಥವಾ ಕಾದಿದ ಕೊಪ್ಪರಿಗೆಯು ದುರ್ನಾಥವ ಸೂಸದಿರಲಿ ಅಥವಾ ಚೂರುಚೂರಾಗಿ ಮುರಿದು ಹೋಗದಿರಲಿ.

ಅರ್ಪಿಸಲಾದ, ಪ್ರಿಯವಾದ, ಅನುಮಮೋದಿಸಿದ, ಮತ್ತು ಪವಿತ್ರಗೊಳಿಸಿದ, - ಅಂತಹ ಅಶ್ವವನ್ನು ದೇವತೆಗಳು ಸ್ವೀಕರಿಸಿ ಅನುಗ್ರಹಿಸುವರು.

'ಆರ್ಯರ' ವಲಸೆಗಳ ಕುರಿತಿರುವ ಕಲ್ಪನೆಯನ್ನು ಒಪ್ಪಿಕೊಳ್ಳದ ಮತ್ತು 'ಆರ್ಯರು' ಸ್ಥಳೀಯರು ಎಂದು ಒತ್ತಿಹೇಳುವವರಿಗೆ, ಹರಪ್ಪಾ ನಾಗರಿಕತೆಯು 'ವೈದಿಕ' - ಅಥವಾ ವೇದಗಳನ್ನು ರಚಿಸಿದ 'ಆರ್ಯರ' ಸೃಷ್ಟಿ ಎಂಬುದು ಸ್ವಯಂವೇದ್ಯ. ಅವರು ಹರಪ್ಪಾದ ನಗರಗಳಲ್ಲಿ ಕುದುರೆಗಳು ಅಥವಾ ರಥಗಳು ಇಲ್ಲದಿರುವುದು ಆ ನಾಗರಿಕತೆಗೆ ವೈದಿಕ ಅಸ್ಮಿತೆಯನ್ನು ಆರೋಪಿಸುವುದನ್ನು ಅಡ್ಡಿಪಡಿಸಬಾರದು ಎಂಬುದಕ್ಕೆ ಮೂರು ವಾದಗಳನ್ನು ಮಂಡಿಸುತ್ತಾರೆ. ಮೊದಲನೆಯದಾಗಿ, ಹರಪ್ಪಾದ ಕಾಲದಲ್ಲೂ ಕುದುರೆಗಳು ಇದ್ದವು ಎಂಬುದರ ಬಗ್ಗೆ ಯಾರಿಗೂ ಸಂದೇಹವಿಲ್ಲವಾದರೂ ಸಹ, ಹರಪ್ಪಾ ನಂತರದ ಕಾಲದಲ್ಲಿ ಕುದುರೆಯ ಮೂಳೆಗಳು ಕಾಣಸಿಗುವುದು ಅಪರೂಪ. ಎರಡನೆಯದಾಗಿ, ಹರಪ್ಪಾದವರು-ವೈದಿಕ-ಆರ್ಯರು ಎಂಬ ಪ್ರತಿಪಾದನೆಯ ಪ್ರಮುಖ ಪ್ರತಿಪಾದಕರಾದ ಪುರಾತತ್ವಶಾಸ್ತ್ರಜ್ಞ ಬಿ.ಬಿ. ಲಾಲ್ ಹೇಳುವಂತೆ: 'ಈ ದೇಶದ ಬಿಸಿ ಮತ್ತು ಆರ್ದ್ರ ವಾತಾವರಣದಲ್ಲಿ ಮರದ ರಥ ಅಥವಾ ಯಾವುದೇ ಮರದ ವಸ್ತು ಕಾಣಸಿಗುವುದು ತುಂಬಾ ಕಷ್ಟ. ಕಾಳಿಬಂಗನ್‌ನಲ್ಲಿ ಧಾನ್ಯದ ಕಡ್ಡಿ ತುಂಡನ್ನು ಹೊರತುಪಡಿಸಿ ನಾನು ಯಾವುದೇ ಮರದ ವಸ್ತುವನ್ನು ನೋಡಲಿಲ್ಲ . . .' ಮೂರನೆಯ ಅಂಶವೆಂದರೆ, 2100 BCE ಮತ್ತು 1700 BCE ನಡುವಿನ ಕಾಲಮಾನಕ್ಕೆ ಸೇರಿದ ಗುಜರಾತ್ ನಲ್ಲಿನ ಸುರ್ಕೋಟ್ಡಾ (Surkotada) ಎಂಬ ಹರಪ್ಪಾ ಸ್ಥಳದಲ್ಲಿ ಅಂತರಾಷ್ಟ್ರೀಯವಾಗಿ ದೃಢೀಕರಿಸಲ್ಪಟ್ಟಂತ ಕುದುರೆಯ ಮೂಳೆಗಳ ಒಂದು ಸಂಶೋಧನೆ ವಾಸ್ತವವಾಗಿ ಕಂಡುಬಂದಿದೆ. ಈ ಮೂಳೆಗಳನ್ನು ನಿಜಕ್ಕೂ ಪುರಾತತ್ವಶಾಸ್ತ್ರಜ್ಞ ಪ್ರೊಫೆಸರ್ ಸಾಂಡೋರ್ ಬೊಕೊನಿ(Sandor Bokonyi) ಅವರಿಂದ ಪರಿಶೀಲಿಸಲಾಗಿದ್ದು, ಅವರು 'ನಿಜವಾದ ಕುದುರೆಯ (Equus caballus (ಎಕೂಸ್ ಕಬಾಲ್ಲೋಸ್)) ಇರುವಿಕೆಯನ್ನು ಅದರ ಮೇಲಿನ ಮತ್ತು ಕೆಳಗಿನ ಕೆನ್ನೆಗಳ ಹಾಗೂ ಹಲ್ಲುಗಳ ದಂತಕವಚ ಮಾದರಿಯಿಂದ ಮತ್ತು ಬಾಚಿಹಲ್ಲುಗಳು ಮತ್ತು ಫಲಾಂಜ್‌ಗಳ (phalanges) (ಕಾಲ್ಬೆರಳಿನ ಮೂಳೆಗಳು) ಗಾತ್ರ ಮತ್ತು ಆಕಾರದಿಂದ ರುಜುವಾತುಗೊಂಡಿತು. ಹಿಮಯುಗದ (Pleistocene (ಪ್ಲೈಸ್ಟೊಸೀನ್)) ನಂತರದ ಕಾಲದಲ್ಲಿ [ಅಂದರೆ, 9700 BCE ಯ ನಂತರ] ಭಾರತದಲ್ಲಿ ಯಾವುದೇ ಕಾಡು ಕುದುರೆಗಳು ವಾಸಿಸುತ್ತಿರಲಿಲ್ಲವಾದ್ದರಿಂದ, ಸುರ್ಕೋಟ್ಡಾ ಕುದುರೆಯು ಸಾಕುಪ್ರಾಣಿಯಾಗಿತ್ತು ಎಂಬುದರ ಬಗ್ಗೆ ಯಾವ ಸಂದೇಹವೂ ಇಲ್ಲ' ಎಂದು ಹೇಳಿರುತ್ತಾರೆ.

ಈ ಹೇಳಿಕೆಯು ಎರಡು ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತದೆ. ಒಂದು, ಹಿಮಯುಗದ (ಪ್ಲೈಸ್ಟೊಸೀನ್) ಕಾಲದಿಂದ (ಇದು 2.58 ಮಿಲಿಯನ್ ವರ್ಷಗಳ ಹಿಂದೆಯಿಂದ 11,700 ವರ್ಷಗಳ ಹಿಂದಿನವರೆಗು) ಭಾರತದಲ್ಲಿ ಕಾಡು ಕುದುರೆಗಳು ಇರಲಿಲ್ಲ. ಆದ್ದರಿಂದ, ಸುರ್ಕೋಟ್ಡಾ ದಲ್ಲಿ ಕಂಡುಬರುವ ಕುದುರೆಯು ಕಾಡು ಕುದುರೆಯಾಗಿರದೆ ಸಾಕಿದ ಕುದುರೆಯಾಗಿರಲೇಬೇಕು. ಆದರೆ ಕಳೆದ 11,700 ವರ್ಷಗಳಲ್ಲಿ ಭಾರತದಲ್ಲಿ ಕಾಡು ಕುದುರೆಗಳು ಇಲ್ಲದಿದ್ದಲ್ಲಿ, ಕುದುರೆಯನ್ನು ಪಳಗಿಸುವ ವಾಡಿಕೆಯು 3500 BCE ಗಿಂತ ಮೊದಲು ಇರಲಿಲ್ಲ ಎಂದಾದಲ್ಲಿ ಆಗ ಕುದುರೆಯನ್ನು ಭಾರತದಲ್ಲಿ ಪಳಗಿಸಿರುವ

ಸಾಧ್ಯತೆಯು ಸ್ಪಷ್ಟವಾಗಿ ಇಲ್ಲ ಎಂಬುದು ಈ ಎರಡು ಹೇಳಿಕೆಗಳ ತೀರ್ಮಾನವಾಗಿದೆ. ಆದ್ದರಿಂದ, ಬೊಕೊನಿಯ ಸ್ವಂತ ಹೇಳಿಕೆಯ ಪ್ರಕಾರವೂ ಸಹ, ಸುರ್ಕೋಟ್ಡಾ ಕುದುರೆಯನ್ನು ಆಮದು ಮಾಡಿಕೊಳ್ಳಲಾಗಿದೆ ಅಥವಾ ಅದು ಆಮದು ಮಾಡಿಕೊಂಡಂತ ತಳಿಗೆ ಸೇರಿದೆ.

ಮೇಲಾಗಿ, ಬೊಕೊನಿ ಅವರಿಂದ ಮಾಡಲಾದ ಕುದುರೆಯ ಮೂಳೆಗಳ ಪರಿಶೀಲನೆಯನ್ನೇ ರಿಚರ್ಡ್ ಮೆಡೊ (Richard Meadow) ಅವರಂತಹ ಸಮಾನ ಗೌರವಾನ್ವಿತ ಪುರಾತತ್ತ್ವ-ಪ್ರಾಣಿಶಾಸ್ತ್ರಜ್ಞರಿಂದ ಗಂಭೀರವಾಗಿ ಪ್ರಶ್ನಿಸಲಾಗಿದೆ. ಬೊಕೊನಿಯವರ ಸಂಶೋಧನೆಯು ಸರಿ ಮತ್ತು ಮೆಡೊ ಅವರ ವಾದವು ತಪ್ಪು ಎಂದು ನಾವು ಭಾವಿಸಿದರೂ ಸಹ, ಋಗ್ವೇದದಲ್ಲಿ ಕುದುರೆಗೆ ನೀಡಿರುವ ಪ್ರಾಧಾನ್ಯತೆ ಮತ್ತು ಹರಪ್ಪಾ ಸಂಸ್ಕೃತಿಯಲ್ಲಿ ಕುದುರೆ ಮತ್ತು ಕುದುರೆ ಸಂಬಂಧಿತ ಕಲ್ಪನಾಚಿತ್ರಣಗಳ ಸಂಪೂರ್ಣ ಅನುಪಸ್ಥಿತಿಯು, ವಿಶೇಷವಾಗಿ ಪೌರಾಣಿಕ ಪ್ರಾಣಿ ಏಕಶೃಂಗಿ (unicorn) ಗಳಿಂದ ಹಿಡಿದು ಎತ್ತುಗಳು, ಎಮ್ಮೆಗಳು, ನವಿಲುಗಳು, ಆನೆಗಳು, ಹುಲಿಗಳು ಮತ್ತು ಘೇಂಡಾಮೃಗಗಳವರೆಗೆ ಎಲ್ಲವನ್ನೂ ಚಿತ್ರಿಸುವ ಸಾವಿರಾರು ಮೊಹರುಗಳಲ್ಲಿ ಹಾಗೂ ಮೊಹರುಗಳ ಅಚ್ಚೊತ್ತುಗಳಲ್ಲಿನ ಅನುಪಸ್ಥಿತಿಯ ವಿವರಣೆಗಳ ನಡುವೆ ಸಂಬಂಧ ಸ್ಥಾಪಿಸಲು ವಿಫಲವಾಗಿದ್ದು ಅದು ಪ್ರಮುಖ ಪ್ರಶ್ನೆಯನ್ನು ಬಗೆಹರಿಸದೆ ಹಾಗೆಯೇ ಬಿಟ್ಟಿದೆ. ಕುದುರೆಗಳು ಆ ದೇಶದ ಬಿಸಿ, ಆರ್ದ್ರ ವಾತಾವರಣದಲ್ಲಿ ಇದ್ದವು ಎಂದಾದಲ್ಲಿ ಬಳಪದ ಕಲ್ಲಿನ (steatite (ಸ್ಟೀಟೈಟ್)) ಕುದುರೆಯ ಮೊಹರುಗಳು ನಮಗೆ ಖಂಡಿತ ಸಿಗುತ್ತಿದ್ದವು.

ಸೈದ್ಧಾಂತಿಕವಾಗಿ, ಹರಪ್ಪಾ ನಾಗರಿಕತೆಯಲ್ಲಿ ಒಂದು ಅಥವಾ ಎರಡು ಕುದುರೆಗಳು ವಾಸ್ತವಿಕವಾಗಿ ಇದ್ದಿರುವುದು ಆಶ್ಚರ್ಯಕರವಾಗಿರಬೇಕಾಗಿಲ್ಲ, ಏಕೆಂದರೆ ಹರಪ್ಪಾದವರು ಆನೆ, ನೀರುಕೋಣ ಮತ್ತು ನವಿಲುಗಳಂತಹ ಭಾರತದಲ್ಲಿ ಕಾಣಸಿಗುವ ಪ್ರಾಣಿಗಳನ್ನು ಮೆಸಪೊಟೇಮಿಯಾಗೆ ರಫ್ತು ಮಾಡಿ, ಅಲ್ಲಿಂದ ಅಥವಾ ಬೇರೆಡೆಯಿಂದ ಕುದುರೆಯನ್ನು ಆಮದು ಮಾಡಿಕೊಳ್ಳುವ ಐತಿಹಾಸಿಕ ದಾಖಲೆಗಳಿವೆ. ಆದರೆ ಅದು ಋಗ್ವೇದದಲ್ಲಿ ಕುದುರೆ ವಹಿಸುವ ಪಾತ್ರ ಮತ್ತು ಹರಪ್ಪಾದ ಪುರಾತತ್ತ್ವ ದಾಖಲೆ ಮತ್ತು ಕಲ್ಪನಾಚಿತ್ರಣಗಳಲ್ಲಿ ಅದು ವಹಿಸುವ - ಅಥವಾ ವಹಿಸದಿರುವ – ಪಾತ್ರದ ನಡುವಿನ ವಿಷಯವು ಗುರುತರ ವಿಚ್ಛಿನ್ನತೆಯ ಒಟ್ಟಾರೆ ಚಿತ್ರವನ್ನು ಬದಲಾಯಿಸುವುದಿಲ್ಲ.

ಪುರಾತತ್ವಶಾಸ್ತ್ರಜ್ಞ ಎಂ.ಕೆ. ಧವಳೀಕರ್ (M.K. Dhavalikar) ಅವರು ಕುದುರೆಗಳು ಮತ್ತು ವೇದಗಳ ವಿಷಯವನ್ನು ಚರ್ಚಿಸಿದಾಗ ಋಗ್ವೇದವು ಸ್ಪಷ್ಟವಾಗಿ ಹರಪ್ಪಾ ನಂತರದ ಕಾಲಕ್ಕೆ ಸೇರಿದ್ದು ಎಂಬುದರ ಕುರಿತು ಅವರು ಹೀಗೆ ಹೇಳಿದ್ದರು:

> ನೀವು ಯಾವುದಾದರೂ ಕಾದಂಬರಿಯನ್ನು ಓದುತ್ತಿದ್ದರೆ, ನೀವು ಅದರ ಕಾಲಮಾನವನ್ನು ಹೇಗೆ ನಿರ್ಣಯಿಸುತ್ತೀರಿ? ಅದರಲ್ಲಿ ಮೊಬೈಲ್ ಬಗ್ಗೆ ಉಲ್ಲೇಖವಿದ್ದರೆ, ನೀವು ಅದನ್ನು 20 ನೇ ಶತಮಾನ ಅಥವಾ ನಂತರದಲ್ಲಿ ಬರೆಯಲಾಗಿದ್ದು ಎಂದು ಹೇಳುವಿರಿ . . . ಅದರಂತೆಯೇ ಋಗ್ವೇದದಲ್ಲಿ ಎರಡು ಕಾಲಮಾನದ ಗುರುತುಗಳಿವೆ. ಒಂದು ಕುದುರೆಯ ಇರುವಿಕೆ. ಅದು ಬಹಳ ಮುಖ್ಯ. ಏಕೆಂದರೆ ಅದು ಆರ್ಯರ ಅತ್ಯಂತ ನೆಚ್ಚಿನ ಪ್ರಾಣಿ. ಅದು ಅವರ ಧಾರ್ಮಿಕ ನಂಬಿಕೆಗಳಲ್ಲಿಯೂ ಸಹ ಒಂದು ಪಾತ್ರವನ್ನು ವಹಿಸಿತ್ತು . . . ಎರಡನೆಯದಾಗಿ, ಋಗ್ವೇದವು 'ಅಯಸ್'ನ ಬಗ್ಗೆಯೂ ಮಾತನಾಡುತ್ತಿದ್ದು ಅದರ ಅರ್ಥ ಸ್ಪಷ್ಟವಾಗಿ ತಾಮ್ರ, ಏಕೆಂದರೆ ನಂತರ ಕಬ್ಬಿಣವನ್ನು ಕಂಡುಹಿಡಿದಾಗ, ಅವರು 'ಕೃಷ್ಣ ಅಯಸ್' ಅಥವಾ ಕಪ್ಪು ತಾಮ್ರ ಎಂಬ ಹೊಸ ಪದವನ್ನು ಸೃಷ್ಟಿಸಬೇಕಾಯಿತು.
>
> ಈಗ ಸಂಪೂರ್ಣವಾಗಿ ಪುರಾತತ್ತ್ವ ಶಾಸ್ತ್ರದ ಪುರಾವೆಗಳ ಆಧಾರದ ಮೇಲೆ, ಸಾಕುಪ್ರಾಣಿಯಾಗಿ ಕುದುರೆಯು 1900 BCE ಯಿಂದ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತದೆ. ಅಂದರೆ ಅಂತ್ಯ ಕಾಲದ ಹರಪ್ಪಾದ ಅವಧಿ, ಅಂದರೆ 1900 BCE ಯಿಂದ 1500 BCE. ಹಾಗಾಗಿ ಇದು ಒಂದು ನಿರ್ದಿಷ್ಟವಾದ ನಿಗದಿತ ಕಾಲ - 1900 ಅಥವಾ 1800 ರ ಸುಮಾರಿಗೆ. ಕಬ್ಬಿಣವು ಉತ್ತರ ಭಾರತದಲ್ಲಿ 1400 ರಿಂದ 1500 BCE ಯ ಹೊತ್ತಿಗೆ ಇತ್ತು. ಆದ್ದರಿಂದ ನೀವು ಧೈರ್ಯವಾಗಿ ಋಗ್ವೇದವನ್ನು 2000 BCE ಮತ್ತು 1400 BCE ನಡುವೆ ಎಲ್ಲಾದರೂ ನಿಗದಿಪಡಿಸಬಹುದು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಅತ್ಯಂತ ಪ್ರಾಚೀನ ವೇದವು ಹರಪ್ಪಾ ನಾಗರಿಕತೆಯ ನಂತರದ ಕಾಲಮಾನಕ್ಕೆ ಸೇರಿದ್ದು.[8]

## ನಾಗರಿಕತೆಯ ಅವಶೇಷಗಳು

ವೈದಿಕ ಗ್ರಂಥಸಂಗ್ರಹವು ಹಲವು ಶತಮಾನಗಳಲ್ಲಿ ರಚಿತವಾಗಿತ್ತು, ಮತ್ತು ಹರಪ್ಪಾ ನಾಗರಿಕತೆ ಮತ್ತು ಅದರ ನಡುವಿನ ವ್ಯತ್ಯಾಸವು ಕಾಲಾಂತರದಲ್ಲಿ ಅಸ್ಪಷ್ಟವಾಗುತ್ತದೆ (blurs) ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ. ವೈದಿಕ ಪಠ್ಯವು ನಂತರದ್ದಾಗಿದ್ದಷ್ಟು, ಹರಪ್ಪಾ ಸಾಂಸ್ಕೃತಿಕ ಪರಂಪರೆಗೆ ಸಂಬಂಧಗಳನ್ನು ಹೊಂದಿದೆ ಎಂಬುದನ್ನು ಕಂಡುಕೊಳ್ಳುವ ಸಾಧ್ಯತೆ ಹೆಚ್ಚು. ಋಗ್ವೇದವು 'ಶಿಷ್ಣ-ದೇವ' ಆರಾಧನೆಗೆ ವಿರುದ್ಧವಾಗಿ ಇದ್ದಿದ್ದರೆ ಮತ್ತು ಅದನ್ನು ತಿರಸ್ಕರಿಸಿದಿದ್ದರೆ, 500 BCE ಮತ್ತು 100 BCE ನಡುವೆ ರಚಿತವಾದ ಉಪನಿಷತ್ತುಗಳ ಕಾಲದ ವೇಳೆಗೆ ಅದು ಹಾಗಿರಲಿಲ್ಲ. ದ್ರಾವಿಡ ಭಾಷೆಗಳಿಂದ ಎರವಲು ಪಡೆದ ಪದಗಳ ಸಂಖ್ಯೆಯೂ ಸಹ ಹಿಂದಿನ ವೇದ ಗ್ರಂಥಗಳಿಗಿಂತ ನಂತರದ ವೇದ ಗ್ರಂಥಗಳಲ್ಲಿ ಹೆಚ್ಚಾಗಿದೆ. ಯೋಗವನ್ನು ನೆನಪಿಸುವ ಅನೇಕ ಹರಪ್ಪಾ ಮೊಹರುಗಳು ಹಾಗೂ ಮೊಹರುಗಳ ಅಚ್ಚೊತ್ತುಗಳು ಮತ್ತು ಸುಟ್ಟ ಜೇಡಿಮಣ್ಣಿನ (terracotta) ಪ್ರತಿಮೆಗಳಿವೆಯಾದರೂ ಋಗ್ವೇದದಲ್ಲಿ ಯೋಗದ ಬಗ್ಗೆ ಯಾವುದೇ ಸ್ಪಷ್ಟ ಉಲ್ಲೇಖಗಳಿಲ್ಲ. ಆದರೆ '*ಕಥಾ ಉಪನಿಷತ್*' ನ ಹೊತ್ತಿಗೆ, ಅದರ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳಿವೆ. ಹರಪ್ಪಾ ಮುದ್ರೆಯೊಂದು ಅವನ ಸುತ್ತ ಪ್ರಾಣಿಗಳಿರುವ, ಕೊಂಬಿನ ಶಿರಸ್ತ್ರಾಣವನ್ನು ಧರಿಸಿ ಯೋಗದಂತಹ ಭಂಗಿಯಲ್ಲಿ ಕುಳಿತಿರುವ ಓರ್ವ ವ್ಯಕ್ತಿಯನ್ನು ತೋರಿಸುತ್ತದೆ, ಮತ್ತು ಕೆಲವರು ಅದನ್ನು ಶಿವನ ಆರಂಭಿಕ ಚಿತ್ರಣವೆಂದು ಅರ್ಥೈಸಿರುತ್ತಾರೆ. ಅನೇಕ ಇತಿಹಾಸಕಾರರು ಮತ್ತು ಪುರಾತತ್ತ್ವಜ್ಞರು, ಇದು ನಂತರದ ಕಾಲದ ಪರಿಕಲ್ಪನೆಗಳನ್ನು ದೂರದ ಭೂತಕಾಲಕ್ಕೆ ಆರೋಪಿಸುತ್ತಿದೆ ಎಂಬ ಕಾರಣಕ್ಕೆ, ಈ ಅರ್ಥೈಸುವಿಕೆಯನ್ನು ತಿರಸ್ಕರಿಸುತ್ತಾರೆ. ಅದು ಹಾಗಿದ್ದರೂ, ಶಿವನು ತಪಸ್ವಿಯ ಸ್ವರೂಪ ಎಂಬ ನಂತರದ ಕಾಲದ ಕಲ್ಪನೆಗಳು ಮತ್ತು ಹರಪ್ಪಾದವರ ಮೊಹರುಗಳ ಚಿತ್ರಗಳು, ನಂಬಿಕೆಗಳು ಮತ್ತು ಪುರಾಣಗಳು ಒಮ್ಮುಖವಾಗುವ ಸಾಧ್ಯತೆಯನ್ನು ಅದು ಇನ್ನೂ ತೆರೆದಿಡುತ್ತದೆ.

ಇದು ಆಶ್ಚರ್ಯವೇನಲ್ಲ, ಏಕೆಂದರೆ ಕಾಲಾಂತರದಲ್ಲಿ ಒಳಬರುತ್ತಿರುವ ಸಂಸ್ಕೃತಿಗಳು ಅನೇಕವೇಳೆ ಅಸ್ತಿತ್ವದಲ್ಲಿರುವ ಸಂಸ್ಕೃತಿಗಳನ್ನು ಅಳವಡಿಸಿಕೊಳ್ಳುತ್ತವೆ, ಅವುಗಳಿಗೆ ಹೊಂದಿಕೊಳ್ಳುತ್ತವೆ ಮತ್ತು ಅವುಗಳೊಂದಿಗೆ ಬೆರೆಯುತ್ತವೆ, ಮತ್ತು ಆರ್ಯರು ಹಾಗೂ ಹರಪ್ಪಾದವರು ಎಲ್ಲಾ ಸಾಂಸ್ಕೃತಿಕ ಕ್ಷೇತ್ರಗಳು ಮತ್ತು ಭೌಗೋಳಿಕ ಪ್ರದೇಶಗಳಲ್ಲಿ, ವಿವಿಧ ಪ್ರಮಾಣಗಳಲ್ಲಿ ಹಾಗೆಯೇ ಮಾಡಿರಬಹುದು. ಮತ್ತು, ಸಹಜವಾಗಿ, ಹರಪ್ಪಾ ನಾಗರಿಕತೆಯ ಸಾಂಸ್ಕೃತಿಕ ಪರಂಪರೆಯು ವೈದಿಕ ಗ್ರಂಥಸಂಗ್ರಹಕ್ಕಿಂತ ಜನಪ್ರಿಯ ಆಚರಣೆಗಳಲ್ಲಿ ಕಂಡುಬರುತ್ತದೆ.

ಅಂಗಳಗಳ ಸುತ್ತಲೂ ಮನೆಗಳನ್ನು ನಿರ್ಮಿಸುವ ರೀತಿ; ಎತ್ತಿನ ಬಂಡಿಗಳು; ಬಳೆಗಳ ಮಹತ್ವ ಮತ್ತು ಅವುಗಳನ್ನು ತೊಡಿಸಿಕೊಳ್ಳುವ ರೀತಿ; ಮರಗಳನ್ನು ಪೂಜಿಸುವ ವಿಧಾನ ಮತ್ತು ವಿಶೇಷವಾಗಿ ಅರಳಿ ಮರದ ಪವಿತ್ರತೆ; ಎಲ್ಲಡೆಯೂ ಇರುವ ಭಾರತದ ಅಡುಗೆ ಪಾತ್ರೆ ಮತ್ತು ಮಣ್ಣಿನ ಲೋಟ (kulladh); ಎಮ್ಮೆಯನ್ನು ಆರಾಧಿಸುವ ಪದ್ಧತಿಯ ಮಹತ್ವ; ಆಭರಣಗಳು, ಕುಂಬಾರಿಕೆ ಮತ್ತು ಮುದ್ರೆಗಳಲ್ಲಿನ ವಿನ್ಯಾಸಗಳು ಮತ್ತು ಅಲಂಕಾರ ಸಂಕೇತಗಳು; ದಾಳಗಳ ಆಟಗಳು ಮತ್ತು ಚದುರಂಗದ ಆರಂಭಿಕ ರೂಪ (ಹಲವು ಹರಪ್ಪಾ ತಾಣಗಳಲ್ಲಿ ದಾಳಗಳು ಮತ್ತು ಚದುರಂಗದಂತಹ ಫಲಕಗಳು ಕಂಡುಬಂದಿವೆ); ಇಂದಿಗೂ ತೊಳೆಯಲು ಬಳಸುವ ಸಾಧಾರಣ ಲೋಟ; ಮತ್ತು ಸಿಂಧೂರವನ್ನು ಹಚ್ಚಿಕೊಳ್ಳುವ ಹಾಗೂ ಕೆಲವು ಅಳತೆಯ ವ್ಯವಸ್ಥೆಗಳನ್ನು ಅನ್ವಯಿಸುವ ಅಭ್ಯಾಸ - ಹೀಗೆ, ನಾವು ಹರಪ್ಪಾ ನಾಗರಿಕತೆಯ ಸಂಪ್ರದಾಯಗಳನ್ನು ಮುಂದುವರಿಸುವ ವಿಧಾನಗಳು ಲೆಕ್ಕವಿಡಲಾಗದಷ್ಟು ಇವೆ.

ಗುಜರಾತ್‌ನಲ್ಲಿರುವ ಹರಪ್ಪಾ ತಾಣವಾದ ಲೋಥಲ್ (Lothal) ನಲ್ಲಿ ಪತ್ತೆಯಾದ ಹೂದಾನಿಯಲ್ಲಿ ಕಾಗೆಯೊಂದು ಹೂಜಿಯ ಪಕ್ಕದಲ್ಲಿ ನಿಂತಿರುವುದನ್ನು ಮತ್ತು ಜಿಂಕೆಯೊಂದು ಅದರತ್ತ ಹಿಂತಿರುಗಿ ನೋಡುತ್ತಿರುವ ಒಂದು ವರ್ಣಚಿತ್ರವಿದ್ದು ಅದು

ಪಂಚತಂತ್ರದಲ್ಲಿ ಬಾಯಾರಿದ ಕಾಗೆಯ ಕಥೆಯನ್ನು ಚಿತ್ರಿಸುತ್ತಿರುವಂತೆ ತೋರುತ್ತದೆ. ಹಾಗಾಗಿ ನಾವು ನಮ್ಮ ಮಕ್ಕಳಿಗೆ ಹೇಳುವ ಕೆಲವು ಕಥೆಗಳು ಹರಪ್ಪಾದವರು ತಮ್ಮ ಮಕ್ಕಳಿಗೆ ಹೇಳಿದ ಕಥೆಗಳೇ ಇರಬಹುದು.

ಆದ್ದರಿಂದ, 2000 BCE ಯ ಸುಮಾರಿಗೆ ಕೊನೆಗೊಂಡದ್ದು ಏನೆಂದರೆ ಅದು ಏಳು ಶತಮಾನಗಳಿಗೂ ಹೆಚ್ಚು ಕಾಲ ನಾಗರಿಕತೆಯನ್ನು ಮುಂದುವರೆಸಿಕೊಂಡು ಬಂದಂತ ಅಧಿಕಾರ ರಚನೆ, ಮತ್ತು ಅದರೊಂದಿಗೆ ಲಿಪಿ, ಮುದ್ರೆಗಳು, ಪ್ರಮಾಣೀಕೃತ ಇಟ್ಟಿಗೆಗಳು ಮತ್ತು ಏಕಶೃಂಗಿಯಂತಹ ಕೆಲವು ಮಿಥ್ಯೆಗಳು ಕೂಡ ಕಣ್ಮರೆಯಾದವು. ಆದರೆ ಸಾಮಾನ್ಯ ಮನುಷ್ಯನ ಜೀವನದ ಅವಿಭಾಜ್ಯ ಭಾಗವಾಗಿರುವ ಅನೇಕ ಇತರ ವಿಷಯಗಳು ದಕ್ಷಿಣ ಏಷ್ಯಾದ ಮೊದಲ ನಾಗರಿಕತೆಗೆ ಆಧಾರಭೂತವಾಗಿದ್ದ ಕೆಲವು ತಾತ್ವಿಕ ಮತ್ತು ಸಾಂಸ್ಕೃತಿಕ ಅಂಶಗಳ ಜೊತೆಗೆ ಮುಂದುವರೆದವು. ನಾವು ಅವೆಲ್ಲವನ್ನೂ ಗುರುತಿಸದೇ ಇರಬಹುದು, ಆದರೆ ಅವು ಇಂದು ನಮ್ಮ ಸಂಸ್ಕೃತಿ, ಸಂಪ್ರದಾಯಗಳು ಮತ್ತು ಇತಿಹಾಸವು ನಿಂತಿರುವ ಅಡಿಪಾಯವಾಗಿದೆ.

ಹರಪ್ಪಾದ ನಾಗರಿಕತೆ ಮತ್ತು 'ಆರ್ಯರ' ನಡುವಿನ ದೀರ್ಘ ಕಾಲದ ಪರಸ್ಪಾನುಕ್ರಿಯೆಯ ಪ್ರಕ್ರಿಯೆಯ ಕೊನೆಯಲ್ಲಿ, ಹಿಂದೆ ಉತ್ತರ, ಪಶ್ಚಿಮ ಮತ್ತು ಪೂರ್ವ ಭಾಗದ ಭಾರತದ ಹೆಚ್ಚಿನ ಭಾಗಗಳಲ್ಲಿ ಮಾತನಾಡುತ್ತಿದ್ದ ಭಾಷೆಗಳ ಬದಲು ಇಂಡೋ-ಯುರೋಪಿಯನ್ ಭಾಷೆಗಳನ್ನು ಮಾತನಾಡುತ್ತಿರುವುದನ್ನು ಮತ್ತು ಹರಪ್ಪಾ ಸಂಸ್ಕೃತಿ ಹಾಗೂ ಋಗ್ವೇದ ಎರಡರಿಂದಲೂ ಗುರುತಿಸಬಹುದಾದ ಅಂಶಗಳೊಂದಿಗೆ ಹೊಸದೊಂದು ಸಮನ್ವಯದ ಸಂಸ್ಕೃತಿಯು ಹೊರಹೊಮ್ಮುತ್ತಿರುವುದನ್ನು ನಾವು ನೋಡುತ್ತೇವೆ. ಹರಪ್ಪಾದವರ ಲಿಪಿ ಮತ್ತು ಮುದ್ರೆಗಳು ಪ್ರಾಗೈತಿಹಾಸದ ಮಂಜಿನಲ್ಲಿ ಕಣ್ಮರೆಯಾದಂತೆಯೇ, ವೇದಗಳ ಕೆಲವು ಆರಂಭಿಕ ದೇವರುಗಳು ಮತ್ತು ಆಚರಣೆಗಳು ಸಹ ಕಣ್ಮರೆಯಾದವು.

ಆರ್ಯರ ಶಾಸ್ತ್ರ ಭಾಷೆಯಾದ ಸಂಸ್ಕೃತವು, ಇತರ ಎಲ್ಲ ಶಾಸ್ತ್ರ ಭಾಷೆಗಳಂತೆ ಅದರಲ್ಲಿಯೂ ನಾವು ಕನಿಷ್ಠ ಬದಲಾವಣೆ ಆಗುವುದು ಎಂದು ನಿರೀಕ್ಷಿಸುವಂತ ಭಾಷೆಯು, ಹರಪ್ಪಾ ಭಾಷೆಗಳೊಂದಿಗೆ ಅದರ ಪರಸ್ಪರಾನುಕ್ರಿಯೆಯ ಕಾರಣ ಸ್ವತಃ ಸ್ವಲ್ಪ ಮಟ್ಟಿಗೆ ಬದಲಾಯಿತು. ಇಂಡೋ-ಯುರೋಪಿಯನ್ ಭಾಷೆಗಳಲ್ಲಿ ಬಹಳ ಅಪರೂಪವಾದ ಆದರೆ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದಂತಹ ಆರ್ಯ ಪೂರ್ವ ಭಾರತದ ಭಾಷೆಗಳಲ್ಲಿ ಬಹಳ ಸಾಮಾನ್ಯವಾಗಿರುವ ಮೂರ್ಧನ್ಯ (Retroflex) ವ್ಯಂಜನಗಳು (ಇದನ್ನು ಉಚ್ಚರಿಸಲು ನೀವು ನಿಮ್ಮ ನಾಲಿಗೆಯನ್ನು ಸುರುಳಿಯಾಗಿಸಿ ಅಂಗುಳಿನ ಹಿಂಭಾಗ (palate)ಕ್ಕೆ ಹೊಡೆಯಬೇಕು) ಸ್ವತಃ ಋಗ್ವೇದ ಸಂಸ್ಕೃತದ ಭಾಗವಾಯಿತು. ಉದಾಹರಣೆಗಳು ಪುಷ್ಟಿ, ಗಣ, ವರ್ಣ ಮತ್ತು ಪೂರ್ಣ ಎಂಬಂತವುಗಳನ್ನು ಒಳಗೊಳ್ಳುವುದು. ಸಂಸ್ಕೃತಕ್ಕೆ ಅತ್ಯಂತ ನಿಕಟ ಸಂಬಂಧ ಹೊಂದಿರುವ ಹಳೆಯ ಇರಾನಿನ ಭಾಷೆಯೂ ಸಹ ಯಾವುದೇ ಮೂರ್ಧನ್ಯ ವ್ಯಂಜನಗಳನ್ನು ಹೊಂದಿಲ್ಲ ಎಂಬುದನ್ನು ಪರಿಗಣಿಸಿದರೆ, ಕಾಲಾಂತರದಲ್ಲಿ ಸಂಸ್ಕೃತದಲ್ಲಿನ ಅವುಗಳ ಹೆಚ್ಚುತ್ತಿರುವ ಉಪಸ್ಥಿತಿಯನ್ನು ಸಾಮಾನ್ಯವಾಗಿ ಸಂಸ್ಕೃತವು ಬಳಕೆಯಾಗುವ ಮೊದಲು ಭಾರತದಲ್ಲಿ ಪ್ರಚಲಿತವಾಗಿದ್ದ ಭಾಷೆಗಳ ಪ್ರಭಾವದ ಪರಿಣಾಮ ಎಂಬುದಾಗಿ ಪರಿಗಣಿಸಲಾಗುತ್ತದೆ. ಋಗ್ವೇದವು ದ್ರಾವಿಡ ಭಾಷೆಗಳಿಂದ ಎರವಲು ಪಡೆದ ಸೀಮಿತ ಸಂಖ್ಯೆಯ ಪದಗಳನ್ನು ಹೊಂದಿದೆಯಾದರೂ ನಂತರದ ವೇದಗಳಲ್ಲಿ ಈ ಸಂಖ್ಯೆಯು ಸ್ಥಿರವಾಗಿ ಹೆಚ್ಚಾಗುತ್ತದೆ.[9]

## ಕಾರ್ಡೆಡ್ ವೇರ್ ಸಂಸ್ಕೃತಿಯ ಉದಾಹರಣೆ

ಹರಪ್ಪಾದವರು ಮತ್ತು ವಲಸೆ ಬರುತ್ತಿದ್ದ 'ಆರ್ಯರ' ನಡುವಿನ ಘರ್ಷಣೆಯಿಂದ ಹೊಸ ಸಂಸ್ಕೃತಿಯೊಂದು ಹುಟ್ಟಿದ್ದು ಆಶ್ಚರ್ಯವೇನಲ್ಲ, ಏಕೆಂದರೆ ನಿಖರವಾಗಿ ಸಾವಿರ ವರ್ಷಗಳ ಹಿಂದೆ ಸ್ಟೆಪ್ ಪ್ರದೇಶದ ಪಶುಪಾಲಕರು ಪಶ್ಚಿಮ ಯುರೋಪಿಗೆ ಪ್ರವಾಹದಂತೆ ಬಂದಾಗಲೂ ಸಹ ಹಾಗೆಯೇ ಆಗಿತ್ತು. ಯುರೋಪಿಗೆ ಸ್ಟೆಪ್ ಹುಲ್ಲುಗಾವಲಿನ ಯಾಮ್ನಾಯರ ಆಗಮನದ ಅತ್ಯಂತ ಗಮನಾರ್ಹ ಪುರಾತತ್ತ್ವ ಕುರುಹು ಆದಂತ ಯುರೋಪಿನಲ್ಲಿನ ಕಾರ್ಡೆಡ್ ವೇರ್ ಸಂಸ್ಕೃತಿಯು ಸ್ಟೆಪ್ ಪ್ರದೇಶದಿಂದ ಬಂದ ಅವರಿಂದ ಪಸರಿಸಲ್ಪಡಲಿಲ್ಲ. ಅದು ಯಾಮ್ನಾಯದವರು ಮತ್ತು ಅವರು ಎದುರುಗೊಂಡಿದ್ದಂತ ಯುರೋಪಿನ ನವಶಿಲಾಯುಗದ ರೈತರ ನಡುವಿನ ಪರಸ್ಪರಾನುಕ್ರಿಯೆಯ ಪರಿಣಾಮವಾಗಿತ್ತು.

ಡೇವಿಡ್ ಆಂಥೋನಿ ಅದನ್ನು ತಮ್ಮ '*ದ ಹಾರ್ಸ್, ದ ವೀಲ್ ಆಂಡ್ ಲ್ಯಾಂಗ್ವೇಜ್*' ಎಂಬ ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ:

> ಕಾರ್ಡೆಡ್ ವೇರ್ ಸಂಸ್ಕೃತಿಯ ಕಾಲಘಟ್ಟದ ಭೌತಿಕ ಸಂಸ್ಕೃತಿಯು ಹೆಚ್ಚಾಗಿ ಉತ್ತರ ಭಾಗದ ಯುರೋಪಿಗೆ ಸೇರಿದಾಗಿತ್ತಾದರೂ ಅವರ ರೀತಿನೀತಿಗಳಿಗೆ ಆಧಾರವಾಗಿದ್ದ ಅಂಶಗಳು ಯಾಮ್ನಾಯ ಸಂಸ್ಕೃತಿಯ ಕಾಲಘಟ್ಟದ ರೀತಿನೀತಿಗಳನ್ನು ಬಹಳಷ್ಟು ಹೋಲುತ್ತಿದ್ದವು - ವ್ಯಾಪಕವಾಗಿ ಚಲನಶೀಲತೆ (ಎತ್ತಿನ ಬಂಡಿಗಳು ಮತ್ತು ಕುದುರೆಗಳನ್ನು ಬಳಸಿಕೊಂಡು) ಆಧಾರಿತ ಧನಗಾಹಿಯ ಅರ್ಥವ್ಯವಸ್ಥೆಯ ಅಳವಡಿಕೆ, ಮತ್ತು ಧಾರ್ಮಿಕ ಸಂಬಂಧಿ ಪ್ರತಿಷ್ಠೆಯಲ್ಲಿ ಮತ್ತು ಜಾನುವಾರುಗಳ ಮೌಲ್ಯದಲ್ಲಿನ ಅನುಗುಣವಾದ ಏರಿಕೆ.

ಅವರು ಕಾರ್ಡೆಡ್ ವೇರ್ ಸಂಸ್ಕೃತಿಯ ಕಾಲಘಟ್ಟವನ್ನು ಗೊತ್ತುಪಡಿಸುವ ವಿಶಿಷ್ಟ ಗುಣಲಕ್ಷಣಗಳು ಹೀಗಿದ್ದಿವು ಎಂದು ಬರೆಯುತ್ತಾರೆ:

> [ಒಂದು] ಪಶುಪಾಲನೆಯ, ಚಲನಶೀಲಾ ಅರ್ಥವ್ಯವಸ್ಥೆಯಾಗಿದ್ದು ಅದು ಬಹುತೇಕವಾಗಿ ನೆಲಸುನಾಡು ತಾಣಗಳು ಕಣ್ಮರೆ (ಹೆಚ್ಚು ಸ್ಟೆಪ್ ಪ್ರದೇಶದಲ್ಲಿನ ಯಾಮ್ನಾಯ ಸಂಸ್ಕೃತಿಯಂತೆ) ಆಗುವುದರಲ್ಲಿ, ಬಹುತೇಕವಾಗಿ ದಿಬ್ಬಗಳ ಅಡಿಯಲ್ಲಿ ಏಕೈಕ ಸಮಾಧಿಗಳನ್ನು ಒಳಗೊಂಡ ಅಂತ್ಯಕ್ರಿಯೆಯ ಆಚರಣೆಗಳ ಸಾರ್ವತ್ರಿಕ ಅಳವಡಿಕೆ (ಯಾಮ್ನಾಯ ಸಂಸ್ಕೃತಿಯಂತೆ) ಯಲ್ಲಿ, ಹೆಚ್ಚು ಕಲ್ಲಿನ ಸುತ್ತಿಗೆ-ಕೊಡಲಿಗಳ ಬಳಕೆಯಲ್ಲಿ. . . ಮತ್ತು ಅವುಗಳಲ್ಲಿ ಹಲವು ಸ್ಥಳೀಯ ಶೈಲಿಯದ ಮೂಲಮಾದರಿಗಳನ್ನು ಹೊಂದಿದ್ದ ನಿರ್ದಿಷ್ಟ ರೀತಿಯ ಹುರಿ ಅಲಂಕೃತ ಕಪ್‌ಗಳು ಮತ್ತು ಚುಂಬುಪಾತ್ರೆಗಳಿಗೆ ಸಂಬಂಧಿಸಿದ ಕುಡಿಯುವ ಸಂಸ್ಕೃತಿಯ ಹರಡುವಿಕೆಯಲ್ಲಿ ಪರಿಣಮಿಸಿತು . . .

2017ರಲ್ಲಿ '*ಆಂಟಿಕ್ವಿಟಿ (Antiquity)*'ಎಂಬ ನಿಯತಕಾಲಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ, ಸ್ವೀಡನ್‌ನ ಗೋಥೆನ್‌ಬರ್ಗ್ ವಿಶ್ವವಿದ್ಯಾಲಯದ ಪುರಾತತ್ತ್ವ ಶಾಸ್ತ್ರದ ಪ್ರಾಧ್ಯಾಪಕ ಕ್ರಿಸ್ತಿಯಾನ್ ಕ್ರಿಸ್ತಿಯಾನ್ಸೆನ್ (Kristian Kristiansen) ಮತ್ತು ಮೂವರು ಸಹ-ಲೇಖಕರು ಕಾರ್ಡೆಡ್ ವೇರ್ ಸಂಸ್ಕೃತಿ ಹೇಗೆ ಬಂದಿತು ಎಂಬುದರ ಕುರಿತು ಆಳವಾಗಿ ಅಧ್ಯಯನ ಮಾಡಿದರು. ಲೇಖನವು ಪಶುಗಳ ಹಿಂಡುಗಳಿಗೆ ಸ್ಟೆಪ್ ಪ್ರದೇಶದಂತ ಮೇವಿನ ಪ್ರದೇಶಗಳನ್ನು ಸೃಷ್ಟಿಸಲು ಕಾಡುಗಳನ್ನು ಬೃಹತ್ ಪ್ರಮಾಣದಲ್ಲಿ ಸುಡುವುದರ ಹೊರತಾಗಿ, ಸ್ಟೆಪ್ ಪ್ರದೇಶದಿಂದ ಯುರೋಪ್‌ಗೆ ಆದ ವಲಸೆಯು ಏನನ್ನು ಒಳಗೊಂಡಿತ್ತು ಎಂಬುದನ್ನು ಚರ್ಚಿಸುತ್ತದೆ. ಲೇಖಕರು ಅನೇಕ ಸಮಾಧಿ ಸ್ಥಳಗಳಿಂದ ವ್ಯವಸ್ಥಿತ ಪುರಾವೆಗಳನ್ನು ಕಂಡುಕೊಂಡಿದ್ದು ಅದು ಸಮಾಧಿಗಳಲ್ಲಿ ಸಮಾಧಿ ಮಾಡಲಾದ ಅನೇಕ ಮಹಿಳೆಯರು ಸ್ಥಳೀಯ ಮೂಲದವರಾಗಿರಲಿಲ್ಲ ಮತ್ತು ಬಾಲ್ಯದಲ್ಲಿ ವಿಭಿನ್ನ ಆಹಾರ ಪದ್ಧತಿಯನ್ನು ಹೊಂದಿದ್ದರು ಎಂಬುದು 'ಕಾರ್ಡೆಡ್ ವೇರ್ ಸಂಸ್ಕೃತಿಯ ಪುರುಷರು ಭಿನ್ನಗೋತ್ರದ ವಿವಾಹವನ್ನು [ಒಬ್ಬರ ಸಮುದಾಯದ ಹೊರಗೆ ಮದುವೆಯಾಗುವುದು], ಪ್ರಾಯಶಃ ಅಪಹರಣದ ಮೂಲಕ ಮಾಡಿಕೊಳ್ಳುತ್ತಿದ್ದರು' ಎಂದು ಸೂಚಿಸಿತು. ಕಾರ್ಡೆಡ್ ವೇರ್ ಸಂಸ್ಕೃತಿಯ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚು ವೈವಿಧ್ಯಮಯ mtDNA ಹ್ಯಾಪ್ಲೋ ಗುಂಪುಗಳನ್ನು ತೋರಿಸಿದ ಆನುವಂಶಿಕ ಪುರಾವೆಗಳು ಸಹ ಇದನ್ನು ಬೆಂಬಲಿಸುತ್ತವೆ.

ಮುಂದಿವರಿದು ಅಧ್ಯಯನವು ಹೀಗೆ ಹೇಳುತ್ತದೆ:

> ಹೊಸದಾಗಿ ವಲಸೆ ಹೋಗುತ್ತಿರುವ ಗುಂಪುಗಳು ಪ್ರಮುಖವಾಗಿ ಪುರುಷರಾಗಿದ್ದಲ್ಲಿ, ಭಿನ್ನಗೋತ್ರದ ವಿವಾಹವು ಒಂದು ಜಾಣ್ಮೆಯ, ಮತ್ತು ಬಹುಶಃ ಅಗತ್ಯವಾದ ನೀತಿಯಾಗಿದೆ. ಇದು ವಿಸ್ತರಿಸುತ್ತಿರುವಂತ ಒಂದು ಪಶುಪಾಲನಾ ಅರ್ಥವ್ಯವಸ್ಥೆಗೆ ಸಂಭವನೀಯ ಸನ್ನಿವೇಶವಾಗಿದೆ, ಮತ್ತು ಜ್ಯೂಟ್ಲೆಂಡ್ (Jutland) [ಉತ್ತರ ಭಾಗದ ಜರ್ಮನಿ ಮತ್ತು ಡೆನ್ಮಾರ್ಕ್‌ನಲ್ಲಿ] ನಲ್ಲಿ ಏಕೈಕ ಸಮಾಧಿ/ಕಾರ್ಡೆಡ್ ವೇರ್ ಸಂಸ್ಕೃತಿಯ ಆರಂಭಿಕ ಕಾಲಘಟ್ಟದ ಪುರಾತತ್ತ್ವದ ದತ್ತಾಂಶದಿಂದ ಬೆಂಬಲಿತವಾಗಿದ್ದು ಅಲ್ಲಿ ಶೇ 90 ರಷ್ಟು ಎಲ್ಲಾ ಸಮಾಧಿಗಳು ಪುರುಷರದಾಗಿತ್ತು. ಭಾರತದಿಂದ

ಬಾಲ್ಟಿಕ್ ಮತ್ತು ಐರ್ಲೆಂಡ್‌ವರೆಗಿನ ನಂತರದ ಐತಿಹಾಸಿಕ ಮೂಲಗಳಿಂದ ಇದು ಮತ್ತಷ್ಟು ಬೆಂಬಲವನ್ನು ಪಡೆಯುತ್ತದೆ. ಅವರು ಈ ಸಮಾಜಗಳ ವಿಶಿಷ್ಟ ಲಕ್ಷಣವನ್ನು, ಹುಡುಗರು ಸಂಪೂರ್ಣವಾಗಿ ಬೆಳೆದ ಯೋಧರ ಶ್ರೇಣಿಗೆ ಪ್ರವೇಶಿಸಲು ಸಿದ್ಧರಾಗಿರುವಂತ ಸಂದರ್ಭದಲ್ಲಿ, 12–13 ರಿಂದ 18–19 ವರ್ಷ ವಯಸ್ಸಿನ ಹುಡುಗರನ್ನು ಒಳಗೊಂಡಂತ ಯುವ ಯೋಧ ಪಡೆಗಳ ರಚನೆ ಎಂಬುದಾಗಿ ವಿವರಿಸುತ್ತಾರೆ. ಅಂತಹ ಯುವ ಯುದ್ಧ-ಪಡೆಗಳಿಗೆ ಹಿರಿಯ ಪುರುಷರು ನೇತೃತ್ವ ವಹಿಸುತ್ತಿದ್ದರು, ಮತ್ತು ಅವರನ್ನು ಸಾಮಾನ್ಯವಾಗಿ 'ಕಪ್ಪು ಯುವಕರು' ಎಂಬ ಕರೆಯಲಾಗುತ್ತಿತ್ತು ಅಥವಾ ಅವರ ದೀಕ್ಷಾ ವಿಧಿಗಳ ಭಾಗವಾಗಿ ಶ್ವಾನಗಳ ಮತ್ತು ತೋಳಗಳ ಹೆಸರುಗಳನ್ನು ನೀಡಲಾಗುತ್ತಿತ್ತು.

ಕ್ರಿಸ್ತಿಯಾನ್ಸೆನ್ ಮತ್ತು ಅವರ ಸಹ-ಲೇಖಕರ ಪ್ರಕಾರ, ಹೆಚ್ಚು ಯುದ್ಧೋಚಿತ ಮತ್ತು ಚಲನಶೀಲರಾಗಿರುವಂತ ಪಶುಪಾಲನಾ ಅರ್ಥವ್ಯವಸ್ಥೆಗಳು ಕೃಷಿ ಸಂಬಂಧಿತ ಅರ್ಥವ್ಯವಸ್ಥೆಗಳ ಮೇಲೆ ಪ್ರಾಬಲ್ಯ ಸಾಧಿಸುತ್ತವೆ. ಪಶುಪಾಲನಾ ಸಮಾಜಗಳಿಂದ ಬಂದ ಯುವ ಪುರುಷರ ಸಂಘಟಿತ ಗುಂಪುಗಳು ಅನೇಕವೇಳೆ ಕೃಷಿ ಆಧಾರಿತ ಸಂಸ್ಕೃತಿಗಳಿಂದ ತಮ್ಮ ಸಂಗಾತಿಗಳನ್ನು ಬಲವಂತವಾಗಿ ವಶಪಡಿಸಿಕೊಂಡು ಹೊಸ ಪ್ರದೇಶಗಳಲ್ಲಿ ನೆಲೆಸಲು ಹೋಗುತ್ತವೆ.

ಈ ಲೇಖನವು ಒಂದು ಮಾದರಿಯದ ಕಾರ್ಡೆಡ್ ವೇರ್ ಸಂಸ್ಕೃತಿಯ ಕುಂಬಾರಿಕೆ ಹೇಗೆ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ಪರಿಶೀಲಿಸುತ್ತದೆ. ಯಾಮ್ನಾಯದವರು ಕುಂಬಾರಿಕೆ ಮಾಡುವಂತ ಆಳವಾಗಿ ಬೇರೂರಿದ ಸಂಪ್ರದಾಯವನ್ನು ಹೊಂದಿರಲಿಲ್ಲ, ಏಕೆಂದರೆ ಅವರ ಅಲೆಮಾರಿಯ ಜೀವನಶೈಲಿಯು ಸುಲಭವಾಗಿ ಮುರಿಯದ ಮತ್ತು ಅವರ ಬಂಡಿಗಳಲ್ಲಿ ಕಷ್ಟವಿಲ್ಲದೆ ಸಾಗಿಸಬಹುದಾದ ವಸ್ತುಗಳನ್ನು ಬಳಸಬೇಕಾಗಿತ್ತು ಎಂಬ ಕಾರಣಕ್ಕೆ ಎಂದು ಲೇಖಕರು ಹೇಳುತ್ತಾರೆ. ಉದಾಹರಣೆಗೆ, ಅವರು ಸಾಮಾನ್ಯವಾಗಿ ಚರ್ಮ, ಮರ ಅಥವಾ ಮರಗಳ ತೊಗಟೆಯನ್ನು ಬಳಸಿ ಧಾರಕಗಳನ್ನು ತಯಾರಿಸುತ್ತಿದ್ದರು.

ಆದ್ದರಿಂದ ಅತ್ಯಂತ ಹಿಂದಿನ ಕಾರ್ಡೆಡ್ ವೇರ್ ಸಂಸ್ಕೃತಿಯ ಸಮಾಧಿಗಳಲ್ಲಿ, ಒಂದು ಮಾದರಿಯದ ಕಾರ್ಡೆಡ್ ವೇರ್ ಸಂಸ್ಕೃತಿಯ ಮಡಿಕೆಗಳು ಇಲ್ಲ. ಅದು ಉತ್ತರ ಯುರೋಪಿನಲ್ಲಿ ನಂತರದಲ್ಲಷ್ಟೇ ಕಾಣಿಸಿಕೊಂಡಿತು, ಮತ್ತು ಅಧ್ಯಯನವು ಕಾರ್ಡೆಡ್ ವೇರ್ ಸಂಸ್ಕೃತಿಯ ಕುಂಬಾರಿಕೆಯು ಬಿಳಿಜೇಡಿಮಣ್ಣನ್ನು ಬಳಸುವ ಕೌಶಲವನ್ನು ಹೊಂದಿದ್ದಂತ ಮಹಿಳೆಯರು ವಲಸೆ ಬರುತ್ತಿದ್ದ ಯಾಮ್ನಾಯ ಸಂಸ್ಕೃತಿಯ ಪುರುಷರನ್ನು ವಿವಾಹವಾದ ನಂತರವೇ ಪ್ರಾರಂಭವಾಯಿತು ಮತ್ತು ಆನಂತರ ಅವರು ಯಾಮ್ನಾಯ ಸಂಸ್ಕೃತಿಯವರ ಚರ್ಮ, ಮರ ಮತ್ತು ನೇಯ್ದ ಧಾರಕಗಳನ್ನು ಅನುಕರಿಸುವಂತ ಬಿಳಿಜೇಡಿಮಣ್ಣಿನಿಂದ ಮಾಡಿದ ಸಾಮಾನುಗಳನ್ನು ತಯಾರಿಸಲು ಪ್ರಾರಂಭಿಸಿದ್ದು ಇದಕ್ಕೆ ಕಾರಣವಾಗಿದೆ ಎಂದು ಹೇಳುತ್ತದೆ. ಅಧ್ಯಯನವು ಈ ಪ್ರತಿಪಾದನೆಗೆ ದೃಢೀಕರಣವು ಮರದಿಂದ ಮಾಡಿದ ಸಣ್ಣ ಪಾದಗಳೊಂದಿಗೆ ಉತ್ತಮವಾಗಿ ಸಂರಕ್ಷಿಸಲ್ಪಟ್ಟ ಚಪ್ಪಟೆ ಬಟ್ಟಲನ್ನು (ಹಾಲನ್ನು ರಾತ್ರೋರಾತ್ರಿ ಮೊಸರು ಅಥವಾ ಇತರ ಡೈರಿ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಬಳಸಬಹುದಾದಂತವು) ಕಂಡುಕೊಂಡ ಪುರಾತತ್ತ್ವದ ಆವಿಷ್ಕಾರಗಳಿಂದ ಬಂದಿದೆ ಎಂದು ಹೇಳುತ್ತದೆ. ಈ ಮರದ ಪಾತ್ರೆಯ ಬಿಳಿಜೇಡಿಮಣ್ಣಿನ ಆವೃತ್ತಿಯು ಯುರೋಪಿನಾದ್ಯಂತ ಕಾರ್ಡೆಡ್ ವೇರ್ ಸಂಸ್ಕೃತಿಯ ಕುಂಬಾರಿಕೆಯ ವಿಶಿಷ್ಟ ಉದಾಹರಣೆ ಆಯಿತು.

ವಲಸೆ ಹೋಗುತ್ತಿರುವ ಜನರು ಮತ್ತು ಅವರ ಸಂಸ್ಕೃತಿಯು ಅಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಜನರು ಮತ್ತು ಅವರ ಸಂಸ್ಕೃತಿಯೊಂದಿಗೆ ತೊಡಗಿಸಿಕೊಳ್ಳುವ ನಿಖರವಾದ ರೀತಿಯು ಸ್ಪಷ್ಟವಾಗಿ ಕಾಲದಿಂದ ಕಾಲಕ್ಕೆ ಮತ್ತು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಆದಾಗ್ಯೂ, ವಲಸಿಗರ ನಡುವೆ ಹಂಚಿಕೊಂಡ ಪದ್ಧತಿಗಳು ಹಾಗೂ ಆಚರಣೆಗಳನ್ನು ಪರಿಗಣಿಸಿದಲ್ಲಿ, ಸ್ಟೆಪ್ ಪ್ರದೇಶದಿಂದ ಯುರೋಪ್ ಮತ್ತು ಭಾರತಕ್ಕೆ ಆದಂತ ಬೃಹತ್ ಪ್ರಮಾಣದಲ್ಲಿನ ವಲಸೆಗಳ ನಡುವೆ ಕೆಲವು ಸಾಮನ್ಯ ಎಳೆಗಳು ಇರಬಹುದು ಎಂದು ಭಾವಿಸಿಕೊಳ್ಳುವುದು ಸಮರ್ಥನೀಯ.

ಉದಾಹರಣೆಗೆ, 'ಸರಸ್ವತಿಕಾಂತಾಭರಣ' (ಸರಸ್ವತಿಯ ಹಾರ) ದ ಕಾವ್ಯಾತ್ಮಕ ಹಾಗೂ ಅಲಂಕಾರ ಶಾಸ್ತ್ರ ರಚನೆಗಳಿಗೆ ಸಂಸ್ಕೃತದ ಬಳಕೆಯ ಕುರಿತಾದ ಸಾಮಾನ್ಯ ಯುಗ (CE) ಹನ್ನೊಂದನೇ ಶತಮಾನದ ರಾಜ ಭೋಜನ ಶಾಸ್ತ್ರಗಂಥವು ಹೇಳುವುದು ಏನೆಂದರೆ, 'ಸಂಸ್ಕೃತಿಯಿಲ್ಲದವರ ಭಾಷೆಯನ್ನು ಯಜ್ಞ ವಿಧಿಗಳಲ್ಲಿ ಬಳಸಬಾರದು (ತೋರಿಸಬಾರದು);

ಮಹಿಳೆಯರೊಂದಿಗೆ ಪ್ರಾಕೃತವನ್ನು ಹೊರತುಪಡಿಸಿ ಬೇರೇ ಯಾವ ಭಾಷೆಯಲ್ಲಿಯೂ ಮಾತನಾಡುವುದನ್ನು; ಇಲ್ಲಾ ಉದಾತ್ತ ಜನರೊಂದಿಗೆ ಮಿಶ್ರ ಭಾಷೆಯಲ್ಲಿ ಮಾತನಾಡುವುದನ್ನು, ಇಲ್ಲಾ ಅವಿದ್ಯಾವಂತರೊಂದಿಗೆ ಸಂಸ್ಕೃತದಲ್ಲಿ ಮಾತನಾಡುವುದನ್ನು ಯಾರಿಗೂ ತೋರಿಸಬಾರದು.’[10]

ಸ್ತ್ರೀಯರೊಂದಿಗೆ ಯಾರಾದರೂ ಪ್ರಾಕೃತ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಯಲ್ಲಿ ಮಾತನಾಡುವುದನ್ನು ತೋರಿಸುವ ಕಾವ್ಯಾತ್ಮಕ ರಚನೆಗಳ ವಿರುದ್ಧ ಇದ್ದ ತಡೆಯಾಜ್ಞೆಯು ಪ್ರಾಯಶಃ ವಾಸ್ತವಿಕತೆಯನ್ನು ಪ್ರತಿಬಿಂಬಿಸಬೇಕೆಂಬ ಕಾಳಜಿಯಿಂದ ರೂಪುಗೊಂಡ ಒಂದು ಗಡಸುಗಟ್ಟಿದ ಸಂಪ್ರದಾಯವಾಗಿರಬಹುದು, ಏಕೆಂದರೆ ಮಹಿಳೆಯರು ಅನೇಕವೇಳೆ ವಲಸೆಗಳ ಆರಂಭಿಕ ಅವಧಿಯಲ್ಲಿ ಅವರು ವಿವಾಹಿತರಾಗಿದ್ದ ಸ್ಟೆಪ್ ಪ್ರದೇಶದಿಂದ ಬಂದ ‘ಕುಲೀನ’ ಅಥವಾ ‘ಆರ್ಯ’ ಪುರುಷರ ಭಾಷಾ ಸಂಸ್ಕೃತಿಗೆ ಭಿನ್ನವಾದಂತ ‘ಆರ್ಯೇತರ’ ಭಾಷಾ ಸಂಸ್ಕೃತಿಗೆ ಸೇರಿದ್ದಿರಬಹುದು ಎಂಬ ಕಾರಣಕ್ಕೆ.

## ಏಕ-ಮೂಲಾದ ನಾಗರಿಕತೆಯಲ್ಲ ಬದಲಿಗೆ ಬಹು-ಮೂಲದ ನಾಗರಿಕತೆ

ಭಾರತ ಮತ್ತು ಯುರೋಪ್ ದೇಶಗಳೆರಡರಲ್ಲೂ, ಇಂಡೋ-ಯೂರೋಪಿಯನ್ ಭಾಷಾ ಭಾಷಿಕರು ಅಂತಿಮ ವಲಸಿಗರಾಗಿದ್ದು ಅವರು ಜನಸಂಖ್ಯೆಯ ರೂಪರೇಷೆಯನ್ನು ಬದಲಾಯಿಸಲು ಸಾಕಷ್ಟು ಮಹತ್ವ ಪ್ರಮಾಣದಲ್ಲಿದ್ದರು. ಆ ನಂತರ ಭಾರತವು ಅನೇಕ ಅನಿರೀಕ್ಷಿತ ಆಕ್ರಮಣಗಳನ್ನು ಕಂಡಿದೆ – BCE 326ರಲ್ಲಿ ಅಲೆಕ್ಸಾಂಡರ್‌ನ ಸೇನೆಯಿಂದ ಹಿಡಿದು BCE 150ರ ಸುಮಾರಿಗೆ ಅಲೆಮಾರಿ ಪಶುಪಾಲಕ ಬುಡಕ್ಕಟ್ಟು ಜನರಾದ ಸಾಕಾ ಅಥವಾ ಸಿಥಿಯನ್ನರು (Scythians), CE 450ರ ವೇಳೆಗೆ ಹನ್ಸ್ ಆದಿವಾಸಿ ಕುಲದವರು, CE 710ರಲ್ಲಿ ಅರಬ್ಬರು, CE 1526ರಲ್ಲಿ ಮೊಘಲರು, ಮತ್ತು ನಂತರ ಪೋರ್ಚುಗೀಸ್, ಫ್ರೆಂಚ್, ಡಚ್ ಮತ್ತು ಬ್ರಿಟಿಷ ವರೆಗೆ – ಆದರೆ ಅವು ಯಾವುವೂ ನಮ್ಮ ಜನಸಂಖ್ಯೆಯ ಮೇಲೆ ಒಂದು ಅಸ್ಪಷ್ಟವಾದ ಮತ್ತು ಸಣ್ಣ ಗುರುತಿಗಿಂತ ಹೆಚ್ಚೇನೂ ಬಿಟ್ಟಿಲ್ಲವಾದರೂ ಅನೇಕವೇಳೆ  ನಮ್ಮ ಸಂಸ್ಕೃತಿಯ ಮೇಲೆ ಅವು ಬೀರಿದ ಪರಿಣಾಮವು ಬಹುಮಟ್ಟಿಗೆ ದೊಡ್ಡದಾಗಿದೆ. ಇದನ್ನು ನಾವು ಈಗ ಡಿಎನ್‌ಎ ಮತ್ತು ತಳಿಶಾಸ್ತ್ರವಿಜ್ಞಾನದಿಂದ ಖಚಿತವಾಗಿ ಹೇಳಬಹುದು. ಮತ್ತು ಭವಿಷ್ಯದಲ್ಲಿಯೂ ಯಾವುದೇ ವಲಸೆ ಅಥವಾ ಆಕ್ರಮಣವು ನಮ್ಮ ಜನಸಂಖ್ಯೆ ಸ್ವರೂಪವನ್ನು ಬದಲಾಯಿಸುವ ಸಾಧ್ಯತೆ ಇಲ್ಲ. ಆದ್ದರಿಂದ ಈ ಅಧ್ಯಾಯದ ಶೀರ್ಷಿಕೆ: ಅಂತಿಮ ವಲಸಿಗರು. ನಮ್ಮ ಸಾಮಾನ್ಯ ಇತಿಹಾಸವು ಒಂದು ವಿಶಿಷ್ಟ ಸಂಸ್ಕೃತಿಯನ್ನು ನಿರ್ಮಿಸುವುದರ ಬಗ್ಗೆ ಆಗಿದ್ದು ಅದು ಅದರ ಅಂಶಗಳನ್ನು ಅನೇಕ ಪರಂಪರೆಗಳು ಮತ್ತು ಅನುಭವಗಳಿಂದ ಪಡೆದಿದೆ. ನಾವು ಏಕ-ಮೂಲದ ನಾಗರಿಕತೆಯಲ್ಲ ಬದಲಿಗೆ ಬಹು-ಮೂಲದ ನಾಗರಿಕತೆ.

ಕೊನೆಯ ವಲಸಿಗರಾದ ‘ಆರ್ಯರು’ BCE 2000ರ ನಂತರದ ಅವಧಿಯಲ್ಲಿ ಎಂದೋ ಭಾರತ ಉಪಖಂಡಕ್ಕೆ ಬರುವ ವೇಳೆಗೆ, ಭೂಮಂಡಲದಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಗಳಲ್ಲಿ ಭಾರತೀಯರು ಆಗಲೇ ಅತಿ ದೊಡ್ಡ ಆಧುನಿಕ ಮಾನವ ಜನಸಂಖ್ಯೆಯಲ್ಲಿದ್ದರು (ಎಲ್ಲಕಿಂತ ದೊಡ್ಡದಾಗಿರದಿದ್ದರೂ); ಅವರು ಆಗಲೇ ಕೃಷಿ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಮುನ್ನಡೆಸಿದ್ದರು ಮತ್ತು ನಂತರ ನಗರ ಸಂಬಂಧಿ ಕ್ರಾಂತಿಯನ್ನು ಮುನ್ನಡೆಸಿದ್ದು ಅದು ಆ ಕಾಲದ ಅತಿ ದೊಡ್ಡ ನಾಗರಿಕತೆಯನ್ನು ನಿರ್ಮಿಸುವುದರಲ್ಲಿ ಪರಿಣಮಿಸಿತ್ತು;  ಮತ್ತು ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ಕೃಷಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರೆಡೆಗಿನ ಪರಿವರ್ತನೆಯ ಮುಂಚೂಣಿಯಲ್ಲಿದ್ದರು. ಆದ್ದರಿಂದ, ಭಾರತದ ಬುನಾದಿಯನ್ನು, ನಮಗೆ ಅದು ತಿಳಿದಿರುವಂತೆ, ಹರಪ್ಪಾ ನಾಗರಿಕತೆಯ ಕಾಲಾವಧಿಯಲ್ಲಿಯೇ ಹಾಸಲಾಯಿತು ಎಂದು ಹೇಳುವುದು ಸರಿಯೆನಿಸುವುದು.

ಹರಪ್ಪಾ ನಾಗರಿಕತೆಯು ಕ್ಷೀಣಿಸಿದ ನಂತರದ ಸುಮಾರು ಸಾವಿರ ವರ್ಷಗಳ ಅವಧಿಯು ದಕ್ಷಿಣ ಏಷ್ಯಾದ ಆಧುನಿಕ ಮಾನವನ ಇತಿಹಾಸದಲ್ಲೇ ಅತ್ಯಂತ ಅವ್ಯವಸ್ಥೆಯ ಮತ್ತು ಕೋಲಾಹಲಕರದ ಕಾಲವಾಗಿದ್ದಿರಬಹುದು. ಆದರೆ ಈ ಅವಧಿಯ ಕುರಿತು ನಮಗಿರುವ ದಾಖಲಾತಿಗಳು ಅತ್ಯಲ್ಪವಷ್ಟೇ ಮತ್ತು ಆದ್ದರಿಂದ ಅದರ ಬಗ್ಗೆ ತಿಳುವಳಿಕೆಯು ಬಹಳ ಸೀಮಿತವಾಗಿದೆ.

ನಡೆದಿದ್ದೆಲ್ಲವನ್ನೂ ನೋಡಿ: ಆ ಕಾಲದಲ್ಲಿ ಅದುವೇ ಅತಿ ದೊಡ್ಡದಾದ ಮತ್ತು ದೀರ್ಘಕಾಲ ಉಳಿದಂತ ನಾಗರಿಕತೆಯೊಂದು ದೀರ್ಘಕಾಲದ ಬರಗಾಲದ ದುಷ್ಪರಿಣಾಮಗಳ ಕಾರಣ ಕುಸಿದುಹೋಯಿತು, ಮತ್ತು ಅದರ ಪ್ರಭಾವ ಮತ್ತು ಪ್ರತಿಷ್ಠೆಯ ಅತ್ಯಂತ ಸ್ಪಷ್ಟವಾದ ಪ್ರತೀಕಗಳು ಸ್ವತಃ ನಾಗರತೆ (urbanism) ಕಣ್ಮರೆಯಾದಂತೆ ನಿಧಾನವಾಗಿ ಅಳಿದುಹೋದವು; ಜನರು ಹೊಸ ಜೀವನದ ಹುಡುಕಾಟದಲ್ಲಿ ಪೂರ್ವ ಮತ್ತು ದಕ್ಷಿಣಕ್ಕೆ ವಲಸೆ ಹೋದರು; ಅವರೊಂದಿಗೆ ಹೊಸ ಭಾಷೆಗಳನ್ನು ಮತ್ತು ಯಜ್ಞಕರ್ಮಗಳಿಗೆ ಹೆಚ್ಚು ಒತ್ತು ನೀಡುವ ಮತ್ತು ನಗರ ನೆಲಸೆಗಳಿಗಿಂತ ಪಶುಪಾಲನಾ ಜೀವನಶೈಲಿ ಹಾಗೂ ಪಶು ಸಾಕಣೆಗೆ ಹೆಚ್ಚು ಆದ್ಯತೆ ನೀಡುವಂತ ಭಿನ್ನವಾದ ಸಂಸ್ಕೃತಿಯನ್ನು ತಂದ ಹೊಸ ವಲಸಿಗರ ಗುಂಪುವೊಂದು ಉತ್ತರ-ಪಶ್ಚಿಮದಿಂದ ಬಂದಿತು; ಅವರೊಂದಿಗೆ ಹೊಸ ಭಾಷೆಗಳನ್ನು, ಬೆಳೆಸಿದ ಹೊಸ ಸಸ್ಯಗಳು ಮತ್ತು ಬಹುಶಃ ತೇವಭೂಮಿಯ ಕೃಷಿ ವಿಧಾನಗಳು ಹಾಗೂ ಹೊಸದೊಂದು ಅಕ್ಕಿಯ ತಳಿಯನ್ನು ತಂದ ಮತ್ತೊಂದು ವಲಸಿಗರ ಗುಂಪು ಉತ್ತರ-ಪೂರ್ವದಿಂದ ಬಂದಿತು . . . ಮತ್ತು ಹೀಗೆ, ಹಲವು ಶತಮಾನಗಳಲ್ಲಿ, ವೈವಿಧ್ಯಮಯವಾದ ಮತ್ತು ಪ್ರತ್ಯೇಕವಾದ ಗುಂಪುಗಳನ್ನು ಒಳಗೊಂಡ್ಡಿದ್ದಂತ ಭಾರತದ ಉಪಖಂಡದ ಸಂಸ್ಕೃತಿಯು, ಐತಿಹಾಸಿಕ ಪರಿವರ್ತನೆಗಳ ಪರಿಣಾಮವಾಗಿ ವೇಗವರ್ಧನೆಗೊಂಡಂತ ಸಂಸ್ಕೃತಿಗಳ ಬೆರೆಯುವಿಕೆ, ವಲಸೆ, ಮತ್ತು ಪರಸ್ಪರಾನುಕ್ರಿಯೆಯ ಪ್ರಕ್ರಿಯೆಗಳು ಅಂತಿಮವಾಗಿ ಬೆಸೆದುಕೊಂಡಿರುವಂತ ಸಾಂಸ್ಕೃತಿಕ ಅಸ್ಮಿತೆಯೊಂದನ್ನು ಸೃಷ್ಟಿಸಿತು. ನಾಲ್ಕು ಸಾವಿರ ವರ್ಷಗಳ ನಂತರವೂ ಅದು ಅಪರೂಪಕ್ಕೊಮ್ಮೆ ಯೆಹೂದ್ಯರಿಂದ ಹಿಡಿದು ಸಿರಿಯನ್ನರು, ಪಾರ್ಸಿಗಳಂತಹ ಹೊಸ ಸಂಸ್ಕೃತಿಗಳನ್ನು ಸೇರಿಸಿಕೊಳ್ಳುತ್ತಾ ರೂಪುಗೊಳ್ಳುತ್ತಲೇ ಇದೆ.

---

1. I. Mendizabel, et al., 'Reconstructing the Indian Origin and Dispersal of the European Roma: A Maternal Genetic Perspective', *PLOS One* (January 2011).
2. ಆಫ್ರಿಕಾದಲ್ಲಿ mtDNA ಹ್ಯಾಪ್ಲೋಗ್ರೂಪ್ M1 ನ ಇರುವಿಕೆಯು ಏಷ್ಯಾದಿಂದ ನಡೆದ ಹಿಮ್ಮುಖ ವಲಸೆಯ ಪರಿಣಾಮವೆಂದು ಪರಿಗಣಿಸಲಾಗಿದೆ.
3. Michael Witzel, Wales professor of Sanskrit at Harvard University and an authority on the oldest texts of India, dates the Rigveda between 1400 BCE and 1000 BCE (D.N.Jha, 'Mitanni Indo-Aryan Mazda and the Date of the Rigveda', in The Complex Heritage of Early India, Essays in Memory of R.S. Sharma [Manohar Publications, 2014]).
4. ಇಂಡೋ-ಇರಾನಿಯನ್ ಎಂಬಂತವರು ತಮ್ಮನ್ನು 'ಆರ್ಯರು ' ಎಂದು ಕರೆದುಕೊಂಡ ಮತ್ತು ದಕ್ಷಿಣ ಏಷ್ಯಾದ ಕಡೆಗೆ ವಲಸೆ ಹೋದ, ಅಂತಿಮವಾಗಿ ಇರಾನ್ ಮತ್ತು ಭಾರತದಲ್ಲಿ ನೆಲೆಸಿದಂತ ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡುವ ಆ ಸ್ಟೆಪ್ ಹುಲ್ಲುಗಾವಲಿನ ಪಶುಪಾಲಕರ ಒಂದು ಶಾಖೆಗೆ ಸೇರಿದ್ದಾರೆ. ಜ಼ರಥುಷ್ಟ್ರ ಧರ್ಮದ ಪ್ರಮುಖ ಧಾರ್ಮಿಕ ಗ್ರಂಥವಾದ ಝೆಂಡ್-ಅವೆಸ್ತಾ ದಲ್ಲಿ ಚಿತ್ರಿಸಿರುವ ಅವರ ಸಂಸ್ಕೃತಿ ಮತ್ತು ಪೌರಾಣಿಕ ಕಥೆಗಳು, ಮತ್ತು ಸಂಸ್ಕೃತ ವೇದಗಳಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದವು ಅನೇಕ ರೀತಿಗಳಲ್ಲಿ ಸಾಮ್ಯತೆಯನ್ನು ಹೊಂದಿವೆ.
5. Liviu Giosan, et al., 'Fluvial Landscapes of the Harappan Civilization', *PNAS* (2012).
6. ಹೆಚ್ಚುವರಿ ಸಾಕ್ಷ್ಯಾಧಾರಗಳ ಆಧಾರದ ಮೇಲೆ, ಸರ್ ರಾಬರ್ಟ್ ನಂತರದಲ್ಲಿ ಇಂದ್ರನನ್ನು ನಿರ್ದೋಷಿ ಎಂದು ಘೋಷಿಸಿದರು.
7. Translation by Ralph T.H. Griffith.
8. ಪ್ರೊಫೆಸರ್ ವಿಟ್ಜೆಲ್ ಅವರ ಪ್ರಕಾರ, ಕಬ್ಬಿಣವು ಭಾರತದ ಉಪಖಂಡದ ವಾಯುವ್ಯ ಭಾಗದಲ್ಲಿ ('ಆರ್ಯ' ವಲಸಿಗರು ಮೊದಲಿಗೆ ವಾಸಿಸಿದ ಪ್ರದೇಶ) BCE 1000ರ ಸುಮಾರಿಗೆ ಮಾತ್ರ ಕಾಣಿಸಿಕೊಳ್ಳುವುದರಿಂದ, ಋಗ್ವೇದವು ಆ ಕಾಲದಲ್ಲಿಯೇ ರಚನೆಯಾಗಿರಬಹುದು.

9. ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ವಿಟ್ಜೆಲ್ ಅವರ ಪ್ರಕಾರ, ಮೂರ್ಧನ್ಯ ವ್ಯಂಜನಗಳು ಉತ್ತರ-ಪಶ್ಚಿಮ ಭಾರತದ 'ಅಂತರ-ಭಾಷಾ ಕುಟುಂಬ ಲಕ್ಷಣ' ವಾಗಿದ್ದು, ಅವು ದ್ರಾವಿಡ ಭಾಷೆಗಳ ಹೊರತಾಗಿ, ಖೋಟಾನೀಸ್ ಸಾಕಾ ಮತ್ತು ವಾಹೀ ಎಂಬ ಪೂರ್ವ ಇರಾನಿಯನ್ ಭಾಷೆಗಳಲ್ಲಿ ಹಾಗೂ ಬೇರೆ ಯಾವುದೇ ಭಾಷೆಗಳಿಗೆ ಸಂಬಂಧ ಹೊಂದಿರದಂತ ಪ್ರತ್ಯೇಕ ಭಾಷೆಯಾದ ಬರುಷಾಸ್ಕಿ ಭಾಷೆಯಲ್ಲಿ ಕಂಡುಬರುತ್ತದೆ. ಅವರು ಋಗ್ವೇದವು ಇತರ ಭಾಷೆಗಳಿಂದ ಎರವಲು ಪಡೆದ ಸುಮಾರು 300 ಪದಗಳಲ್ಲಿ ಕೆಲವು ಪದಗಳು ಮಾತ್ರ ದ್ರಾವಿಡ ಮೂಲದವುಗಳಾಗಿವೆ ಎಂದು ಸಹ ಸೂಚಿಸುತ್ತಾರೆ.
10. Sheldon Pollock, *The Language of the Gods in the World of Men* (Permanent Black, 2006).